
ಗೌರಿ ಲಂಕೇಶರ

ಲಂಕೇಶ್


ಆಗಸ್ಟ್ 23, 2006 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



ಚೆನ್ನೈ ಕೋರ್ಟ್ ಛೀಮಾರಿ!

ಬೆಂಗಳೂರು-ಮೈಸೂರಿನಲ್ಲಿ
ಸೊಸೆಯ ದಿನಕ್ಕೊಂದು ಭೂ ಖರೀದಿ

300 ಎಕರೆ!



ಕಾಮ್ರೇಡ್ ಶ್ರೀರಾಮರೆಡ್ಡಿ ಖಯಾಲಿಗಳು

ಸುನೀಲ್ ಹೆಗ್ಗರವಳ್ಳಿಯ 'ಕ್ರೈಂ ಡೈರಿ'





ರೆಡ್ಡಿ ಸುತ್ತ ಗೂಢಚಾರರು!

ಭಾರತದ ನೀರೇ ವಿಷ ಎನ್ನುತ್ತಿರುವ ಕೋಲಾ ಕಂಪನಿಗಳು:



ಮನಸ್ಸಿನಲ್ಲಿ ಲಾಭದ ವಿಷವಿಟ್ಟುಕೊಂಡು ವಿಷವನ್ನೇ ಕೋಲಾಗಳ ಹೆಸರಲ್ಲಿ ಮಾರಿ ಲಾಭ ಸೂರೆ ಹೊಡೆಯುತ್ತಿರುವ ಪೆಪ್ಸಿ ಮತ್ತು ಕೊಕೋಕೋಲ ಕಂಪನಿಗಳು ಈಗ "ವಿಷವಿರುವುದು ನಮ್ಮಲ್ಲಲ್ಲ, ಭಾರತದ ನೀರೇ ವಿಷ. ನಾವೇನು ಮಾಡೋಣ" ಎನ್ನುತ್ತಿವೆ. ಸರ್ಕಾರಗಳು ಕೋಲಾ ಕಂಪನಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಸೂಚನೆ ತೋರಿದಾಗಲೂ ಅವೇನೂ ಅದರ ಬಗ್ಗೆ ಅಷ್ಟು ತಲೆಕೆಡಿಸಿಕೊಳ್ಳಲಿಲ್ಲ. ಏಕೆಂದರೆ ಸರ್ಕಾರಕ್ಕೆ ಹೇಗೆ ತಮ್ಮ ತಿಳುವಳಿಕೆಯ ವಿಷ ತಿನ್ನಿಸಬೇಕೆಂದು ಅವರಿಗೆ ಗೊತ್ತಿತ್ತು. ಆದ್ದರಿಂದಲೇ ಸರ್ಕಾರವೂ ಸಹಾ ಕೋಲಾಗಳು ಅತ್ಯಂತ ಕಡಿಮೆ ಮಾರಾಟವಾಗುವ ಆಸ್ಪತ್ರೆ, ನಿಲ್ದಾಣಗಳಲ್ಲಿ ಇವನ್ನು ಬ್ಯಾನ್ ಮಾಡುತ್ತಿವೆಯೇ ವಿನಃ ಸಂಪೂರ್ಣವಾಗಿ ಮಾರುಕಟ್ಟೆಯಿಂದೇನೂ ಅಲ್ಲ.

ಆದರೆ ಈ ಕಂಪನಿಗಳು ತಲೆ ಕೆಡಿಸಿಕೊಳ್ಳುತ್ತಿರುವುದು ಸಾರ್ವಜನಿಕರ ಅಭಿಪ್ರಾಯ ಅವರ ವಿರುದ್ಧ ತಿರುಗುತ್ತಿರುವುದರ ಬಗ್ಗೆ ಹಾಗೂ ಮಾಧ್ಯಮಗಳು ಅವರ ವಿರುದ್ಧ ಪ್ರಚಾರ ಮಾಡುತ್ತಿರುವ ಬಗ್ಗೆ. ಹೀಗಾಗಿ ಮಾಧ್ಯಮಗಳನ್ನು ತಮ್ಮ ಪರವಾಗಿ ಒಲಿಸಿಕೊಳ್ಳಲು ತಮ್ಮ ಪರವಾದ ಉದ್ದುದ್ದನೇ ಜಾಹೀರಾತುಗಳನ್ನು ನೀಡುತ್ತಿವೆ. ಜಾಹೀರಾತಿನ ಮೇಲೆಯೇ ನಡೆಯುವ ಮಾಧ್ಯಮಗಳು ಇನ್ನೂ ಎಷ್ಟು ದಿವಸ ಕೋಲಾ ವಿರುದ್ಧ ತಮ್ಮ ಸಮರ ಮುಂದುವರೆಸುತ್ತವೆ ಎಂದು ಹೇಳಲು ಬರುವುದಿಲ್ಲ. ಇನ್ನು ಜನಃ ಅವರನ್ನು ಮರುಳುಗೊಳಿಸಲು ಈ ಕಂಪನಿಗಳು ಬರೀ ಸುಳ್ಳಿನಿಂದಲೇ ಕೂಡಿರುವ ಹಲವು ವಾದಗಳನ್ನು ಮುಂದಿಡುತ್ತಿವೆ.

ಅದರಲ್ಲಿ ಒಂದು ಅತಿ ಮುಖ್ಯವಾದ ಸುಳ್ಳೆಂದರೆ ತಾವೇನೂ ಕೋಲಾಗಳಿಗೆ ಕ್ರಿಮಿನಾಶಕಗಳನ್ನು ಬೆರೆಸುವುದಿಲ್ಲ. ಆದರೆ ಅದನ್ನು ತಯಾರಿಸಲು ತಾವು ಬಳಸುವ ಭಾರತದ ಅಂತರ್ಜಲದಲ್ಲಿಯೇ ಕ್ರಿಮಿನಾಶಕಗಳಿವೆ. ತಾವೇನು ಮಾಡಲು ಸಾಧ್ಯ ಎಂದು ಕೇಳುತ್ತಿವೆ. ಈ ರೀತಿ ಅಂತರ್ಜಲದಲ್ಲಿ ಕ್ರಿಮಿನಾಶಕ ಬೆರೆತುಕೊಳ್ಳಲು ಕಾರಣ ಭಾರತದ ರೈತರು ಕೃಷಿಗೆ ಬಳಸುವ ಕ್ರಿಮಿನಾಶಕಗಳು. ಅವು ಕ್ರಮೇಣ ಅಂತರ್ಜಲ ಸೇರುತ್ತವೆ ಎಂದು ಅವು ವಾದಿಸುತ್ತಿವೆ.

ಮೇಲ್ನೋಟಕ್ಕೆ ಈ ವಾದದಲ್ಲಿ ಏನೂ ತಪ್ಪಿಲ್ಲ. ಕೋಲಾಗಳು ಕ್ರಿಮಿನಾಶಕಗಳನ್ನು ಸೇರಿಸುವುದೂ ಇಲ್ಲ ಹಾಗೂ ಅವು ಬಳಸುವ ಅಂತರ್ಜಲದಲ್ಲಿಯೇ ಕ್ರಿಮಿನಾಶಕಗಳಿರುವುದೂ ನಿಜವೇ. ಅದಕ್ಕೆ ನಮ್ಮ ರೈತರು ಕೃಷಿಗೆ ಬಳಸುವ ಕ್ರಿಮಿನಾಶಕಗಳೇ ಕಾರಣವೆಂಬುದೂ ನಿಜವೇ.

ಆದರೆ ಇವೆಲ್ಲ ಸತ್ಯದ ಒಂದು ಮುಖ ಮಾತ್ರ. ಇದರಲ್ಲಿ ಇಡಿ ಭಾರತದ ಜನತೆಯಿಂದ ಕೋಲಾಗಳು ಮುಚ್ಚಿಡುತ್ತಿರುವ ವಾದವೊಂದಿದೆ.

ಭಾರತದ ರೈತರು ಹೆಚ್ಚು ಕ್ರಿಮಿನಾಶಕಗಳನ್ನು ಬಳಸುವುದರಿಂದಲೇ ಕೋಲಾ ಬಾಟಲಿಗಳಲ್ಲೂ ಹೆಚ್ಚು ಕ್ರಿಮಿನಾಶಕಗಳು ಸೇರಿಕೊಳುತ್ತಿವೆ ಎಂದಾದಲ್ಲಿ ಯೂರೋಪಿನ ದೇಶಗಳಲ್ಲಿ ಮಾರಾಟವಾಗುತ್ತಿರುವ ಇದೇ ಕೋಲಾ ಕಂಪನಿಯ ಬಾಟಲಿಗಳಲ್ಲಿ ಕನಿಷ್ಟ ಇಪ್ಪತ್ತು ಪಟ್ಟು ಹೆಚ್ಚು ಕ್ರಿಮಿನಾಶಕಗಳು ಸೇರಿಕೊಳ್ಳಬೇಕಾಗಿತ್ತು. ಏಕೆಂದರೆ ಭಾರತದ ರೈತ ಒಂದು ಹೆಕ್ಟೇರ್ ಪ್ರದೇಶಕ್ಕೆ ಅಬ್ಬಬ್ಬಾ ಎಂದರೆ 450ಗ್ರಾಮ್ ಕ್ರಿಮಿನಾಶಕ ಬಳಸುತ್ತಾನೆ. ಅದಕ್ಕಿಂತ ಹೆಚ್ಚು ಬಳಸಬೇಕೆಂದರೂ ಆತನ ಬಳಿ ಅದನ್ನು ಕೊಳ್ಳಲು ಹಣವಿರುವುದಿಲ್ಲ. ಆದರೆ ಅದೇ ಯೂರೋಪಿನಲ್ಲಿ ರೈತ ಪ್ರತಿ ಹೆಕ್ಟೇರಿಗೆ ಸರಾಸರಿ 4550ಗ್ರಾಂ ಕ್ರಿಮಿನಾಶಕ ಬಳಸುತ್ತಾನೆ. ಅಂದರೆ ಭಾರತದ ರೈತನಿಗಿಂತ 10 ಪಟ್ಟು ಹೆಚ್ಚು... ಅದರಲ್ಲೂ ಹಾಲೆಂಡ್ ದೇಶದಲ್ಲಿ ರೈತರು ಪ್ರತಿ ಹೆಕ್ಟೇರಿಗೆ 10000ಗ್ರಾಂ ಕ್ರಿಮಿನಾಶಕ ಬಳಸಿದರೆ, ಜಪಾನಿನಲ್ಲಿ 12000ಗ್ರಾಂ ಬಳಸುತ್ತಾರೆ. ಅಂದರೆ ಭಾರತದ ರೈತ ಬಳಸುವುದಕ್ಕಿಂತ 20ರಿಂದ 25 ಪಟ್ಟು ಹೆಚ್ಚು ಅಲ್ಲೂ ಸಹ ಸಹಜ ಪ್ರಾಕೃತಿಕ ಪ್ರಕ್ರಿಯೆಯಾಗಿ ಕ್ರಿಮಿನಾಶಕಗಳು ಅಂತರ್ಜಲ ಸೇರುತ್ತವೆ. ಅಲ್ಲಿರುವ ಇದೇ ಕೋಲಾ ಕಂಪನಿಗಳು ಇದೇ ಅಂತರ್ಜಲವನ್ನು ಬಳಸಿಯೇ ಕೋಲಾ ತಯಾರಿಸುತ್ತವೆ. ಆದರೆ ಅಲ್ಲಿನ ಕೋಲಾ ಬಾಟಲಿನಲ್ಲಿರುವ ಕ್ರಿಮಿನಾಶಕಗಳು ಭಾರತದಲ್ಲಿ ಇರುವುದಕ್ಕಿಂತ 20 ಪಟ್ಟು ಕಡಿಮೆ ಇರುತ್ತವೆ. ಅಂದರೆ ಭಾರತ ರೈತ ಬಳಸುವುದಕ್ಕಿಂತ 20 ಪಟ್ಟು ಹೆಚ್ಚು ಕ್ರಿಮಿನಾಶಕ ಬಳಸಿದರೂ ಅಲ್ಲಿ ಮಾತ್ರ ಕೋಲಾ ಬಾಟಲಿನಲ್ಲಿ ಕ್ರಿಮಿನಾಶಕಗಳು ಏಕಿರುವುದಿಲ್ಲ? ಏಕೆಂದರೆ ಈ ಕೋಲಾ ಕಂಪನಿಗಳು ಆ ದೇಶಗಳಲ್ಲಿ ಅಂತರ್ಜಲ ತೆಗೆದಾಗ ಅದರಲ್ಲಿರುವ ಕ್ರಿಮಿನಾಶಕಗಳನ್ನು ಸಂಪೂರ್ಣವಾಗಿ ತೆಗೆಯಬೇಕಾದ ಕಡ್ಡಾಯಕ್ಕೆ ಒಳಗಾಗಿರುತ್ತವೆ. ಅಲ್ಲಿ ಅದನ್ನು ಕಡ್ಡಾಯ ಮಾಡುವ ಕಾನೂನುಗಳಿರುತ್ತವೆ. ನಮ್ಮಲ್ಲಿ ಅಂತಹ ಸರ್ಕಾರವೂ ಇಲ್ಲ, ಕಾನೂನೂ ಇಲ್ಲ. ಬದಲಿಗೆ ಈ ಕೋಲಾ ಕಂಪನಿಗಳು ವಿದೇಶಿ ಬಂಡವಾಳ ತರುತ್ತವೆ ಎಂಬಂತಹ ಏಕೈಕ ಕಾರಣವನ್ನು ತೋರಿಸಿ ಎಲ್ಲಾ ಬಗೆಯ ಸಬ್ಸಿಡಿ ಕೊಡುವ ಸರ್ಕಾರಗಳಿರುತ್ತವೆ. ಕ್ರಿಮಿನಾಶಕಗಳನ್ನು ನಿವಾರಿಸಿಕೊಳ್ಳಬಹುದು....ಇಂತಹ ಜನಘಾತುಕ ಸರ್ಕಾರಗಳನ್ನು, ಲಾಭಕೋರ ಕೋಲಾ ಕಂಪನಿಗಳನ್ನು ನಿವಾರಿಸಿಕೊಳ್ಳುವುದು ಹೇಗೆ?

ಚಾರ್ವಾಕ

- ಶಿವಸುಂದರ್-

No Comments

"ಒಂದು ನಗರಸಭಾ ಚುನಾವಣೆಯನ್ನೂ ಗೆಲ್ಲ... ಏಕೈಕ ಪ್ರಧಾನಿ ಮನಮೋಹನ್ ಸಿಂಗ್ ಮಾತ್ರ"

-ನಟವರ್ ಸಿಂಗ್

ಕಾಂಗ್ರೆಸ್ಸಿನಿಂದ ಉಚ್ಚಾಟಿತರಾದ ನಂತರ



"ದಕ್ಷತೆಯ ಪರೀಕ್ಷೆಯಲ್ಲಿ ಎಲ್ಲಾ ಬಿ.ಜೆ.ಪಿ. ಮಂತ್ರಿಗಳ ಕಾರ್ಯನಿರ್ವಹಣೆ ಅತ್ಯುತ್ತಮವಾಗಿದೆ"

-ವೆಂಕಯ್ಯನಾಯ್ಡು


ಪಂಚತಾರಾ ರೆಸಾರ್ಟಿನಲ್ಲಿ ಪರೀಕ್ಷೆಯ ನಾಟಕದ ನಂತರ

"ದೇವೇಗೌಡರ ಆಸ್ತಿಯನ್ನೆಲ್ಲಾ ಖರೀದಿಸುವ ಸಾಮರ್ಥ್ಯ ನನಗಿದೆ"

-ಅಶೋಕ್ ಖೇಣಿ


ನೈಸ್ ಕಂಪನಿಯ ಮಾಲೀಕ

ನಂಬಿದ್ರೆ ನಂಬಿ ಬಿಟ್ರೆ ಬಿಡಿ:



"ಸರ್ವೋದಯ ಪಕ್ಷದಿಂದ ತೃತೀಯ ರಂಗಕ್ಕೆ ಚಾಲನೆ"

-ದೇವನೂರು ಮಹಾದೇವ




"ಈ ಸರ್ಕಾರದ ಅಳಿವು-ಉಳಿವು ನನ್ನ ಕೈಯಲ್ಲಿಲ್ಲ"

-ದೇವೇಗೌಡ

"ಜಾತ್ಯತೀತತೆಯ ವಿಷಯದಲ್ಲಿ ಗೌಡರು ಬದಲಾಗಿಲ್ಲ"

-ಜಾಫರ್ ಶರೀಫ್

ವಾರದ ಘೋಷಣೆ:



"ಪಾಶ್ಚಿಮಾತ್ಯ ರಾಷ್ಟ್ರಗಳು ನಮ್ಮ ನಾಗರಿಕ ಅಣುಶಕ್ತಿ ಯೋಜನೆಯ ಮೇಲೂ ಒತ್ತಡ ಮುಂದುವರೆಸಿದರೆ ನಾವು ಅಣ್ವಸ್ತ್ರ ಪ್ರಸರಣ ತಡೆ ಒಪ್ಪಂದ (NPT)ದಿಂದಲೂ ಹಿಂದೆ ಸರಿಯಬೇಕಾಗುತ್ತದೆ"

-ಅಹಮದಿನೆಜಾದ್, ಇರಾನ್‌ನ ಪ್ರಧಾನಮಂತ್ರಿ

ಪಾಟಕ್ ವರದಿಯಲ್ಲಿ ರಿಲಯನ್ಸ್ ಏಕಿಲ್ಲ...?

ಆಹಾರಕ್ಕಾಗಿ ತೈಲ ಹಗರಣದಲ್ಲಿ ನಟವರ್ ಸಿಂಗ್ ಹಾಗೂ ಆತನ ಮಗ ದೋಷಿ ಎಂದು ಪಾಟಕ್ ವರದಿ ಬೊಟ್ಟು ಮಾಡಿ ತೋರಿಸಿದೆ. ಅದೇ ವೇಳೆಗೆ ಕಾಂಗ್ರೆಸ್ ಪಕ್ಷ ಮತ್ತು ಇತರ ಎಲ್ಲಾ ರಾಜಕೀಯ ಪಕ್ಷಗಳನ್ನು ದೋಷಮುಕ್ತಗೊಳಿಸಿದೆ. ಇದನ್ನು ಸದನದಲ್ಲಿ ಮಂಡಿಸುವ ಮುನ್ನವೇ ಮನಮೋಹನ್ ಸಿಂಗ್‌ರವರ ಸರ್ಕಾರ ಅದನ್ನು ಪ್ರಧಾನಿ ಕಚೇರಿಯಿಂದ ಬಹಳ ಯೋಜಿತವಾಗಿ ಲೀಕ್ ಮಾಡಿತು. ಆ ಮೂಲಕ ನಟವರ್‌ರನ್ನು ಸಕಾರಣವಾಗಿಯೇ ಬಲಿ ಹಾಕಲು ರಂಗ ಸಿದ್ಧಗೊಳಿಸಿತಲ್ಲದೆ, ಅದೇ ವೇಳೆಯಲ್ಲಿ ಎತ್ತಬೇಕಾಗಿದ್ದ ಇತರ ಎಲ್ಲಾ ಪ್ರಶ್ನೆಗಳನ್ನು ಮುಚ್ಚಿಹಾಕಲು ಯತ್ನಿಸಿತು.

ಎಷ್ಟರ ಮಟ್ಟಿಗೆ ಅಂದರೆ, ಪಾಟಕ್ ವರದಿ ಪ್ರಧಾನಿ ಕಚೇರಿ ಸೇರಿದ ಅರ್ಧ ಗಂಟೆಯೊಳಗೆ ಅದರಲ್ಲಿದ್ದ ಮುಖ್ಯಾಂಶಗಳನ್ನು ಖಾಸಗಿ ಟಿ.ವಿ. ವಾಹಿನಿಯೊಂದು ಸವಿವರವಾಗಿ ಬಿತ್ತರಿಸಲಾರಂಭಿಸಿತು! ಇದರಿಂದಾಗಿ ಕಾಂಗ್ರೆಸ್ಸಿನ ಮೇಲೆ, ಅದರಲ್ಲೂ ಪ್ರಧಾನಿ ಮನಮೋಹನ್ ಸಿಂಗ್ ಮೇಲೆ ನಟವರ್ ಸಿಂಗ್ ಆಕ್ರೋಶ ತೋರಿಸುತ್ತಿರುವುದೂ, ಮತ್ತು ಅದರಿಂದ ಇತರ ವಿರೋಧ ಪಕ್ಷಗಳು ಲಾಭ ಮಾಡಿಕೊಳ್ಳಲು ಯತ್ನಿಸುತ್ತಿರುವುದೂ ಈಗ ಜನರಿಗೆ ದಿನನಿತ್ಯದ ಮನರಂಜನೆಯಾಗಿದೆ.

ಆದರೆ ಈ ರಾಜಕೀಯ ಪಕ್ಷಗಳು ಎಬ್ಬಿಸುತ್ತಿರುವ ಧೂಳಿನ ಹಿಂದೆ ಈ ಹಗರಣದ ಅಸಲೀ ದೋಷಿಗಳು ಮರೆಯಾಗುತ್ತಿದ್ದಾರೆ. ಉದಾಹರಣೆಗೆ, ಈ ಯೋಜನೆಯಿಂದ ಪರೋಕ್ಷ ಲಾಭ ಪಡೆದವರ ಪಟ್ಟಿಯಲ್ಲಿ ಮಾತ್ರ ನಟವರ್ ಸಿಂಗ್ ಹೆಸರಿದೆ. ಆದರೆ ನೇರವಾಗಿ ಲಾಭ ಪಡೆದವರ, ಅಂದರೆ ಆಹಾರಕ್ಕಾಗಿ ತೈಲದ ಹೆಸರಲ್ಲಿ ಹೆಚ್ಚಿನ ತೈಲವನ್ನು ಇರಾಕಿನಿಂದ ಕಡಿಮೆ ದರದಲ್ಲಿ ಹೊರತೆಗೆದು ಅತ್ಯಧಿಕ ಲಾಭಕ್ಕೆ ಮಾರಿಕೊಂಡು, ಬೆಂದ ಮನೆಯಲ್ಲೂ ಲಾಭದ ಗಳ ಹಿರಿದ ಲಾಭ ಪಿಪಾಸು ತೈಲ ಕಂಪನಿಗಳ ಪ್ರಸ್ತಾಪವೇ ಸಾರ್ವಜನಿಕ ಚರ್ಚೆಯಿಂದ ಮಾಯವಾಗುತ್ತಿದೆ. ಭಾರತದಲ್ಲಿ ಆಹಾರಕ್ಕಾಗಿ ತೈಲ ಯೋಜನೆಯಿಂದ ಅತ್ಯಧಿಕ ಲಾಭ ಪಡೆದವರು ನಟವರ್ ಸಿಂಗೂ ಅಲ್ಲ, ಆತನ ಮಗನೂ ಅಲ್ಲ, ಬದಲಿಗೆ ರಿಲಯನ್ಸ್ ಕಂಪನಿ.

ಗುಟ್ಟು

ಆದರೆ ಸಾರ್ವಜನಿಕ ಚರ್ಚೆಗಳಲ್ಲಾಗಲೀ, ಆಡಳಿತ ಮತ್ತು ವಿರೋಧ ಪಕ್ಷಗಳು ಎಬ್ಬಿಸುತ್ತಿರುವ ಹುಯಿಲಿನಲ್ಲಾಗಲೀ, ಪಾಟಕ್ ವರದಿಯಲ್ಲಾಗಲೀ ಅದರ ಪ್ರಸ್ತಾಪವೇ ಇಲ್ಲ! ಏನಿದರ ಗುಟ್ಟು?!

ಎಲ್ಲಾ ಪಕ್ಷಗಳ ಹಿಂದೆಯೂ ರಿಲಯನ್ಸ್, ಮುಂದೆಯೂ ರಿಲಯನ್ಸ್



ಇದೊಂದು ಹಗರಣವಾಗಲು ಮತ್ತು ಇರಾಕ್ ಈ ಬಗೆಯ ಯೋಜನೆಯೊಂದನ್ನು ಹತಾಶವಾಗಿ ಪ್ರಾರಂಭಿಸಲು ಕಾರಣವಾಗಿದ್ದೇ ಅಮೆರಿಕದ ಕುಟಿಲ ನೀತಿಗಳು. ಮತ್ತು ಈ ಹಗರಣವನ್ನು ಬಯಲಿಗೆ ತರಲು ಅವರು ನೇಮಿಸಿದ ವೋಲ್ಕರ್ ಎಂಬುವನೂ ಅಮೆರಿಕಾದವನೇ. ಇರಾಕ್ ಮೇಲೆ ನಡೆದ ಯುದ್ಧದಲ್ಲಿ ಅಮೆರಿಕದ ಯುದ್ಧತಂತ್ರ ರೂಪಿಸಿದವರಲ್ಲಿ ವೋಲ್ಕರ್ ಒಬ್ಬ. ವೋಲ್ಕರ್ ಸಮಿತಿಯ ಅಸಲಿ ಉದ್ದೇಶ ಅಮೆರಿಕ ಇರಾಕ್ ಮೇಲೆ ನಡೆಸಿದ ಯುದ್ಧದಲ್ಲಿ ಯಾವ್ಯಾವ ದೇಶಗಳು ತನಗೆ ನೇರವಾಗಿ ಬೆಂಬಲಿಸಲಿಲ್ಲವೋ, ಆ ದೇಶಗಳಲ್ಲಿ ಯಾರು ಯಾರು ಸದ್ದಾಂನಿಂದ ಹಣ ತಿಂದು ತಮ್ಮ ದೇಶಗಳು ನೇರವಾಗಿ ಅಮೆರಿಕಕ್ಕೆ ಸಹಾಯ ಮಾಡದಂತೆ ಮಾಡಿದರೋ ಅವರನ್ನು ಬಯಲಿಗೆಳೆಯುವುದೇ ಆಗಿತ್ತು. ಇದಕ್ಕೆ ಅಂಥ ಮಾನ್ಯತೆಯೂ ಏನಿರಲಿಲ್ಲ. ಪ್ರಪಂಚದ ಇತರ ಕಡೆಗಳಲ್ಲೂ ಈ ವರದಿಯನ್ನು ಆಧರಿಸಿ ಅಂತಹ ರಾಜಕೀಯ ಕೋಲಾಹಲಗಳೇನೂ ನಡೆದಿಲ್ಲ. ಆದರೆ ಭಾರತದಲ್ಲಿ ಮಾತ್ರ ದೊಡ್ಡ ರಂಪವಾಗಿದೆ.

ರಟ್ಟು

ಪ್ರಾಯಶಃ ಕಾಂಗ್ರೆಸ್ಸಿನ ಗಾಂಧಿ ಕುಟುಂಬದ ಮುಂದಿನ ನಡೆಗಳಿಗೆ ಅನಾನುಕೂಲವಾಗಬಹುದಾದ ಪ್ರತಿಸ್ಪರ್ಧಿಗಳನ್ನು ಅಥವಾ ಅಡ್ಡಿಗಳನ್ನು ನಿವಾರಿಸಿಕೊಳ್ಳುವ ಯೋಜನೆಯ ಭಾಗವಾಗಿ ಇದೂ ನಡೆದಿದೆ. ಏಕೆಂದರೆ ಬೇರೆ ಯಾವುದೇ ಹಗರಣಗಳಲ್ಲಿ ಇಲ್ಲದಿರುವ ಆಸ್ಥೆ ಕಾಂಗ್ರೆಸ್ಸಿಗೆ ಈ ಹಗರಣದಲ್ಲಿ ಇರುವ ಕಾರಣವೇನಿಲ್ಲ.

ಕಾಂಗ್ರೆಸ್ ಮತ್ತು ಬಿ.ಜೆ.ಪಿಗಳು ಅಷ್ಟೊಂದು ಭ್ರಷ್ಟಾಚಾರ ವಿರೋಧಿಗಳೇ ಆಗಿದ್ದ ಪಕ್ಷದಲ್ಲಿ ಇದರಲ್ಲಿ ಪ್ರಧಾನ ಪಾಲು ಧಾರಿಯಾಗಿರುವ ರಿಲಯನ್ಸ್ ಕಂಪನಿಯ ಬಗ್ಗೆ ಏಕೆ ಚಕಾರವೆತ್ತುತ್ತಿಲ್ಲ? ಈ ಹಗರಣದಿಂದ ನಟವರ್ ಹಾಗೂ ಆತನ ಮಗನಿಗೆ ಹತ್ತಾರು ಕೋಟಿಗಳು ಲಂಚ ಸಂದಾಯವಾಗಿದೆ. ಆದರೆ ರಿಲಯನ್ಸ್ ಕಂಪನಿ ಇದರಲ್ಲಿ ಮಾಡಿರುವ ಲಾಭ ಹಲವು ಸಾವಿರ ಕೋಟಿ ರೂಪಾಯಿಗಳು. ಆದರೂ ರಿಲಯನ್ಸ್ ಬಗ್ಗೆ ಮಾತೇ ಇಲ್ಲ ಯಾಕೆ?

ಏಕೆಂದರೆ ನಟವರ್‌ಗೆ ಸಿಕ್ಕ ಹಣ ಅವರಿಗೆ ಮಾತ್ರ ಸಿಕ್ಕ ಹಣ. ಆದರೆ ರಿಲಯನ್ಸ್‌ಗೆ ಲಾಭವಾದರೆ ಅದು ಎಲ್ಲಾ ಪಕ್ಷಗಳಿಗೂ ಸಿಕ್ಕ ಹಣವೆಂದೇ ಅರ್ಥ. ರಿಲಯನ್ಸ್ ಮತ್ತು ರಾಜಕಾರಣಿಗಳ ಸಂಬಂಧ ನೋಡಿ: ಒಂದೆಡೆ ರಿಲಯನ್ಸ್ ಕಂಪನಿ ಕಾಂಗ್ರೆಸ್ಸಿಗೂ ಆಪ್ತ, ಮತ್ತೊಂದು ಕಡೆ ಅದರ ಮಾಲೀಕರಲ್ಲಿ ಒಬ್ಬನಾದ ಅನಿಲ್ ಅಂಬಾನಿ ಕಾಂಗ್ರೆಸ್ ವಿರೋಧಿಯಾದ ಸಮಾಜವಾದಿ ಪಕ್ಷದಿಂದ ರಾಜ್ಯಸಭಾ ಸದಸ್ಯನಾಗಿದ್ದ. ಮತ್ತೊಂದೆಡೆ ರಿಲಯನ್ಸ್‌ಗೆ ಈ ಕಾಂಟ್ರಾಕ್ಟ್ ಸಿಕ್ಕಿದ್ದೇ ಬಿ.ಜೆ.ಪಿ ಅಧಿಕಾರದಲ್ಲಿದ್ದಾಗ.... ಮೇಲಾಗಿ ರಾಜಕಾರಣಿಯೊಬ್ಬ ಈ ಹಗರಣದ ಫಲಾನುಭವಿಯಾಗಿದ್ದರೆ ಅದು ಭ್ರಷ್ಟಾಚಾರ. ಆದರೆ ತೈಲ ಕಂಪನಿಯೊಂದು ಇದೇ ಕಾರಣಕ್ಕಾಗಿ ಎಷ್ಟೇ ತೈಲ ಲೂಟಿ ಹೊಡೆದರೂ ಅದು ವ್ಯವಹಾರ! ಈ ರಿಲಯನ್ಸ್ ಕಂಪನಿ ಮಾಡಿಕೊಂಡ ಲಾಭದ ಹಿಂದಿರುವ ಅನೈತಿಕ ಮತ್ತು ಅನ್ಯಾಯಯುತವಾದ ಮಾರ್ಗಗಳ ಬಗ್ಗೆ ಪ್ರಶ್ನೆ ಎತ್ತಬೇಕಾಗುತ್ತದೆ. ಈ ಪ್ರಶ್ನೆಗಳು ಇರಾಕ್ ಯುದ್ಧದ ಬಗ್ಗೆ ಅಮೆರಿಕದ ಪಾತ್ರದ ಬಗ್ಗೆಯೂ ನಿಲುವು ತೆಗೆದುಕೊಳ್ಳುವಂತೆ ಮಾಡುತ್ತದೆ. ಆದ್ದರಿಂದಲೇ ಯಾರೂ ಈ ಪ್ರಶ್ನೆಗಳ ಸನಿಹವೂ ಹೋಗುತ್ತಿಲ್ಲ.



ಕೆಲವೇ ದಿನಗಳ ಹಿಂದೆ ಭಾರತದಾದ್ಯಂತ ಬಾಲಕಾರ್ಮಿಕ ವಿರೋಧಿ ದಿನವನ್ನು ಆಚರಿಸಲಾಯಿತು. ಪಲ್ಸ್ ಪೋಲಿಯೋ ಕಾರ್ಯಕ್ರಮದಂತೆ ಅದೂ ಸಹಾ ಮತ್ತೊಂದು ನಿರುಪಯುಕ್ತ ಸರ್ಕಾರಿ ಆಚರಣೆಯಾಗಿ ಕೊನೆಗೊಂಡಿತು. ಅಂದೂ ಇಂದೂ ಬಾಲಕಾರ್ಮಿಕರ ಬಾಲ್ಯದ ಕಗ್ಗೊಲೆ ಮಾತ್ರ ನಿರಾತಂಕವಾಗಿ ಮುಂದುವರೆದಿದೆ. ವಿಶ್ವ ಸಂಸ್ಥೆಯ ಒಂದು ಅಧ್ಯಯನವು ಇದನ್ನು ರುಜುವಾತು ಪಡಿಸುತ್ತದೆ.

ಬಾಲಕ ಮತ್ತು ಬಾಲಕಿಯರಿಗೆ ಅತ್ಯಂತ ಮಾರಕವಾಗಿರುವ ಮೊದಲ ಐದು ದೇಶಗಳಲ್ಲಿ ಭಾರತವೂ ಒಂದಂತೆ. ಸುಡಾನ್, ಯುಗಾಂಡಾ, ಕಾಂಗೋ, ಇರಾಕ್, ಸೋಮಾಲಿಯಾ ಬಿಟ್ಟರೆ ಬಾಲ್ಯಕ್ಕೆ ಅತ್ಯಂತ ಮಾರಕವಾಗಿರುವ ದೇಶ ಭಾರತವೇ ಅಂತೆ. ಉಳಿದ ನಾಲ್ಕು ದೇಶಗಳು ಸಾಮ್ರಾಜ್ಯಶಾಹಿಗಳ ಸುಲಿಗೆಯಿಂದ ಪ್ರಗತಿಯನ್ನೇ ಕಾಣದ ಆಫ್ರಿಕಾದ ದೇಶಗಳು. ಮತ್ತೊಂದು ಈಗಲೂ ಅಮೆರಿಕ ಬಾಂಬ್‌ಗಳಿಂದಾಗಿ ಬದುಕನ್ನೇ ಕಳೆದುಕೊಳ್ಳುತ್ತಿರುವ ಇರಾಕ್. ಆದರೆ ಈ ಶತಮಾನದಲ್ಲಿ ಬಲಿಷ್ಠ ಮತ್ತು ಮುಂದುವರೆದ ರಾಷ್ಟ್ರವೆನಿಸಿಕೊಳ್ಳುವ ಕಡೆ ದಾಪುಗಾಲಿಡುತ್ತಿದ್ದೇವೆ ಎಂದು ಕೊಚ್ಚಿಕೊಳ್ಳುತ್ತಿರುವ ಭಾರತದ ಕತೆ ಏನು?

ಅಭಿವೃದ್ಧಿಯ ತುತ್ತೂರಿ ಊದುವ ನೈಜ ಭಾರತದ ದುರಂತಕತೆಯ ಅಭಿವ್ಯಕ್ತಿ ಇದು....

ಒಂದು ಮಣ್ಣಿನ ಕಣದೊಳಗೆ ಜಗತ್ತನ್ನು ಕಾಣುವ ರವೀಂದ್ರನಾಥ ಟ್ಯಾಗೂರರು "ಮೃತ ಶಬ್ದಗಳ ಧೂಳು ನಿನಗೆ ಅಂಟಿಕೊಂಡಿದೆ. ನಿನ್ನ ಆತ್ಮವನ್ನು ಮೌನವಾಹಿನಿಯಲ್ಲಿ ತೊಳೆದುಕೋ" ಎನ್ನುತ್ತಾರೆ. ಅವರ ಸುಂದರ ಮುಕ್ತಕಗಳು ಈ ಸಲದ ಸೂಕ್ತಿಗಳಾಗಿವೆ. ತಣ್ಣಗೆ ಓದಿ; ಅಕ್ಷರಗಳು ನೀಡುವ ಆಹ್ಲಾದತೆಯ ಅನುಭವವಾಗುತ್ತದೆ.

-ಮೂರ್ತಿ



ಕಂಡಹಾಗೆ



ಅಪ್ಪನೊಂದಿಗೆ ನಕ್ಷತ್ರವಾದ ಚೆನ್ನಿ

ಅಪ್ಪನ ಪ್ರೀತಿಯ ಚೆನ್ನಿ ಎರಡು ವಾರಗಳ ಹಿಂದೆ ತೀರಿಕೊಂಡಳು. ಸುಮಾರು ಹದಿಮೂರು ವರ್ಷ ವಯಸ್ಸಾಗಿದ್ದ ಆಕೆ ತನ್ನ ಆಯುಷ್ಯದ ಅಂತ್ಯ ತಲುಪಿದ್ದಳು. ತನ್ನ ಕೊನೆ ದಿನಗಳಲ್ಲಿ ಊಟವನ್ನು ತ್ಯಜಿಸಿದ, ಮಾನವ ಸಂಪರ್ಕವನ್ನು ನಿರಾಕರಿಸಿದ ಚೆನ್ನಿ ಇವತ್ತು ಅಮ್ಮನ ನೆಲಮಂಗಲದ ತೋಟದ ಮಣ್ಣಿನಲ್ಲಿ ಮಣ್ಣಾಗುತ್ತಿದ್ದಾಳೆ.

ಈ ಚೆನ್ನಿ ಅಪ್ಪನ ಪ್ರೀತಿಯ ಡಾಬರ್‌ಮ್ಯಾನ್. ರಾಜ ಮತ್ತು ಸೈಫಿಯ ನಂತರ ಅಪ್ಪನ ಹೃದಯ ಗೆದ್ದ ಅವರ ಪ್ರೀತಿಯ ನಾಯಿ. ಪ್ರತಿ ದಿನ ಬೆಳಿಗ್ಗೆ ಅಪ್ಪ ವಾಕಿಂಗ್‌ನಿಂದ ಹಿಂದಿರುಗುತ್ತಲೇ ಅವರೊಂದಿಗೆ ಮನೆಯನ್ನು ಪ್ರವೇಶಿಸುತ್ತಿದ್ದಳು ಚೆನ್ನಿ. ಅಪ್ಪನ ಮಸಾಜ್ ನಡೆಯುತ್ತಿದ್ದಾಗ ಅವಳಿಗೆಂದೇ ಅಪ್ಪ ಹಾಕಿಸಿದ್ದ ಸೋಫಾದ ಮೇಲೆ ಕೂತಿರುತ್ತಿದ್ದಳು; ಅವರು ತಿಂಡಿ ತಿನ್ನುತ್ತಿದ್ದಾಗ ಅವರು ನೀಡುವ ಚಪಾತಿಯ ಚೂರುಗಳಿಗಾಗಿ ಅವರ ಪಕ್ಕದಲ್ಲಿಯೇ ಕಾತರದಿಂದ ಕಾದಿರುತ್ತಿದ್ದಳು.

ರಾತ್ರಿ ಅಪ್ಪ ಹಿಂದಿರುಗಿದಾಗಲಂತೂ ಚೆನ್ನಿಗೆ ಸಂಭ್ರಮ. ಅಪ್ಪನೊಂದಿಗೇ ಮನೆ ಪ್ರವೇಶಿಸುತ್ತಿದ್ದ ಆಕೆ ಅವರು ತಮ್ಮ ವಿಸ್ಕಿ-ಊಟ ಮುಗಿಸುವವರೆಗೂ ಅವರೊಂದಿಗಿದ್ದು ಆನಂತರ ಅವಳನ್ನು ಮುದ್ದಿಸಿ ಹೊರಗೆ ಕಳುಹಿಸುವವರೆಗೂ ಸಂಗಾತಿ ಆಗಿರುತ್ತಿದ್ದಳು. ಚೆನ್ನಿ ಮನೆಯಲ್ಲಿ ಎಷ್ಟೇ ಗಲೀಜು ಮಾಡಿದರೂ ನಾವ್ಯಾರೂ ಚಕಾರವೆತ್ತುವಂತಿರಲಿಲ್ಲ, ಏಕೆಂದರೆ ಅಪ್ಪನಿಗೆ ಅವಳೇ ಮನೆಯ ರಾಣಿ! ಅಕಸ್ಮಾತ್ ಅಪ್ಪ ಮನೆಯೊಳಗಿದ್ದು ಅವಳಿಗೆ ಪ್ರವೇಶ ನಿರಾಕರಿಸಿದ್ದರೆ ಅದೆಂತಹ ರಂಪ ಮಾಡುತ್ತಿದ್ದಳೆಂದರೆ ಅವಳನ್ನು ಸುಮ್ಮನಾಗಿಸಲು ಬಾಗಿಲು ತೆರೆಯಲೇಬೇಕಿತ್ತು, ಹಾಗೆ ತೆರೆದೊಡನೆ ಅವಳು ಅಪ್ಪನ ಹತ್ತಿರ ಹೋಗಿ, ಅವರನ್ನು ಮೂಸಿ, ಮುಖವನ್ನೆಲ್ಲ ನೆಕ್ಕಿ, ಅವರ ಕಾಲುಗಳಿಗೆ ತನ್ನ ಮೈಯನ್ನು ತಿಕ್ಕಿದರೇ ಅವಳಿಗೆ ಸಂತೃಪ್ತಿ.

ಇಂತಹ ಚೆನ್ನಿ ಸಹಜವಾಗಿಯೇ ಜನವರಿ 25,2000ದಂದು ನಾವೆಲ್ಲ ಅನುಭವಿಸಿದ್ದ ಅಗಲಿಕೆಯ ನೋವನ್ನು ಅನುಭವಿಸಿದ್ದಳು. ಅಂದು ಅಪ್ಪನನ್ನು ಕೊನೆಯ ಬಾರಿಗೆ ನೋಡಲು ಸಹಸ್ರಾರು ಜನ ಬಂದಿದ್ದರಿಂದ ಚೆನ್ನಿಯನ್ನು ಕೆನಲ್‌ನಲ್ಲಿ ಕೂಡಿಡಲಾಗಿತ್ತು, ತನ್ನ ಸುತ್ತಲು ನಡೆಯುತ್ತಿದ್ದ ಗದ್ದಲದ ನಡುವೆಯೂ ಅವಳು ತನ್ನ ದುಃಖವನ್ನು ಏಕಾಂಗಿಯಾಗಿ ಅನುಭವಿಸಿದ್ದಳು. ಅದೇ ರಾತ್ರಿ ಅಪ್ಪನನ್ನು ಕೊನೆಯ ಬಾರಿಗೆ ಮನೆಯಿಂದ ಕರೆದುಕೊಂಡು ಹೋದಾಗ, ನಮ್ಮೆಲ್ಲರಿಗಿಂತಲೂ ಜೋರಾಗಿ ಅತ್ತಿದ್ದು ಚೆನ್ನಿ. ತನ್ನನ್ನು ಕೂಡಿಡಲಾಗಿದ್ದ ಕೆನೆಲ್‌ನಿಂದಲೇ ಅವಳು ಹೇಗೆ ಅತ್ತಿದ್ದಳೆಂದರೆ ಆ ರೋಧನ ಇಂದಿಗೂ ನನಗೆ ನೆನಪಿದೆ.

ವಿಚಿತ್ರದ ವಿಷಯ ಏನು ಗೊತ್ತಾ... ಅಪ್ಪ ಮನೆಯಲ್ಲಿ ಇದ್ದಾಗ ಒಂದು ಕ್ಷಣವೂ ಅವರಿಂದ ದೂರ ಇರದಿದ್ದ ಚೆನ್ನಿ ಮಾರನೆ ದಿನದಿಂದ ಮನೆಯನ್ನು ಪ್ರವೇಶಿಸುವುದನ್ನೇ ನಿಲ್ಲಿಸಿದಳು. ಬಾಗಿಲನ್ನು ಸಂಪೂರ್ಣವಾಗಿ ತೆರೆದು "ಬಾ ಚೆನ್ನಿ" ಎಂದರೂ ನಮ್ಮತ್ತ ಒಂದು ಕ್ಷಣ ನೋಡಿ ಸುಮ್ಮನಾಗುತ್ತಿದ್ದಳು. ಅಪ್ಪ ಇದ್ದಾಗ ಅವಳನ್ನು ಹೊರಗಿಡುವುದೇ ಒಂದು ಸಮಸ್ಯೆಯಾಗಿದ್ದರೆ, ಅಪ್ಪ ಇಲ್ಲದಿದ್ದಾಗ ಅವಳನ್ನು ಏನೇ ಮಾಡಿದರೂ ಒಳಗೆ ಕರೆಸಿಕೊಳ್ಳುವುದು ನಮ್ಮಿಂದ ಸಾಧ್ಯವಾಗಲಿಲ್ಲ, ಕೊನೆಗೊಂದು ದಿನ ಅಮ್ಮ ಚೆನ್ನಿಯನ್ನು ಎತ್ತಿಕೊಂಡು ಅಪ್ಪನ ರೂಮ್, ಸ್ಟಡಿರೂಮ್ ಮತ್ತು ಬಾತ್‌ರೂಮನ್ನು ಮೂಸಿಸಿ "ನೋಡು ಚೆನ್ನಿ, ನಿನ್ನ ಅಪ್ಪ ಈಗಿಲ್ಲ, ಆದರೂ ಇದು ಅಪ್ಪನ ರೂಮು" ಎಂದರು. ಅದನ್ನೆಲ್ಲ ಒಂದೆರಡು ಕ್ಷಣ ನೋಡಿದ ಚೆನ್ನಿ ಬಲವಂತದಿಂದ ಅಮ್ಮನ ಕೈಗಳಿಂದ ತಪ್ಪಿಸಿಕೊಂಡು ಹೊರಗೋಡಿದ್ದಳು. ಅವಳ ಪ್ರೀತಿಯ ಅಪ್ಪನಿಲ್ಲದ ಮನೆ ಆಕೆಗೆ ಬೇಕಿರಲಿಲ್ಲ....

ಇಂತಹ ಚೆನ್ನಿ ಒಂದೆರಡು ವರ್ಷಗಳ ಕಾಲ ಆ ಮನೆಯಲ್ಲಿ ತಾನಾಯಿತು, ತನ್ನ ಜೀವನವಾಯಿತು ಎಂಬಂತೆ ವಾಸಿಸಿದಳು. ಈ ಮಧ್ಯೆ, ಏಳು ಮರಿಗಳಿಗೂ ತನ್ನ ಜೀವನದಲ್ಲಿ ಪ್ರಥಮ ಬಾರಿಗೆ ತಾಯಿಯಾದಳು. ಆ ಮರಿಗಳನ್ನು ಕಂಡ ಪುಟ್ಟ ಸಮರ್‌ಗೆ ಸಂಭ್ರಮವೋ ಸಂಭ್ರಮ. ಆದರೆ ಅದಾದ ಹಲವು ದಿನಗಳ ನಂತರ ಅವಳ ವಾಸ್ತವ್ಯವನ್ನು ಅಪ್ಪನ ತೋಟಕ್ಕೆ ಬದಲಾಯಿಸಲಾಯಿತು.

ಅಲ್ಲಿ ಅವಳ ಜೀವನವೇ ನರಕ ಸದೃಶವಾಯಿತು. ದಿನದ 24 ಗಂಟೆಯೂ ಅವಳನ್ನು ಸೋಮ ಕಟ್ಟಿ ಹಾಕುತ್ತಿದ್ದದ್ದನ್ನು ನೋಡಿ ನನ್ನ ತಂಗಿ ಬೇಬಿ ಬೇಸರಪಟ್ಟುಕೊಂಡಳು. ಆನಂತರ ಅಪ್ಪನ ತೋಟವೇ ಬೇರೆಯವರ ಪಾಲಾದಾಗ ಚೆನ್ನಿಯನ್ನು ಅಮ್ಮನ ನೆಲಮಂಗಲದ ತೋಟಕ್ಕೆ ಸಾಗಿಸಿದೆವು.

ಅಲ್ಲಿ ಅಚ್ಚರಿ ಮೂಡಿಸುವಂತೆ ಚೆನ್ನಿ ಚೇತರಿಸಿಕೊಂಡಳು. ತೋಟವನ್ನು ಕಾಯುತ್ತಾ ನಾನು ಹೋದಾಗಲೆಲ್ಲಾ ನನನ್ನು ಹಿಂಬಾಲಿಸುತ್ತಾ ತನ್ನ ಜೀವನ ಸಾಗಿಸಿದಳು. ಆದರೆ ಎರಡು ತಿಂಗಳ ಹಿಂದೆ ತೋಟವನ್ನು ನೋಡಿಕೊಳ್ಳುತ್ತಿದ್ದ ಕಲ್ಲಪ್ಪನಿಗೆ ಗೇಟ್‌ಪಾಸ್ ನೀಡಿ, ಅಲ್ಲಿದ್ದ ದನಗಳನ್ನು ಹತ್ತಿರವೇ ಇದ್ದ ವಕೀಲ ಜಯರಾಮ್‌ರವರ ತೋಟಕ್ಕೆ ಸಾಗಿಸಿದ್ದಾಗ, ಚೆನ್ನಿಯನ್ನು ನನ್ನ ಮನೆಗೆ ಕರೆದುಕೊಂಡು ಬಂದಿದ್ದೆ.

ಈಗಾಗಲೇ ನಾಲ್ಕೈದು ಬಾರಿ ದರೋಡೆಗೆ ಒಳಗಾಗಿರುವ ನನ್ನ ಮನೆಗೆ ಚೆನ್ನಿ ಕಾವಲು ನಿಂತು ಕಳ್ಳರ ಕಾಟ ತಪ್ಪಿಸಿದಳು; ನನ್ನ ಅರಾಜಕ ಜೀವನದ ನಡುವೆಯೂ ನಾನು ನೀಡುತ್ತಿದ್ದ ಶುಶ್ರೂಷೆಯಿಂದ ನೆಮ್ಮದಿಯಾಗಿದ್ದಳು..


ಆದರೆ ಅವಳ ಆಯುಷ್ಯ ಮುಗಿಯುತ್ತಾ ಬಂದಿತ್ತು, ಮಾನವರಿಗೂ ಆಗುವಂತೆ ವೃದ್ಧಾಪ್ಯದಲ್ಲಿ ಹಲವಾರು ಕಾಯಿಲೆಗಳು ಮುತ್ತಿಕೊಂಡವು. ಊಟ ಮಾಡುವುದನ್ನು ನಿಲ್ಲಿಸಿದಳು. ಔಷಧಿಗಳನ್ನು ನಿರಾಕರಿಸಿದಳು. ಕೊನೆಕೊನೆಗೆ ವೈದ್ಯರು ನೀಡುತ್ತಿದ್ದ ಚುಚ್ಚುಮದ್ದು ಮತ್ತು ಗ್ಲುಕೋಸ್ ಮಾತ್ರ ಅವಳನ್ನು ಜೀವಂತವಾಗಿ ಉಳಿಸಿತ್ತು. ಅವಳು ಇನ್ನು ಹೆಚ್ಚು ದಿನ ಬದುಕುವುದಿಲ್ಲ ಎಂದು ವೈದ್ಯರು ಹೇಳಿದ ನಂತರ ಅವಳನ್ನು ಮತ್ತೆ ಅಮ್ಮನ ತೋಟಕ್ಕೆ ಬಿಟ್ಟುಬಂದೆ.

ಅಲ್ಲೂ ನಾಲ್ಕು ದಿನ ಬರಿ ನೀರು ಕುಡಿದು ಬದುಕಿದ್ದ ಚೆನ್ನಿ ಕೊನೆಗೂ ಕೊನೆಯುಸಿರೆಳೆದಳು. ಮೊನ್ನೆ ಪುಟ್ಟ ಇಶಾಳನ್ನು ತೋಟಕ್ಕೆ ಕರೆದುಕೊಂಡು ಹೋಗಿದ್ದಾಗ "ತಾತ ನಾಯಿ ಚೆನ್ನಿ ಎಲ್ಲಿ?" ಎಂದು ಅವಳು ಕೇಳಿದಳು. ಆಗ ನನ್ನ ಅಮ್ಮ "ತಾತನ ಜೊತೆ ಚೆನ್ನಿನೂ ಈಗ ನಕ್ಷತ್ರ ಆಗಿದ್ದಾಳೆ" ಅಂದರು.

"ಏಕೆ" ಪುಟ್ಟ ಇಶಾಳ ಪ್ರಶ್ನೆ.

"ಅವಳಿಗೆ ಇಲ್ಲಿ ಸಾಕಾಗಿತ್ತು, ತಾತ ಜೊತೆ ಇರಬೇಕು ಅನ್ನಿಸ್ತು, ಅದಕ್ಕೆ ಅವಳು ಹೋದಳು. ಈಗ ಪ್ರತಿ ರಾತ್ರಿ ನಿನ್ನ ತಾತ ಹೇಗೆ ಆಕಾಶದಲ್ಲಿ ಬಂದು ನಿನ್ನನ್ನು ನೋಡುತ್ತಾ ಇರುತ್ತೋ, ಹಾಗೆ ಚೆನ್ನಿ ಕೂಡ ತಾತ ಜೊತೆ ನಕ್ಷತ್ರ ಆಗಿ ನಿನ್ನನ್ನು ನೋಡ್ತಾ ಇರ್ತಾಳೆ" ಅಂದರು ಅಮ್ಮ.....

ಚೆನ್ನಿ ಓರ್ವ ನಾಯಿ ಆಗಿದ್ದಿರಬಹುದು. ಆದರೆ ಅಪ್ಪನನ್ನು ಯಾವ ಟೀಕೆ, ವಿಮರ್ಶೆ ಇಲ್ಲದೆ ಸಂಪೂರ್ಣವಾಗಿ ಪ್ರೀತಿಸಿದ್ದಾಕೆ ಚೆನ್ನಿ. ಅವಳ ಪ್ರೀತಿಯಲ್ಲಿ ಯಾವುದೇ ಸ್ವಾರ್ಥವಿರಲಿಲ್ಲ... ಅಂತಹ ಚೆನ್ನಿ ಇವತ್ತು ಒಂದು ಸ್ತರದಲ್ಲಿ ಮಣ್ಣು... ಇನ್ನೊಂದು ಸ್ತರದಲ್ಲಿ ನಕ್ಷತ್ರ.... ಮನುಷ್ಯರೊಬ್ಬರ ಮಾನವ ಸಂಬಂಧಗಳನ್ನು ಅಳೆಯುವಾಗ ಚೆನ್ನಿಯಂತಹ ನಾಯಿಗಳೂ ಮುಖ್ಯವಾಗುತ್ತವಲ್ಲವೇ.....



–ಗೌರಿ ಲಂಕೇಶ್

'ಲಂಕೇಶ್' ವರದಿಯ ಫಲ–ಜ್ಯೋತಿಷಿಗೆ ಜೈಲು ಯೋಗ



ಮಾವಳ್ಳಿ ಶಂಕರ್ ನೇತೃತ್ವದ ಪ್ರತಿಭಟನೆಗೆ ಜಿಲ್ಲಾಧಿಕಾರಿಗಳ ಪ್ರತಿಕ್ರಿಯೆ


ಪೊಲೀಸರು ಎಳೆದೊಯ್ದು ಬೂಟು ಕಾಲಲ್ಲಿ ಒದ್ದು ಲಾಕಪ್ಪಿಗೆ ಹಾಕುವುದನ್ನು ಜ್ಯೋತಿಷ್ಯ ಶಾಸ್ತ್ರದ ಪರಿಭಾಷೆಯಲ್ಲಿ 'ಪಾದುಕಾ ಯೋಗ' ಎನ್ನಬಹುದಾದರೆ, ವಿದ್ಯಾಪೀಠದ ವಿಕಟ ಜ್ಯೋತಿಷಿ ಗುಂಜೂರು ಪ್ರಕಾಶ ಶಾಸ್ತ್ರಿಗೆ ಅಂಥಾದ್ದೊಂದು ಯೋಗ ಪ್ರಾಪ್ತಿಯಾಗಿದೆ.

ಉತ್ತಮ ಜಾತಿಯವರ ಮನೆಗೆ ಕಾಗೆ-ಗೂಬೆಗಳು ಹೊಕ್ಕುವುದಕ್ಕಿಂತಲೂ ಶೂದ್ರಾದಿಗಳು ಅರ್ಥಾತ್ ಎಸ್ಸಿ-ಎಸ್ಟಿಗಳು ಪ್ರವೇಶಿಸುವುದು ಅಪಶಕುನ, ಮನೆಯನ್ನು ಗೋಮೂತ್ರ ಹಾಕಿ ಸಾರಿಸಬೇಕು, ಪುಣ್ಯಾಹ ಮಾಡಿಸಬೇಕು, ಅರಿಶಿನದ ನೀರನ್ನು ಪ್ರೋಕ್ಷಿಸಬೇಕು; ಇತ್ಯಾದಿ ಸಾಕ್ಷಾತ್ ಆಧುನಿಕ ಮನುವಿನಂತೆ 'ಜ್ಯೋತಿಷ್ಯ ತರಂಗ' ಪತ್ರಿಕೆಯಲ್ಲಿ ಬರಕೊಂಡಿದ್ದ ಗುಂಜೂರು ಪ್ರಕಾಶ ಶಾಸ್ತ್ರಿಯ ಬಗ್ಗೆ 'ಲಂಕೇಶ್' ವಾರ ಪತ್ರಿಕೆಯಲ್ಲಿ ವರದಿ ಯಾಗುತ್ತಿದ್ದಂತೆ ದಲಿತ ಸಮೂಹ ಬೀದಿಗಿಳಿಯಿತು. ವಿಶೇಷವಾಗಿ ಇಂಡಿ ಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ದಲಿತ ನೌಕರರು ಸಿದ್ಧರಾಜು ನೇತೃತ್ವ ದಲ್ಲಿ ಪ್ರತಿಭಟಿಸಿ ಹೋರಾಟಕ್ಕೆ ನಾಂದಿ ಹಾಡಿದರೆ, ಅಂಬೇಡ್ಕರ್ ಯುವ ಸೇನೆಯ ಅಧ್ಯಕ್ಷ ಕೋದಂಡರಾಮ್ ಶಾಸ್ತ್ರಿಯ ವಿರುದ್ಧ ಮಾಗಡಿ ರಸ್ತೆ ಪೊಲೀಸ್ ಠಾಣೆಗೆ ದೂರು ಕೊಟ್ಟರು. ಈ ಬಗ್ಗೆ ಆಗಸ್ಟ್ ಎಂಟರಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಕಚೇರಿ ಎದುರು ದೊಡ್ಡ ಮಟ್ಟದ ಪ್ರತಿಭಟನೆ ನಡೆಸಿದ್ದು ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ)ಯ ನಾಯಕ ಮಾವಳ್ಳಿ ಶಂಕರ್. ಅದು ಬಂಡಾಯ ಸಾಹಿತಿ ಆರ್.ಜಿ. ಹಳ್ಳಿ ನಾಗರಾಜ್ ಸೇರಿದಂತೆ ಮುನ್ನೂರಕ್ಕೂ ಅಧಿಕ ಮಂದಿ ಹೋರಾಟ ಗಾರರಿದ್ದ ವಿನೂತನ ಪ್ರತಿಭಟನೆಯಾಗಿತ್ತು. ಅಷ್ಟಕ್ಕೇ ಹುಷಾರಾದ ಸರ್ಕಾರ ಜ್ಯೋತಿಷಿ ಶಾಸ್ತ್ರಿಯ ವಿರುದ್ಧ ಮನಸ್ಸಿಲ್ಲದೇ ಪ್ರಹಾರ ಮಾಡಿದೆ. ಮಾಗಡಿ ರೋಡ್ ಪೊಲೀಸ್ ಠಾಣೆಯ ಜನಾನುರಾಗಿ ಇನ್ಸ್‌ಪೆಕ್ಟರ್ ಹನುಮಂತಪ್ಪನವರು ಶಾಸ್ತ್ರಿಯನ್ನು ಎಳೆತಂದು ಒದ್ದು ಲಾಕಪ್ಪಿಗೆ ದಬ್ಬಿದ್ದಾರೆ. ಸಾಲದ್ದಕ್ಕೆ ಬನಶಂಕರಿ ಇನ್ಸ್‌ಪೆಕ್ಟರ್ ಶಿವಶಂಕರಮೂರ್ತಿಯವರೂ ಮತ್ತೊಂದು ಕೇಸು ಹಾಕಿ ಜೈಲಿಗೆ ಕಳಿಸಿದ್ದಾರೆ. ಇದು 'ಲಂಕೇಶ್' ವರದಿಗೆ ಸಿಕ್ಕ ಜಯ ಮತ್ತು ಉಳಿಕೆ ಮನುವಾದಿಗಳಿಗೆ ಎಚ್ಚರಿಕೆ ಕೂಡ.



ಹನುಮಂತಪ್ಪ

ಗುಂಜೂರು ಪ್ರಕಾಶ ಶಾಸ್ತ್ರಿಯೇ ಪ್ರತಿ ಪಾದಿಸುವ ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಇದು ಪೊಲೀಸ್ ಪಾದುಕಾ ಯೋಗವೋ, ಕಾಳಸರ್ಪ ದೋಷವೋ? ಅಥವಾ ಶ್ರೀಕೃಷ್ಣ ಜನ್ಮಸ್ಥಾನ ದರ್ಶನ ಕರ್ಮವೋ ಗೊತ್ತಿಲ್ಲ. ದುರಂತವೆಂದರೆ ಮನುಸ್ಮೃತಿಯನ್ನು ನಂಬಿ ಶೂದ್ರಾದಿಗಳನ್ನು ಕಾಗೆ-ಗೂ[illegible]ಳಿಗಿಂತಲೂ ಹೀನರೆಂದು ಅಸ್ಪೃಶ್ಯತಾಚಾರ [illegible] ಕರೆಕೊಟ್ಟ ಆತನನ್ನು ಜೈಲಿಂದ ಬಿಡಿಸಲು ಆತನ [illegible] ಸನ್ಮಾನಿಸಿ ಬರುದುಕೊಟ್ಟ ರಾಮಾ ಜೋಯಿಷರಾಗಲಿ, ಕೇಶವಕೃಪದ ವಟುಗಳಾಗಲಿ ಅಡ್ರೆಸ್ಸಿಗೇ ಇರಲಿಲ್ಲ.



ಗುಂಜೂರು ಪ್ರಕಾಶ್ ಶಾಸ್ತ್ರಿ

ಕೊನೆಗೂ ಶಾಸ್ತ್ರಿಯನ್ನು ಜೈಲಿಂದ ಹೊರತಂದಿದ್ದು ಓರ್ವ ಶೂದ್ರ ವಕೀಲನೆ!

ಈಗ ಶಾಸ್ತ್ರಿ ಯಾವ ಮೂತ್ರ ಹಾಕಿ ಮನೆ ತೊಳೆಯುತ್ತಾನೋ?

–ರಾ.ಸೋ

ನಾನು ನಿನ್ನನ್ನು ಹಿಡಿಯುತ್ತೇನೆ,
ಹಿಡಿದು ಕಟ್ಟುತ್ತೇನೆ,
ಕಚ್ಚಿ ಹಾಸಿಗೆಗೆ ಕರೆದೊಯ್ಯುತ್ತೇನೆ,
ಹಾಸಿಗೆಯಲ್ಲಿ ನಿನಗೆ ಕಾವೇರಿಸುತ್ತೇನೆ,
ಕಾವಿನಿಂದ ನೀನು ಬೆವರುವಂತೆ
ಮಾಡುತ್ತೇನೆ...
ನಾನ್ಯಾರು ಗೊತ್ತಾ?
ಚಿಕೂನ್ ಗುನ್ಯಾ!

–ಕೆ.ಚಂದ್ರಶೇಖರ್, ಬೆಂಗಳೂರು

ಸೂರ್ಯ ಮುಳುಗಿದನೆಂದು ಅಳುತ್ತ ಕುಳಿತರೆ, ನಕ್ಷತ್ರಗಳನ್ನು ನೋಡುವ [illegible]ವೂ ಇಲ್ಲವಾಗುತ್ತದೆ

ರಾಜ್ಯದ ಪತ್ರಕರ್ತರ ಸಂಘ ಈಗ ಸುದ್ದಿಯಲ್ಲಿದೆ. ವೆಂಕಟೇಶ್ ಎಂಬ ನಾಲಾಯಕ್ ವ್ಯಕ್ತಿ ಇಲ್ಲಿಗೆ ಅಧ್ಯಕ್ಷನಾಗಿದ್ದೇ ಬಂತು, ಸಂಘದ ಚಟುವಟಿಕೆಗಳು ನಿಷ್ಕ್ರಿಯಗೊಂಡಿವೆ. ಈತನ ಅದಕ್ಷತೆಯಿಂದ ಪತ್ರಕರ್ತರ ಭವನಕ್ಕೆ ಮಂಜೂರಾಗಿದ್ದ ನಿವೇಶನವು ಕೈತಪ್ಪಿದೆ. ಸಂಘದಲ್ಲೀಗ ಸ್ವಜನಪಕ್ಷಪಾತ, ಅವ್ಯವಹಾರ ಹೆಚ್ಚಾಗಿದ್ದು ಕಾರ್ಯಕಾರಿ ಸಮಿತಿಯಲ್ಲಿಯೇ ಒಡಕುಂಟಾಗಿದೆ. ಅಧ್ಯಕ್ಷ ಹಾಗೂ ಕಾರ್ಯಕಾರಿ ಸಮಿತಿಯ ಜಟಾಪಟಿಯ ನಡುವೆ ನಿವೇಶನ


ವೆಂಕಟೇಶ್

ತಪ್ಪಿನಿಂದ ಮಂಡ್ಯ ಜಿಲ್ಲಾ ಪತ್ರಕರ್ತರ ಸಂಘ ಇಬ್ಭಾಗವಾಗಿ, ಸದಸ್ಯತ್ವ ನೊಂದಣಿ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತ್ತು.

ಆದರೂ ತಾನೇ ಮಾಡಿಕೊಂಡಿದ್ದ ಖೊಟ್ಟಿ ಸದಸ್ಯರಿಂದ ಅದ್ಹೇಗೋ ರಾಜ್ಯ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದ ವೆಂಕಟೇಶ್, ಆ ನಂತರ ಅಧಿಕಾರಸ್ಥರ ಅಕ್ಕ-ಪಕ್ಕದಲ್ಲಿ ಠಳಾಯಿಸುವುದನ್ನು ಬಿಟ್ಟರೆ, ಪತ್ರಕರ್ತರ ಸಂಘಕ್ಕಾಗಿ ಕಡಿದು ಕಟ್ಟೆಹಾಕಿದ್ದು ಅಷ್ಟಕಷ್ಟೆ.

ನಿರ್ಮಾಣದ ಕನಸು ನುಚ್ಚು ನೂರಾಗಿದೆ.

ಯಾವಾಗ ನಿವೇಶನವನ್ನು ಕಂದಾಯ ಇಲಾಖೆ ವಾಪಸ್ಸು ಪಡೆದುಕೊಂಡಿತೋ, ಕಾರ್ಯಕಾರಿ ಸಮಿತಿಯ ಸದಸ್ಯರು ಅಧ್ಯಕ್ಷರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ರಾಜೀನಾಮೆಗೆ ಒತ್ತಾಯಿಸಿದ್ದಾರೆ. ಆದರೆ ಇದಾವುದಕ್ಕೂ ಬಗ್ಗದ ವೆಂಕಟೇಶ್ ಗೂಂಡಾಗಳ ಮೂಲಕ ಪದಾಧಿಕಾರಿಗಳನ್ನೇ ಬೆದರಿಸಲು ಮುಂದಾಗಿದ್ದಾನೆ.

ರಾಮ-ಕೃಷ್ಣರ ಲೆಕ್ಕ!

ಗುತ್ತಿಗೆ ನವೀಕರಿಸದೆ ಪತ್ರಕರ್ತರ ಭವನಕ್ಕೆ

ಬೀದಿಗೆ ಬೀಳಲಿದೆ ಕಾರ್ಯನಿರತ ಪತ್ರಕರ್ತರ ಸಂಘ!

ಕಳೆದುಕೊಂಡ ಪತ್ರಕರ್ತರ ಸಂಘದ ಕಚೇರಿ ಕೆಲವೇ ದಿನಗಳಲ್ಲಿ ಬೀದಿಗೆ ಬೀಳಲಿದೆ.

ನಾಡಿನ ಎಲ್ಲಾ ಪತ್ರಕರ್ತರ ಪ್ರಾತಿನಿಧಿಕ ಸಂಸ್ಥೆಯಾದ ಕೆಡಬ್ಲ್ಯೂಜೆಎಸ್‌ಗೆ ತನ್ನದೇ ಆದ ಇತಿಹಾಸ ಇದೆ. ಡಿ.ವಿ. ಗುಂಡಪ್ಪ, ಗುರುಪಾದಸ್ವಾಮಿ, ಖಾದ್ರಿ ಶಾಮಣ್ಣ ಜೋಸೆಫ್‌ರಂತಹ ಖ್ಯಾತನಾಮರು ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಸದಾ ಅಧಿಕಾರಸ್ಥರ ಸನಿಹದಲ್ಲಿಯೇ ಸುಳಿದಾಡುವ ಪತ್ರಕರ್ತರು, ತಮ್ಮದೇ ಸಂಘಕ್ಕೆ ಸ್ವಂತ ಕಟ್ಟಡ ನಿರ್ಮಿಸಲು ಸಾಧ್ಯವಾಗದಿರುವದು ಇಚ್ಛಾಶಕ್ತಿಯ ಕೊರತೆಯಿಂದ ಎಂಬುದಂತೂ ಸತ್ಯ.

ಹಾಲಿ ಸಂಘದ ಕಚೇರಿ ಇರುವುದು ಬೆಂಗಳೂರು ತಾಲ್ಲೂಕು. ಕಚೇರಿ ಪಕ್ಕದ ಕಂದಾಯ ಇಲಾಖೆಯ ಬಾಡಿಗೆ ಕಟ್ಟಡದಲ್ಲಿ, ಕಿಷ್ಕಿಂದೆಯಂತಹ ಜಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಘದ ಕಚೇರಿಯಲ್ಲಿ ಇಂದೂ ಸಹ ವ್ಯವಸ್ಥಿತವಾಗಿ ಕಾರ್ಯಕ್ರಮವೊಂದನ್ನು ರೂಪಿಸಲು ಸಾಧ್ಯವಾಗದಿರುವುದು ಆಶ್ಚರ್ಯದ ಸಂಗತಿ.

ಸಂಘದ ಕಚೇರಿಯ ಸಂಕೀರ್ಣ ವ್ಯವಸ್ಥೆಯನ್ನು ನೋಡಿಯೇ, 1976 ರಲ್ಲಿ ಆಂದಿನ ರಾಜ್ಯಪಾಲ ಧರ್ಮವೀರ, ಪತ್ರಕರ್ತರ ಭವನ ನಿರ್ಮಾಣಕ್ಕೆಂದು ಸಂಘದ ಮುಂಭಾಗದಲ್ಲಿರುವ 150X42.6 ವಿಸ್ತೀರ್ಣದ ನಿವೇಶನವನ್ನು ಗುತ್ತಿಗೆ ಆಧಾರದಲ್ಲಿ ಕೆಡಬ್ಲ್ಯೂಜೆಎಸ್‌ಗೆ ಮಂಜೂರು ಮಾಡಿದ್ದರು.

ಆದರೆ ಅಧಿಕಾರಕ್ಕೆ ಬಂದ ಎಲ್ಲರೂ, ಪತ್ರಕರ್ತರ ಭವನ ನಿರ್ಮಾಣದ ಬಗ್ಗೆ ತೋರಿದ ನಿರ್ಲಕ್ಷ್ಯವೇ ಸಂಘದ ಇಂದಿನ ದುಸ್ಥಿತಿಗೆ ಕಾರಣವಾಗಿದೆ. ಅದರಲ್ಲೂ ಆಡಳಿತ ಮಂಡಳಿ ಚುನಾವಣೆಯಲ್ಲಿ ವಿ. ವೆಂಕಟೇಶ್ ಎಂಬ ಬೇಜವಾಬ್ದಾರಿ ವ್ಯಕ್ತಿ ಅಧ್ಯಕ್ಷನಾದ ಮೇಲಂತೂ ಸಂಘದಲ್ಲಿ ಬಿಕ್ಕಟ್ಟು ಸೃಷ್ಟಿಯಾಗಿದೆ.

ಸರ್ವಾಧಿಕಾರಿ ಧೋರಣೆ

ಈ ಹಿಂದೆ ಸಂಘದ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ, ರಾಜ್ಯ ಮಂಡಳಿಯ ಬೈಲಾವನ್ನೇ ಗಾಳಿಗೆ ತೂರಿ, ಸದಸ್ಯತ್ವ ನೊಂದಣಿ ಮಾಡಿದ್ದ ವೆಂಕಟೇಶ್, ಪತ್ರಕರ್ತರಿಂದಲೇ ಟೀಕೆಗೊಳಗಾಗಿದ್ದರು. ಈತ ಮಾಡಿದ

ಅಧಿಕಾರ ವಹಿಸಿಕೊಂಡ ದಿನದಿಂದಲೂ, ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಕಾರ್ಯಕಾರಿ ಸಮಿತಿಯ ಸಭೆ ಕರೆಯದೆ, ಸರ್ವಾಧಿಕಾರಿಯಂತೆ ವರ್ತಿಸುತ್ತಿರುವ ಈತನ ಧೋರಣೆಯಿಂದ ಬೇಸತ್ತು ಕಾರ್ಯಕಾರಿ ಸಮಿತಿ ಸದಸ್ಯರು ರಾಜೀನಾಮೆ ನೀಡಿ ಹೊರಬರಲು ಸಿದ್ಧರಾಗಿದ್ದಾರೆ.

ನಿವೇಶನದ ಮೌಲ್ಯ 8 ಕೋಟಿ!

ಬೆಂಗಳೂರಿನ ಹೃದಯಭಾಗ ಕಾವೇರಿ ಭವನದ ಪಕ್ಕದಲ್ಲಿಯೇ ಪತ್ರಕರ್ತರ ಭವನ ನಿರ್ಮಾಣಕ್ಕೆ ನೀಡಿದ್ದ ನಿವೇಶನದ ಇಂದಿನ ಮಾರುಕಟ್ಟೆ ಮೌಲ್ಯ 8 ಕೋಟಿ! ಮೂವತ್ತು ವರ್ಷಗಳ ಅವಧಿಗೆ ಗುತ್ತಿಗೆಗೆ ಪಡೆದಿದ್ದ ಈ ನಿವೇಶನದಲ್ಲಿ ಸುಸಜ್ಜಿತವಾದ ಪತ್ರಕರ್ತರ ಭವನ ನಿರ್ಮಿಸಬೇಕೆಂಬುದು ಹಿಂದಿನ ಕಾರ್ಯಕಾರಿ ಸಮಿತಿಯ ಸದಸ್ಯರು ಸೇರಿದಂತೆ ರಾಜ್ಯದ ಎಲ್ಲಾ ಪತ್ರಕರ್ತರ ಕನಸು....

ಪತ್ರಕರ್ತರ ಸಂಘಕ್ಕೆ ಅದೇನು ಶಾಪವೋ! ಅಧ್ಯಕ್ಷ ಪದವಿಗೆ ಬಂದವರೆಲ್ಲರೂ ಪತ್ರಕರ್ತರ ಭವನ ನಿರ್ಮಿಸುವ ಮಾತನ್ನು ಆಡುತ್ತಲೇ ಇದ್ದಾರೆ. ಸಾಧನೆ ಮಾತ್ರ ಸೊನ್ನೆ. ಈಗಿನ ಅಧ್ಯಕ್ಷ ವೆಂಕಟೇಶ್ ಇದನ್ನೇ ಹೇಳಿ ಅಧಿಕಾರಕ್ಕೆ ಬಂದಿದ್ದು, ಈತ ಕಟ್ಟಡ ನಿರ್ಮಿಸುವುದಿರಲಿ... ನಿವೇಶನದ ಗುತ್ತಿಗೆಯನ್ನು ನವೀಕರಿಸಿದರೆ ಸಾಕಿತ್ತು....

ತನ್ನ ಅಧ್ಯಕ್ಷಗಿರಿಯ ಅವಧಿಯಲ್ಲಿ ನಿವೇಶನದ ಗುತ್ತಿಗೆ ಅವಧಿ ಮುಗಿಯುತ್ತಾ ಬಂದರೂ, ನವೀಕರಣಕ್ಕೆ ಈತ ಮುಂದಾಗಲಿಲ್ಲ, ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳಿಗೂ ವಿಷಯ ತಿಳಿಸಿಲ್ಲ, ಈತನ ಬೇಜವಾಬ್ದಾರಿಯಿಂದ ಕಂದಾಯ ಇಲಾಖೆ ನಿವೇಶನವನ್ನು ವಾಪಸ್ಸು ಪಡೆದುಕೊಂಡಿದೆ, ಇದರೊಂದಿಗೆ ಪತ್ರಕರ್ತರ ಭವನದ

ಪತ್ರಕರ್ತರ ಸಂಘದ ಕಟ್ಟಡ



ಎಳ್ಳು-ನೀರುಬಿಟ್ಟ ವೆಂಕಟೇಶ್, ಸಂಘದ ಹಣಕಾಸಿನ ವ್ಯವಹಾರದಲ್ಲೂ ರಾಮ-ಕೃಷ್ಣನ ಲೆಕ್ಕ ತೋರಿಸಿದ್ದಾನೆ. ಪತ್ರಕರ್ತರ ನ್ಯಾಷನಲ್ ಕೌನ್ಸಿಲ್ ಮೆಂಬರ್ ಚುನಾವಣೆ ಸಮಯದಲ್ಲಿ ಪ್ರತಿಯೊಬ್ಬ ಸದಸ್ಯರಿಂದ ತಲಾ 1 ಸಾವಿರ ವಸೂಲಿ ಮಾಡಿದ್ದಾನೆ. ಆಯ್ಕೆಯಾದ ಸದಸ್ಯರಿಗೆ ರಾಷ್ಟ್ರೀಯ ಮಂಡಳಿ ಸದಸ್ಯರೆಂದು ಅದ್ಯಾವುದೋ ಸರ್ಟಿಫಿಕೇಟ್ ನೀಡಿದ್ದಾನೆ. ಆದರೆ ಈ ಸದಸ್ಯರ ಸ್ಥಿತಿ ಮಾತ್ರ ಎಡಬಿಡಂಗಿಯಾಗಿದೆ. ಕಾರಣ, ಸದಸ್ಯರಿಂದ ವಸೂಲಿ ಮಾಡಿದ ಹಣವನ್ನು ವೆಂಕಟೇಶ್ ರಾಷ್ಟ್ರೀಯ ಮಂಡಳಿಗೆ ಕಟ್ಟಿಯೇ ಇಲ್ಲ.

ನಿಯಮಬಾಹಿರ ಸದಸ್ಯತ್ವ

ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ಸದಸ್ಯರಾಗ ಬಯಸುವವರು, ತಾವು ಕಾರ್ಯ ನಿರ್ವಹಿಸುವ ಜಿಲ್ಲೆಯ ಸಮಿತಿಯಿಂದ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಬೇಕು. ಜಿಲ್ಲಾ ಸಮಿತಿಯ ಅನುಮೋದನೆಯೊಂದಿಗೆ ರಾಜ್ಯ ಸಮಿತಿ ಸದಸ್ಯತ್ವ ನೀಡಬೇಕು, ಇದು ಸಂಘದ ಬೈಲಾದಲ್ಲಿಯೇ ಇದೆ.

ಸಂಘದ ಬೈಲಾವನ್ನೇ ಗಾಳಿಗೆ ತೂರಿದ ವೆಂಕಟೇಶ್, 2500 ರಷ್ಟಿದ್ದ ಸಂಘದ ಸದಸ್ಯತ್ವವನ್ನು ಈಗ 5000 ಕ್ಕೆ ಏರಿಸಿದ್ದಾರೆ. ಹೊಸದಾಗಿ ಸದಸ್ಯತ್ವ ನೊಂದಣಿ

ಮಾಡಿಸಿದವರ ಹೆಸರು ಯಾವುದೇ ಜಿಲ್ಲಾ ಸಮಿತಿಯಿಂದ ಅನುಮೋದನೆಗೊಂಡು ಬಂದಿಲ್ಲ, ಈ ಸದಸ್ಯರಿಂದ ವಸೂಲಿಯಾದ 8 ಲಕ್ಷ ಸದಸ್ಯತ್ವದ ಹಣವೂ ಸಂಘದ ಅಕೌಂಟಿಗೆ ಜಮೆಯಾಗಿಲ್ಲ.

ವಾಪಸ್ಸು ಹೋದ 50 ಲಕ್ಷ

ಹಿಂದಿನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳ ಹೋರಾಟದಿಂದ, ರಾಜ್ಯ ಸರ್ಕಾರ ಕಳೆದ ವರ್ಷ ಪತ್ರಕರ್ತರ ಕ್ಷೇಮಾಭಿವೃದ್ಧಿ ನಿಧಿಗೆಂದು 50 ಲಕ್ಷ ರೂಪಾಯಿ ಮಂಜೂರು ಮಾಡಿದೆ. ಆದರೆ ಸಂಘದ ಅಧ್ಯಕ್ಷರ ಅದಕ್ಷತೆ, ಬೇಜವಾಬ್ದಾರಿಯಿಂದ ಈ ಹಣ ವಾರ್ತಾ ಇಲಾಖೆ ಅಧೀನಕ್ಕೆ ಸೇರಿ ಹೋಗಿದೆ. ಕ್ಷೇಮಾಭಿವೃದ್ಧಿ ನಿಧಿಯಿದ್ದರೂ ಅನಾರೋಗ್ಯಕ್ಕೊಳಗಾದ ಪತ್ರಕರ್ತರು ಅದರ ಉಪಯೋಗ ಪಡೆಯದಂತಹ ಸ್ಥಿತಿ ನಿರ್ಮಾಣವಾಗಿದೆ.

ಕ್ಷೇಮಾಭಿವೃದ್ಧಿ ನಿಧಿ ಸಲಹಾ ಸಮಿತಿಗೆ ಸದಸ್ಯರ ಹೆಸರನ್ನು ಸೂಚಿಸುವಂತೆ ವಾರ್ತಾ ಇಲಾಖೆ ಕೋರಿದರೆ ಕಾರ್ಯಕಾರಿ ಸಮಿತಿಯ ಸದಸ್ಯರ ಹೆಸರನ್ನು ಶಿಫಾರಸು ಮಾಡದ ಅಧ್ಯಕ್ಷರು, ಪ್ರೆಸ್ ಕ್ಲಬ್, ಮಾಧ್ಯಮ ಅಕಾಡೆಮಿ ಸದಸ್ಯರನ್ನು ನೇಮಕ ಮಾಡಿಕೊಳ್ಳುವಂತೆ ಸೂಚಿಸಿ ಕಾರ್ಯನಿರತ ಪತ್ರಕರ್ತರ ಹಿತಾಸಕ್ತಿಯನ್ನೇ ಕಡೆಗಣಿಸಿದ್ದಾರೆ.

ಪ್ರಶ್ನೆ ಮಾಡಿದ್ದಕ್ಕೆ ವಜಾ!

ಪತ್ರಕರ್ತರ ಭವನದ ನಿವೇಶನ, ಸಂಘದ ಹಣಕಾಸಿನ ಲೆಕ್ಕವನ್ನು ನೀಡುವಂತೆ ಸಂಘದ ಸಭೆಯಲ್ಲಿ ಪ್ರಶ್ನಿಸಿದ ಚಿತ್ರದುರ್ಗ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರನ್ನು ಯಾವುದೇ ಕಾರಣ ನೀಡದೆ, ರಾಜ್ಯ ಸಮಿತಿಯ ಗಮನಕ್ಕೂ ತಾರದೆ ವಜಾ ಮಾಡಲಾಗಿದೆ. ಅಧ್ಯಕ್ಷ ವೆಂಕಟೇಶ್‌ನ ಅವ್ಯವಹಾರಗಳನ್ನು ಪ್ರಶ್ನಿಸಬಾರದೆಂಬ ಪರಿಸ್ಥಿತಿ ಈಗ ಸಂಘದಲ್ಲಿ ನಿರ್ಮಾಣ ಆಗಿದೆ.

ರಾಜ್ಯ ಸಮ್ಮೇಳನಕ್ಕೆ ಆಹ್ವಾನವಿಲ್ಲ


ಅಧ್ಯಕ್ಷರ ಅದಕ್ಷತೆ, ಹಣಕಾಸಿನ ಅವ್ಯವಹಾರಗಳೆಲ್ಲವನ್ನೂ ಜುಲೈ ತಿಂಗಳಲ್ಲಿ ನಡೆದ ಕಾರ್ಯನಿರತ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಸ್ತಾಪಿಸಬೇಕೆಂದಿದ್ದ ರಾಜ್ಯ ಸಮಿತಿಯ ಪದಾಧಿಕಾರಿಗಳನ್ನು ವೆಂಕಟೇಶ್ ಸಮ್ಮೇಳನಕ್ಕೆ ಆಹ್ವಾನಿಸದೆ ಸಮ್ಮೇಳನದಿಂದ ಹೊರಗಿಟ್ಟಿದ್ದಾನೆ.

ಅಧ್ಯಕ್ಷರ ಆದಕ್ಷತೆ, ಅವ್ಯವಹಾರದಿಂದಾಗಿ ಪತ್ರಕರ್ತರ ಸಂಘ ಈಗ ಬೀದಿಗೆ ಬಿದ್ದಿದೆ. ರಾಜ್ಯದ ಪತ್ರಕರ್ತರು ಈಗಲೂ ಎಚ್ಚೆತ್ತುಕೊಳ್ಳದಿದ್ದರೆ, ಕೆಲವೇ ತಿಂಗಳಲ್ಲಿ ಕಂದಾಯ ಇಲಾಖೆ ಹಾಲಿ ಕಚೇರಿ ಇರುವ ಕಟ್ಟಡವನ್ನು ನೆಲಸಮ ಮಾಡಲಿದೆ. ಅಲ್ಲಿಗೆ ಪತ್ರಕರ್ತರ ಸಂಘ ಬೀದಿಗೆ ಬಿದ್ದಂತೆಯೇ.

ಹಾಗಾಗದಂತೆ ನೋಡಿಕೊಳ್ಳುವುದೇ ಈಗ ಪತ್ರಕರ್ತರ ಮೇಲಿರುವ ಜವಾಬ್ದಾರಿ.

-ಸ್ವಾಮಿಗೌಡ

ಬಸವೇಶ್ವರ ನಗರಕ್ಕೆ ಇಬ್ಬರು ಕೌನ್ಸಿಲರ್ಸ್ ಅಸಲಿ ಯಾರು? ನಕಲಿ ಯಾರು?


ಉಮಾವತಿ


ಬೆಂಗಳೂರಿನ ಬಸವೇಶ್ವರನಗರ ವಾರ್ಡ್ ನಂ. 19 ರ ಕತೆಯಿದು. ಇಲ್ಲಿ ಕಾರ್ಪೊರೇಟರ್ ಬಿಜೆಪಿಯ ಉಮಾವತಿ ಪದ್ಮರಾಜ್.

ಆದರೆ ಈಕೆಯ ವಿಸಿಟಿಂಗ್ ಕಾರ್ಡ್‌ನ ಇನ್ನೊಂದು ಬದಿಗೆ ಅವಳ ಪತಿ ಪದ್ಮರಾಜ್ ತನ್ನ ವಿಸಿಟಿಂಗ್ ಕಾರ್ಡ್ ಪ್ರಿಂಟ್ ಹಾಕಿಸಿ ಕೆಳಗೆ ಕೌನ್ಸಿಲರ್ ಎಂದು ಬರೆದುಕೊಂಡು ವಸೂಲಿ ಕಾರ್ಯದಲ್ಲಿ ಹಗಲಿರುಳು ತೊಡಗಿದ್ದಾನೆ. ಈ ಕಾರ್ಡಿನ ಪ್ರಕಾರ ಪತಿ-ಪತ್ನಿಯರ ಇಬ್ಬರ ಲ್ಯಾಂಡ್ ಲೈನೂ ಒಂದೇ. ಪದ್ಮರಾಜ್‌ನ ಮೊಬೈಲ್ ನಂಬರೇ ಉಮಾವತಿಯ ಮೊಬೈಲ್ ನಂಬರ್ ಕೂಡಾ ಹೌದು. ಅಂದರೆ ಉಮಾವತಿಗೆ ಕಾಲ್ ಮಾಡಿದ್ರೆ ರಿಸೀವ್ ಮಾಡಲು ತುದಿಗಾಲ ಮೇಲೆ ನಿಂತಿದ್ದಾನೆ ಪತಿ ಪದ್ಮರಾಜ್ ಎಂಬೀ ರೌಡಿ ಫೆಲೋ. ಕಾನೂನೆಲ್ಲವನ್ನೂ ಪಾಲಿಕೆಯ ಕಸದ ತೊಟ್ಟಿಗೆ ಹಾಕಿರುವ ಪದ್ಮರಾಜ್ ತಾನೇ ಕೌನ್ಸಿಲರ್ ಎಂದು ಬೊಗಳುತ್ತಾ, ಅದನ್ನೇ ಅಧಿಕೃತ ಎಂಬಂತೆ ಪ್ರಿಂಟ್ ಹಾಕಿಸಿಕೊಂಡು ತಿರುಗುತ್ತಿರುವುದು ಪಾಲಿಕೆಯ ಕಮಿಷನರ್ ಗಮನಕ್ಕೆ ಬಂದಿಲ್ಲವೇ? ಬಸವೇಶ್ವರ ನಗರದ ವಿರೋಧ ಪಕ್ಷದ ನಾಯಕರೂ ನಿದ್ದೆ ಹೊಡೆಯುವುದರಲ್ಲಿ ಮಗ್ನರಾಗಿದ್ದಾರೆಯೇ?

'ಪದ್ದಿ'ಗೆ ಮದ್ದಿಲ್ಲವೆ?

ಕಳೆದ ಬಾರಿ ಈ 'ಪದ್ದಿ' ಕೌನ್ಸಿಲರ್ ಆಗಿ ಇಡೀ ವಾರ್ಡ್‌ನ್ನು ಗುಡಿಸಿ ಗುಂಡಾಂತರ ಹಾಕಿದ. ಕಳೆದ ಬಾರಿ ಮಹಿಳಾ ಮೀಸಲು ಬಂದಿದ್ದರಿಂದ ಪತ್ನಿ ಉಮಾವತಿಯನ್ನು ಬೋಗಸ್ ಓಟುಗಳ ಮೂಲಕ ಗೆಲ್ಲಿಸಿ "ಜನ ನನ್ನ ನೋಡಿ ನನ್ನ ಹೆಂಡ್ತಿಗೆ ಓಟು ಜಡಿದವರೆ. ಆದ್ದರಿಂದ ನಾನೇ ಕಾರ್ಪೊರೇಟರ್" ಎಂದು ಮೇಯಲು ಶುರುವಿಟ್ಟ.

ಸಾಣೆ ಗುರುವನಹಳ್ಳಿಯ ಕುರುಬರ ಹಟ್ಟಿಯಲ್ಲಿ ವಾಸವಾಗಿದ್ದ, ಮಿನರ್ವ ಮಿಲ್‌ನ ಸಾಮಾನ್ಯ ನೌಕರನಾಗಿದ್ದ ಹುಲಿಯಪ್ಪನ 3 ನೇ ಗಂಡು ಮಗನೇ ಈ ಪದ್ದಿ ಅಲಿಯಾಸ್ ಪದ್ಮರಾಜ್.



7 ನೇ ಕ್ಲಾಸಿಗೇ ಓದಿಗೆ ಬೈಬೈ ಹೇಳಿದ ಪದ್ದಿ ಹುಡುಗಿಯರನ್ನು ಚುಡಾಯಿಸುತ್ತಾ ಚಿಲ್ರೆ ಕೆಲಸಗಳಿಗೆ ಕೈ ಹಾಕಿ ಬಸವೇಶ್ವರ ನಗರದ ಪೊಲೀಸ್ ಸ್ಟೇಷನ್‌ನಲ್ಲಿ ಅತಿಥಿಯಾಗಿ ಆತಿಥ್ಯ ಸ್ವೀಕರಿಸುವುದನ್ನು hobby ಮಾಡಿಕೆ. ಂಡ. ಇಲೆಕ್ಷನ್‌ಗಳಲ್ಲಿ ಓಡಾಡುತ್ತಾ ಸಕಲ ತಂತ್ರಗ[illegible] ಕಲಿತ. ಕೊನೆಗೆ ಪಕ್ಷೇತರನಾಗಿ ನಿಂತೇಬಿಟ್ಟ.


ಕುರುಬರು, ಲಿಂಗಾಯತರು, ಒಕ್ಕಲಿಗರೇ ಹೆಚ್ಚಿರುವ ಬಸವೇಶ್ವರ ನಗರ ವಾರ್ಡ್‌ನಲ್ಲಿ ತನ್ನ ಕುರುಬ ಜನಾಂಗಕ್ಕೆ ಇಲ್ಲದ ಆಮಿಷ ಒಡ್ಡಿದ. ಬಿಜೆಪಿಯ ಒಕ್ಕಲಿಗ ಅಭ್ಯರ್ಥಿ ವಿರುದ್ಧ ಲಿಂಗಾಯತರನ್ನು ಎತ್ತಿಕಟ್ಟಿದ. ಕೊನೆಗೆ ಕೈಲಿ ಟಿಕ್-ಟ್ವೆಂಟಿ ಹಿಡಿದುಕೊಂಡು "ಹಳೇದೆಲ್ಲಾ ಕ್ಷಮಿಸಿಬಿಡಿ. ತಪ್ಪಾಯ್ತು" ಎಂದು ಗಿಮಿಕ್ ಮಾಡಿ ಗೆದ್ದೇಬಿಟ್ಟ.

ಶುರು ಮಾಡಿದ ನೋಡಿ ನುಂಗಾಟವನ್ನು! ಸಹೋದರ ಪುಷ್ಪರಾಜ್ ಅಲಿಯಾಸ್ ಪುಪಿಗೆ ಪಾಲಿಕೆಯ ಕಾಂಟ್ರಾಕ್ಟ್ ಕೆಲಸ ಕೊಡಿಸಿ ಹಗಲು ರಾತ್ರಿ ಹಣ ಎತ್ತತೊಡಗಿದ. ಕೆರೆ ನುಂಗಿದ. ಆಟದ ಮೈದಾನ ಮಾಡುವೆನೆಂದ. ಕೊನೆಗೆ ತನ್ನ ಸಂಬಂಧಿಕರಿಗೆ ಅದನ್ನು ಮಾರಿ ತನ್ನ ಅಸಲಿ ಬುದ್ಧಿ ತೋರಿಸಿಬಿಟ್ಟ. ಒಂದಿಷ್ಟು ಭೂಮಿಯನ್ನು ಪೆಟ್ರೋಲ್ ಬಂಕ್‌ನವರಿಗೆ ಮಾರಿದ. ಕೊನೆಗೆ ಅದ್ಹೇಗೋ ಕಾಂಗ್ರೆಸ್ ಹೊಕ್ಕು ಕುಳಿತ. ಕೆರೆಯ ಒಂದಿಷ್ಟು ಜಾಗದಲ್ಲೇ 12 ಮನೆ ಕಟ್ಟಿಸಿ ಬಾಡಿಗೆಗೆಬಿಟ್ಟ.

2001 ರ ಚುನಾವಣೆಯಲ್ಲಿ ಈ ವಾರ್ಡು ಮಹಿಳಾ ಮೀಸಲು ಕ್ಷೇತ್ರವಾಯ್ತು..

ಅಶೋಕ್ ಆಶೀರ್ವಾದ?

ಉತ್ತರಹಳ್ಳಿ ಎಂಎಲ್‌ಎ, ಈಗಿನ ಸಚಿವ ಆರ್. ಅಶೋಕ್‌ಗೆ ದುಂಬಾಲು ಬಿದ್ದು ಬಿಜೆಪಿಯ ಟಿಕೆಟ್ ಪಡೆದು ಹೆಂಡತಿಯನ್ನು ಗೆಲ್ಲಿಸಿಯೂ ಬಿಟ್ಟ. ಪಾಪ, ಉಮಾವತಿ ಹೆಸರಿಗೆ ಮಾತ್ರ ಕೌನ್ಸಿಲರ್.


ಪದ್ಮರಾಜ

ಎಲ್ಲಾ ಪದ್ದಿಯದೇ ವ್ಯವಹಾರ, ತನ್ನ ಕುಲದ ಸಿದ್ಧರಾಮಯ್ಯ ಡಿಸಿಎಂ ಆಗಿದ್ದಾಗ ಅಪಾರ ಫಂಡ್ಸ್ ತಂದು ಸ್ವಾಹಾ ಮಾಡಿ, ಈಗ ಹತ್ತತ್ತು ದಿನ ಆಸ್ಟ್ರೇಲಿಯಾ ಟ್ರಿಪ್ ಮಾಡಬಲ್ಲಷ್ಟು ರಿಚ್ ಆಗಿದ್ದಾನೆ ಪರಮಭ್ರಷ್ಟ ಪದ್ದಿ.

ಕಳೆದ ತಿಂಗಳಷ್ಟೇ 1 ಲಕ್ಷ ವಿದ್ಯಾರ್ಥಿಗಳಿಗೆ ಬುಕ್ ಹಂಚ್ತೇನಿ ಅಂತಾ ವಸೂಲಿ ಮಾಡಿದ. ನೆಟ್ಟಗೆ 10 ಸಾವಿರ ಪುಸ್ತಕ ಹಂಚಲಿಲ್ಲ ಈ ಕಳ್ಳ ಪದ್ದಿ.

ಪದ್ದಿಯ ತಮ್ಮ ಕಳ್ಳ ಕಂಟ್ರಾಕ್ಟರ್ ಪುಪಿ, ಮಾಲಿನ್ಯ ನಿಯಂತ್ರಣ ಮಂಡಳಿಯ ಇಂಜಿನಿಯರ್ ಒಬ್ಬರಿಗೆ ಅವಾಚ್ಯವಾಗಿ ಬೈದು ಕೇಸು ಹೆಟ್ಟಿಸಿಕೊಂಡಿದ್ದಾನೆ.

ಹೆಣ್ಣುಮಕ್ಕಳಿಗೆ ಅಧಿಕಾರ ನೀಡುವ ಸಂವಿಧಾನವನ್ನೇ ಅಣಕಿಸುವಂತೆ ಪದ್ದಿ ರಾಜಾರೋಷವಾಗಿ ಅಕ್ರಮವಾಗಿ ತಾನೇ ಕೌನ್ಸಿಲರ್ ಎಂದು ಮೆರೆಯುತ್ತಿದ್ದಾನೆ.

ಪಾಲಿಕೆ ಏನು ಮಾಡುತ್ತಿದೆ?

ವಿರೋಧ ಪಕ್ಷಗಳೂ ಇವರಲ್ಲಿ ಶಾಮೀಲಾ?


-ವರದಿಗಾರ

ಸುನೀಲ್ ಹೆಗ್ಗರವಳ್ಳಿಯ ಕ್ರೈಂ ಅಂಡ್ ಡೈರಿ

ಮೈಸೂರಿನ ಒಡನಾಡಿ ಸಂಸ್ಥೆಯು ವೇಶ್ಯಾವಾಟಿಕೆ ಜಾಲಗಳ ವಿರುದ್ಧ ಹೋರಾಡುತ್ತಿರುವ ವಿಚಾರ ಕರ್ನಾಟಕ ಪ್ರಜ್ಞಾವಂತ, ಮಾನವೀಯ ಕಾಳಜಿಗಳಿರುವ ಜನರಿಗೆಲ್ಲಾ ಗೊತ್ತಿದೆ. ಆದರೆ ಮತ್ತೊಂದು ಕಡೆ ಒಡನಾಡಿಯ ಹೆಸರೆತ್ತಿದರೆ ಸಾಕು ಉರಿದು ಬೀಳುವ ಅವಿವೇಕಿಗಳಿಗೇನೂ ಕೊರತೆಯಿಲ್ಲ, ಇಂತವರಲ್ಲಿ ಬಹುತೇಕರು ಪಿಂಪ್‌ಗಳು, ಭ್ರಷ್ಟ ಪೊಲೀಸರು, ಫರ್‌ವಾಲಿಗಳಿದ್ದಾರೆ. ಕಳೆದ ವಾರ ಮಂಗಳೂರಿನ ವಂದನಾ ಎಂಬ ಹುಡುಗಿಯ ಮೇಲೆ ಒಡನಾಡಿಯ ಪರಶುರಾಂ ಹಲ್ಲೆ ನಡೆಸಿದರೆಂಬ ಗಲಾಟೆಗಳಾಗಿ ಪರಶು ಅರೆಸ್ಟ್ ಆಗಿದ್ದೂ ಇಂತದ್ದೇ ಒಂದು ಪಿತೂರಿಯಿಂದ ಎಂಬುದೀಗ ಬಯಲಾಗಿದೆ. ಸ್ವತಃ ವಂದನಾಳ ತಂದೆ-ತಾಯಿ ಮಂಗಳೂರಿನಿಂದ ಬಂದು ತಮ್ಮ ಮಗಳೇ ಆಗಿದ್ದರೂ ವಂದನಾಳ ಅವಿವೇಕದ ವರ್ತನೆಯನ್ನು ಪತ್ರಕರ್ತರಿಗೆ ತಿಳಿಸಿ ಒಡನಾಡಿಯ ಪರವಾಗಿ ಮಾತನಾಡಿ ಹೋಗಿದ್ದಾರೆ. ಪರಶುರಾಂ ಈಗ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ.

ಇವೆಲ್ಲಾ ವಿವಾದ ತಿಳಿಯಾಗುತ್ತಿದ್ದಂತೆ ಅಖಾಡಕ್ಕಿಳಿದವನು ಈ ಟೀವಿ ಕ್ರೈಂ ಡೈರಿಯ ಸುನೀಲ್ ಹೆಗ್ಗರವಳ್ಳಿ. ಈ ಗಲಾಟೆಯ ಸುದ್ದಿ ಕಿವಿಗೆ ಬೀಳುತ್ತಿದ್ದಂತೆ 'ಇಂದೆನಗೆ ಆಹಾರ ಸಿಕ್ಕಿತು' ಎಂದುಕೊಂಡು ಗಡಿಬಿಡಿಯಿಂದ ಮೈಸೂರಿಗೆ ಓಡಿದ್ದಾನೆ ಸುನೀಲ್. ಸೀದಾ ಒಡನಾಡಿ ಆಫೀಸ್‌ನೊಳಕ್ಕೆ ನುಗ್ಗಿ ಅಲ್ಲಿದ್ದ ಸ್ಟ್ಯಾನ್ಲಿಗೆ "ನಾವು ಈ ಟಿವಿಯವರು, ನಿಮ್ಮ ಇಂಟರ್‌ವ್ಯೂ ಬೇಕು" ಎಂದು ಹೇಳಿದೆ ಈ ಸುನೀಲ್ ಎಂಬ ಡಿಟೆಕ್ಟಿವ್. ಸ್ಟ್ಯಾನ್ಲಿ "ಎಲ್ಲಿ ನಿಮ್ಮ ಐಡೆಂಟಿಟಿ ಕಾರ್ಡ್ ತೋರಿಸಿ" ಎಂದಾಗ "ಇಲ್ಲಾ ನಾವು ಕ್ರೈಂ ಡೈರಿ ಟೀಂ" ಎಂದುತ್ತರಿಸಿದೆ. ಅದಕ್ಕೆ ಸ್ಟ್ಯಾನ್ಲಿ "ಸಾರಿ ನಿಮಗೆ ನಮ್ಮ ಸಂಸ್ಥೆ ಬಗ್ಗೆ ಪೂರ್ವಾಗ್ರಹವಿದೆ, ನಾವು ಮಾತಾಡಲ್ಲ, ನೀವು ಹೋಗಬಹುದು" ಎಂದಾಗ "ಯಾಕ್ರೀ ಮಾತಾಡಲ್ಲ" ಎಂದು ಚೀರಿಕೊಂಡಿದ್ದಾನೆ ಸುನೀಲ. ಈ ಗಲಾಟೆ ಕೇಳಿ ಹತ್ತಿರದಲ್ಲೇ ಇದ್ದ ಕುಕ್ಕರಹಳ್ಳಿ ಏರಿಯಾದ ಹುಡುಗರು ಧಾವಿಸಿ ಬಂದು ಸುನೀಲನಿಗೆ ಲಾತ ಕೊಡುವಷ್ಟರಲ್ಲಿ ಅವನು ಒಡನಾಡಿಯಿಂದ ಪರಾರಿಯಾಗಿದ್ದಾನೆ.

ಹಾಗೆ ಓಡಿ ಹೋದವನು ಸುಮ್ಮನಿರಲಾಗದೆ ಅವತ್ತೇ ರಾತ್ರಿ ಮೂರ್ನಾಲ್ಕು ಯುವಕರನ್ನು ಒಡನಾಡಿ ಆಫೀಸ್ ಹತ್ತಿರ ಕಳಿಸಿ ತಾನು ಪಕ್ಕದಲ್ಲೇ ಕಾರಿನೊಳಗೆ ಕ್ಯಾಮರಾ ಇಟ್ಟುಕೊಂಡು ಕೂತಿದ್ದಾನೆ. ಆ ಯುವಕರು ವಾಚ್‌ಮೆನ್ ಹತ್ತಿರ ಮಾತಾಡುತ್ತಾ "ಇಲ್ಲಿ ಹುಡುಗಿಯರು ಸಿಗ್ತಾರಾ, ರೇಟೆಸ್ಟು, ಒಳಗೆ ಬಿಡ್ತೀಯಾ" ಎಂದೆಲ್ಲಾ ಕುಶಾಲಿನಿಂದ ಮಾತನಾಡುತ್ತಿದ್ದರೆ ಈ ಸಾಹಸಿ ಟಿವಿ ಪತ್ರಕರ್ತ ಅದನ್ನೇ ಶೂಟ್ ಮಾಡಿಕೊಂಡಿದ್ದಾನೆ. ಒಡನಾಡಿಯೊಳಗೆ ಇಂತದ್ದೆಲ್ಲಾ ನಡೆಯುತ್ತಿದೆ ಎಂದು ಬಿಂಬಿಸುವುದೇ ಸುನೀಲನ ದುರುದ್ದೇಶವಾಗಿತ್ತು. ಅಂದಹಾಗೆ ಅವತ್ತು ರಾತ್ರಿ ವಿಟಪುರುಷರಂತೆ ನಟಿಸಿದ ಯುವಕರು ಸ್ಯಾಂಟ್ರೊ ರವಿ ಎಂಬಾತನ ಶಿಷ್ಯರು. ಇವನೊಬ್ಬ ಮೈಸೂರಿನ ತಲೆಹಿಡುಕ, ಹೆಂಗಸರನ್ನು ಮಾರಿ ಹೊಟ್ಟೆ ಹೊರೆದುಕೊಳ್ಳುತ್ತಿರುವ ಹೀನಕ್ರಿಮಿ.


ಸುನೀಲ್ ಹೆಗ್ಗರವಳ್ಳಿ

ಅಂದಹಾಗೆ ಕ್ರೈಂ ಡೈರಿಯ ಈ ಸುನೀಲ್ ಹೆಗ್ಗರವಳ್ಳಿಗೆ ಒಡನಾಡಿಯಲ್ಲಿರುವ ಈ ಮಹಿಳೆಯರ ಬಗ್ಗೆ ಯಾಕಿಷ್ಟು ಅಸಹನೆ? ಜೇಮ್ಸ್ ಬಾಂಡ್‌ನಂತೆ ಯಾಕೆ ವಿಚಿತ್ರ ರೀತಿಯ ತನಿಖೆ ಮಾಡಲು ಹೋಗಿದ್ದ? ಎಂಬ ಬಗ್ಗೆ ಒಂದು ಸಚಿತ್ರ ತನಿಖೆಯಾದರೆ ಉತ್ತಮ ಎನಿಸುತ್ತದೆ. ಏಕೆಂದರೆ ಅಪಾರವಾಗಿ ಸ್ತ್ರೀಪಕ್ಷಪಾತಿಯಾಗಿರುವ ಸುನೀಲ್ ಈ ಹಿಂದೆ ನೊಂದ, ಅಬಲೆ ಮಹಿಳೆಯರ ರಕ್ಷಣೆಗೆ ಸದಾ ತುದಿಗಾಲಲ್ಲಿ ನಿಂತಿರುತ್ತಾ ಹಲವಾರು ಎಡವಟ್ಟುಗಳನ್ನು ಮಾಡಿಕೊಂಡಿದ್ದಾನೆ. ಒಡನಾಡಿ ಬಗ್ಗೆ ತನಿಖೆಗೆ ಹೋದ ಒಂದೆರಡು ವಾರ ಮೊದಲು ಭಾರತಿ (ಹೆಸರು ಬದಲಿಸಿದೆ) ಎಂಬ ಮಹಿಳೆಯ ನಾಪತ್ತೆ ಕೇಸಿನಲ್ಲಿ ಸಿಕ್ಕಿಬಿದ್ದು ಜೈಲಿಗೂ ಹೋಗಿ ಬಂದಿದ್ದ. ಅವನ್ನೆಲ್ಲಾ ಒಟ್ಟಿಗೆ ಸೇರಿಸಿದರೆ ಪತ್ರಕರ್ತ 'ಸುನೀಲನ ಸ್ತ್ರೀ ಸಾಹಸ'ಗಳೆಂಬ ನಾಲ್ಕು ಎಪಿಸೋಡುಗಳನ್ನೇ ಟೆಲಿಕಾಸ್ಟ್ ಮಾಡಬಹುದು.


ಡಿಸಿಪಿ ಅಲೋಕ್

ವಠಾರದಲ್ಲಿ ಒದೆ....

ಮೂಡಿಗೆರೆಯ ಹೆಗ್ಗರವಳ್ಳಿಯ ಗಿಡ್ಡೇಗೌಡರ ಮಗ ಸುನೀಲ ಕೆಲ ಕಾಲ ಪವಿತ್ರ ಸಂಜೆ, ನಂತರ ಜಾಣಗೆರೆ ಪತ್ರಿಕೆಯಲ್ಲಿದ್ದ. ನಂತರ ಕ್ರೈಂ ಡೈರಿ ಸೇರಿ ಪ್ರಸಿದ್ಧ ಪತ್ತೇದಾರನೆಂಬ ಖ್ಯಾತಿ ಗಳಿಸಿದ್ದಾನೆ. ಆಗ ಚಾಮರಾಜಪೇಟೆಯ ಟಿಆರ್ ಮಿಲ್ ಹತ್ತಿರ ವಠಾರದ ಮನೆಯೇ ಇವನ ವಾಸಸ್ಥಾನವಾಗಿತ್ತು, ಅದೇಕೋ ಏನೋ ಮನೆ ಮಾಲೀಕರಿಗೆ ತಾನೊಬ್ಬ ಪತ್ರಕರ್ತನೆಂಬ ರಹಸ್ಯವನ್ನು(!) ಸುನೀಲ್ ಹೇಳಿರಲಿಲ್ಲ, ಹೀಗಿರುವಾಗ ವಠಾರದಲ್ಲಿದ್ದ ಹೆಂಗಸರಿಗೆ ಒಂಥರಾ ಇರಿಸುಮುರಿಸು ಭಾವನೆ ಶುರುವಾಯಿತು. ದಿನಾ ಬೆಳಗ್ಗೆ ತಾವು ಕಸ ಗುಡಿಸುವಾಗ, ಪಾತ್ರೆ-ಬಟ್ಟೆ ತೊಳೆಯುವಾಗ, ರಂಗೋಲಿ ಹಾಕುತ್ತಿರುವಾಗ ಯಾರದ್ದೋ ಎರಡು ಕಣ್ಣುಗಳು ತಮ್ಮನ್ನೇ ನೋಡುತ್ತಿರುತ್ತವೆಂಬ ಅನುಮಾನ ಬಂದಿತ್ತು ಅವರಿಗೆ.

ಕೊನೆಗೆ ವಠಾರದ ಗಂಡಸರಿಗೆ ಈ ವಿಚಾರ ಗೊತ್ತಾಗಿ ಅವರೆಲ್ಲಾ ಲೋಕಲ್ ಪತ್ತೇದಾರಿಕೆ ನಡೆಸಿದಾಗ ಆ ಕಣ್ಣುಗಳು ಸುನೀಲ್ ಹೆಗ್ಗರವಳ್ಳಿಯದೆಂಬ ಸತ್ಯಾಂಶ ಗೊತ್ತಾಗಿತ್ತು. ಪಾಪ, ಸುನೀಲ ತನ್ನ ರೂಮಿನೊಳಗಿಂದಲೇ ಕಿಟಕಿ ಹತ್ತಿರ ಕದ್ದು ನಿಂತುಕೊಂಡು ವಠಾರದ ಮಹಿಳೆಯರ ಬೆಳಗಿನ ಚಟುವಟಿಕೆಗಳನ್ನೆಲ್ಲಾ ರೆಪ್ಪೆ ಮಿಟುಕಿಸದೆ ಸ್ಟಡಿ ಮಾಡುತ್ತಿದ್ದನಂತೆ. ಇದರಿಂದ ರೇಗಿ ಹೋದ ವಠಾರದ ಗಂಡಸರು "ಇಂತಾ ದೃಶ್ಯಗಳನ್ನು ನೋಡುವ ನಿರ್ಲಜ್ಜನು, ಪೋಕರಿ ಗುಣದವನು, ಅವಿವೇಕಿಯೂ ಆದ ಸುನೀಲನನ್ನು ಈ ವಠಾರದಿಂದ ಒದ್ದೋಡಿಸುವುದೇ ಒಳಿತು" ಎಂದು ಘೋಷಿಸಿ ಸುನೀಲನ ತಲ್‌ತಲೆ ಮೇಲೆ ಹೊಡೆದು ಹೊರಗೆಸೆದೇಟಿಗೆ ಸುನೀಲ ಬಂದು ಬಿದ್ದಿದ್ದು ಇಸ್ರೋ ಲೇಔಟಿನ ಬಿಎಚ್‌ಸಿಎಸ್ ಲೇಔಟಿಗೆ. ಅಲ್ಲಿ ರಾಮಕೃಷ್ಣಪ್ಪ ಎಂಬುವರ ಮನೆ ಬಾಡಿಗೆಗೆ ಹಿಡಿದ ಸುನೀಲ ಅಲ್ಲೂ ಪತ್ರಕರ್ತನೆಂಬ ತನ್ನ ಗುರುತಿನ 'ಡೈರಿ' ತೆರೆದಿರಲಿಲ್ಲ, ಆದರೆ 'ಕ್ರೈಂ' ಮುಂದುವರೆಸಿದ್ದ.

ಅಲ್ಲೇ ಘಟಿಸಿದ್ದು ಭಾರತಿ ಪ್ರಕರಣವು...

ಕಳೆದ ಜುಲೈ 28 ನೇ ತಾರೀಖು ಸುಬ್ರಮಣ್ಯಪುರಂ ಪೊಲೀಸ್ ಸ್ಟೇಷನ್ನಿನಲ್ಲಿ ಒಂದು ನಾಪತ್ತೆ ಪ್ರಕರಣ ದಾಖಲಾಗಿದೆ. ವೀರಭದ್ರಯ್ಯ ಸ್ವಾಮಿ ಎಂಬ ವ್ಯಕ್ತಿ "ವಿಜಯಕುಮಾರ್, ರಘುನಂದನ್, ಕೃಷ್ಣಮೂರ್ತಿ ಎಂಬುವವರು ನನ್ನ ರೂಮ್‌ಮೇಟ್ ಸುನೀಲ್ ಹೆಗ್ಗರವಳ್ಳಿಯನ್ನು ಕಿಡ್‌ನ್ಯಾಪ್ ಮಾಡಿದ್ದಾರೆ" ಎಂದು ನೀಡಿದ್ದ ದೂರು ಅದು (ಕೇಸ್ ನಂಬರ್ 268/2006). ದಿನಾಂಕ 28.7.2006 ರಂದು ದಾಖಲಾಗಿರುವ ಈ ಕೇಸ್‌ನ ಹಿನ್ನೆಲೆಯಲ್ಲಿ ಭಾರತಿ (ಹೆಸರು ಬದಲಿಸಿದೆ) ಮತ್ತವಳ ಗಂಡ ವಿಜಯಕುಮಾರ್ ನಡುವಿನ ಜಗಳ, ಭಾರತಿಯೊಂದಿಗೆ ಸುನೀಲನ ಪರಾರಿ, ಆನಂತರ ಸುನೀಲನ ಕಿಡ್‌ನ್ಯಾಪ್, ಕೊನೆಗೆ ಈತ ಬೇಜಾನ್ ಒದೆ ತಿಂದ ಘಟನೆಗಳಿವೆ.

ಬಿಳಿದಾಳಿ ಈಶ

ಸುನೀಲ ಬಿಎಚ್‌ಸಿಎಸ್ ಲೇಔಟಿಗೆ ಬರುವ ಮೊದಲು, ಚಾಮರಾಜಪೇಟೆಯ ಲೇಡಿಸ್ ಪ್ರಕರಣಕ್ಕೂ ಮುನ್ನ ಜ್ಞಾನಭಾರತಿ ಹತ್ತಿರ ತನ್ನ ಅತ್ತೆ ಮಾವನೊಂದಿಗಿದ್ದ. ಅಲ್ಲೇ ಹತ್ತಿರದಲ್ಲಿ ವಾಸವಿದ್ದ ಭಾರತಿಯ ಪರಿಚಯವೂ ಅವನಿಗಾಗಿತ್ತು. ಭಾರತಿ ದಂಪತಿಗಳ ಜಗಳದಲ್ಲಿ ತಲೆ ತೂರಿಸಿದ್ದ ಸುನೀಲ ಬಿಎಚ್‌ಸಿಎಸ್ ಲೇಔಟಿಗೆ ಬಂದಾಗ ಆ ದಂಪತಿಗಳೂ ಅಲ್ಲಿಗೇ ಶಿಫ್ಟ್ ಆಗಿದ್ದರು. ಟಿವಿ ಸೀರಿಯಲ್ ನಿರ್ದೇಶಕ ಡಿಬ್ಯಾಚುಲರ್ ಸುನಿಲ ಮೊದಮೊದಲು ಅವರ ಮನೆಗೆ ಟಿವಿ ನೋಡಲು ಹೋಗುತ್ತಿದ್ದವನು ನಂತರ ತಾನೇ ಒಂದು ಟಿವಿ ತಂದಿಟ್ಟುಕೊಂಡಿದ್ದ. ಆಗ ಸುನೀಲನ ಮನೆಯಲ್ಲಿ ಟಿವಿ ನೋಡುವ ಸರದಿ ಭಾರತಿಯದ್ದಾಯಿತು. ಹೀಗಿರುವಾಗ ಒಂದು ದಿನ ಸುನೀಲ ಇದ್ದಕ್ಕಿದ್ದಂತೆ ನಾಪತ್ತೆಯಾದ. ಅದೇ ದಿನ ಭಾರತಿಯೂ ಕಾಣೆಸಿದೆ ಹೋದಾಗ ನಡೆದಿರುವ 'ಕ್ರೈಂ' ಏನೆಂದು ಅಕ್ಕಪಕ್ಕದವರಿಗೆಲ್ಲಾ ಗೊತ್ತಾಯಿತು.

ಸುನೀಲ ಭಾರತಿಯನ್ನು ಕರೆದೊಯ್ದು ಕೋಣನಕುಂಟೆ ಹತ್ತಿರ ಮನೆ ಮಾಡಿ ಇರಿಸಿದ್ದ. ಇದನ್ನು ವಿಜಯಕುಮಾರ್ ಪತ್ತೆ ಮಾಡಿ ಸುನೀಲನಿಗೆ ನಾಲ್ಕು ಬಿಗಿದು ಭಾರತಿಯನ್ನು ವಾಪಸ್ ಕರೆದುಕೊಂಡು ಹೋಗಿದ್ದಾನೆ. ಸುನೀಲನನ್ನು ತಲಘಟ್ಟಪುರಕ್ಕೆ ಎಳೆದೊಯ್ದು ಮುಖ ಮೂತಿ ನೋಡದೆ ಹೊಡೆದು ಬಿಸಾಡಿ ಹೋಗಿದ್ದಾರೆ. ಆಗಲೇ ವೀರಭದ್ರಯ್ಯ ಸ್ವಾಮಿ ಸುಬ್ರಮಣ್ಯಪುರ ಪೊಲೀಸರಿಗೆ ಸುನೀಲ ಕಾಣೆಯಾಗಿದ್ದಾನೆಂದೂ, ವಿಜಯಕುಮಾರ, ರಘುನಂದನ್, ಕೃಷ್ಣಮೂರ್ತಿಯವರೇ ಅದಕ್ಕೆ ಕಾರಣವೆಂದೂ ಕಂಪ್ಲೇಂಟ್ ಕೊಟ್ಟಿದ್ದು. ಈಗ ಪೊಲೀಸರು ಕೃಷ್ಣಮೂರ್ತಿಯನ್ನು ಅರೆಸ್ಟ್ ಮಾಡಿದ್ದಾರೆ. ಉಳಿದವರು ಸಿಕ್ಕಿಲ್ಲ. ಈ ಮಧ್ಯೆ ವಿಜಯಕುಮಾರ್ 'ಸುನೀಲ ನನ್ನ ಪತ್ನಿ ಭಾರತಿಯನ್ನು ಕರೆದುಕೊಂಡು ಓಡಿ ಹೋಗಿದ್ದಾನೆ' ಎಂದು ಕಂಪ್ಲೇಂಟ್ ಕೊಟ್ಟು ಸುನೀಲನನ್ನು ಅರೆಸ್ಟ್ ಮಾಡಿಸಿದ್ದಾನೆ.

ಬೆಂಗಳೂರು ದಕ್ಷಿಣ ಡಿಸಿಪಿ ಅಲೋಕ್‌ಕುಮಾರ್ ಈ ಪತ್ತೇದಾರಿ ಪತ್ರಕರ್ತ ಸುನೀಲನ ಸಾಹಸಗಳ ಬಗ್ಗೆ ತನಿಖೆ ಮಾಡಿಸಿ "ಯಾಕಯ್ಯ ಆಕೇನಾ ಕೋಣನಕುಂಟೆಲಿ ಮನೆ ಮಾಡಿ ಇರಿಸಿದ್ದೆ" ಎಂದು ಕೇಳಿದರೆ ಈ ಸುನೀಲ "ಸಾರ್, ಗಂಡನ ಜೊತೆ ಜಗಳ ಮಾಡಿಕೊಂಡು ಆಶ್ರಯ ಬೇಕೂಂತ ಬಂದ್ರು, ನಾನು ಆಶ್ರಯ ಕೊಟ್ಟೆ" ಎಂದನಂತೆ.

"ಅದು ಸರಿನೇ ಇರಬಹುದು. ಆದ್ರೂ ಹದಿನೈದು ದಿನ ಯಾರಿಗೂ ಹೇಳದೆ ಸೀಕ್ರೆಟ್ಟಾಗಿ ಹಗಲೂ-ರಾತ್ರಿ ಆಶ್ರಯ ಕೊಡೋ ಅಗತ್ಯ ಇರಲಿಲ್ಲ. ಪೊಲೀಸ್‌ಗೆ ಹೇಳಬಹುದಾಗಿತ್ತಲ್ಲ" ಎಂದು ಮತ್ತೆ ಉಗಿದಿದ್ದಾರೆ.

ಒಡನಾಡಿಯ ಕೆಲಸದಲ್ಲಿ ತಪ್ಪು ಹುಡುಕಲು ತಿಣುಕಾಡಿದವನು ಇಂತಾ ಸುನೀಲನೆ!

ಅಂದಹಾಗೆ ಸುನೀಲನ ಬಳಿ ಒಂದು ಮಾರುತಿ ಕಾರಿದೆ. ಇದರಲ್ಲೇ ಇವನು ತನಿಖಾ ಪತ್ರಿಕೋದ್ಯಮ ಮಾಡುವುದು. ಸುನೀಲನಿಗೆ ಈ ಕಾರು ಕೊಡಿಸಿದವನು ಮೈಸೂರಿನ ಕುಖ್ಯಾತ ವೇಶ್ಯಾ ಧಂದೆಕೋರ ಸ್ಯಾಂಟ್ರೋ ರವಿ. ಸುನೀಲನ ಕ್ರಿಮಿನಲ್ ಲಿಂಕ್‌ಗಳು ಇಷ್ಟಕ್ಕೇ ಮುಗಿಯುವುದಿಲ್ಲ. ಹಾಸನದ ಆಟಂಗಿ ಮಹೇಶ, ಸುನೀಲನ ಖಾಸಾ ದೋಸ್ತು. ತೀರಾ ಇತ್ತೀಚೆಗೆ ಅಫಜಲ್‌ಪುರದ ಶಿವಪುತ್ರಪ್ಪ ಎಂಬ ಗ್ಯಾಂಗ್‌ಸ್ಟರ್‌ನನ್ನು ಸುನೀಲ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿಸಿದ್ದ. ಈ ಶಿವಪುತ್ರಪ್ಪ ಕೊಲೆ ಕೇಸ್‌ನಲ್ಲಿ ಮಹಾರಾಷ್ಟ್ರ ಪೊಲೀಸರಿಗೆ ಬೇಕಾದ ವ್ಯಕ್ತಿ.

ಇಲ್ಲಿಗೆ ಸುನೀಲ ಹೆಗ್ಗರವಳ್ಳಿಯ ಕ್ರೈಂ ಅಂಡ್ ಡೈರಿ ಪುರಾಣವು ಮುಗಿದುದು. ■

ಒಡನಾಡಿ ಏಕೆ ಬೇಕಿದೆ

ಸ್ಟ್ಯಾನ್ಲಿ, ಪರುಶುರಾಂ, ಅನುರಾಧ ಪೋಲಂಕಿ ಮುಂತಾದವರು ಸೇರಿ ನಡೆಸುತ್ತಿರುವ ಒಡನಾಡಿ ಮೂಲಭೂತವಾಗಿ ವೇಶ್ಯೆಯರ ಮಕ್ಕಳ ಪುನರ್‌ವಸತಿ ಕೇಂದ್ರ. ಅಷ್ಟೇ ಅಲ್ಲ, ವೇಶ್ಯಾಜಾಲಕ್ಕೆ ಸಿಲುಕುವ ಮಕ್ಕಳ ರಕ್ಷಣೆ, ಆ ವೃತ್ತಿ ಬಿಟ್ಟು ಸ್ವಾವಲಂಬಿಗಳಾಗ ಬಯಸುವ ಜರ್ಝರಿತ ಮಹಿಳೆಯರಿಗೂ ಒಡನಾಡಿ ಕಾಳಜಿ ತೋರಿದೆ.

ವೇಶ್ಯಾವೃತ್ತಿ ಅದೆಷ್ಟು ಕ್ರೂರ, ಭಯಾನಕ, ಶೋಷಕ ಜಾಲ ಎಂಬುದರ ಬಗ್ಗೆ ಹೊಸದಾಗಿ ಹೇಳಬೇಕಿಲ್ಲ. ಬಡತನ-ಅಸಹಾಯಕತೆಯಿಂದ ಹಿಡಿದು ವಂಚನೆ, ಮಾರಾಟಗಳ ತನಕದ ವಿಧಾನಗಳವರೆಗೂ ಮಹಿಳೆಯರು ಹಾಗೂ ಪುಟ್ಟ ಬಾಲಕಿಯರು ಇದರಲ್ಲಿ ಸಿಕ್ಕಿಬೀಳುತ್ತಿದ್ದಾರೆ.

ಒಮ್ಮೆ ಇದರಲ್ಲಿ ಸಿಕ್ಕಿಬಿದ್ದವರ ಬದುಕು ಛಿದ್ರವಾಗಿ ಹೋಗುತ್ತದೆ. ಅಂತಾ ಮಹಿಳೆಯರ ಜೀವನ ಬದಲಾಯಿಸಿ ಅವರ ಎಳೆ ಮಕ್ಕಳಿಗೆ ಪುನರ್‌ವಸತಿ ಕಲ್ಪಿಸಿ ಮತ್ತೆ ಮುಖ್ಯವಾಹಿನಿಗೆ ತರುವ ಕೆಲಸ ಅಷ್ಟು ಸುಲಭದ್ದಲ್ಲ.

ಆದರೆ ಒಡನಾಡಿ ನಿರ್ವಂಚನೆಯಿಂದ ಆ ಕೆಲಸ ಮಾಡುತ್ತಿದೆ. ಒಡನಾಡಿ ಅಸ್ತಿತ್ವಕ್ಕೆ ಬಂದ ಕಳೆದ ಹದಿನೈದು ವರ್ಷಗಳಲ್ಲಿ ವೇಶ್ಯಾಜಾಲ ನಡೆಸುತ್ತಿದ್ದ 37 ಪಾತಕಿ ಗುಂಪುಗಳನ್ನು ಪೊಲೀಸರಿಗೆ ಹಿಡಿದು ಕೊಟ್ಟಿದೆ. ಇದುವರೆಗೂ 117 ಜನರ ಮೇಲೆ ಕೇಸ್ ದಾಖಲಾಗಿದೆ. ಇವರಲ್ಲಿ ಬಹುತೇಕರು ಈ ಧಂದೆಯಲ್ಲಿ ಶಾಮೀಲಾಗಿದ್ದ ವೈಟ್ ಕಾಲರ್ ಕ್ರಿಮಿನಲ್‌ಗಳು. ಅಂದರೆ ಸರ್ಕಾರಿ ನೌಕರರು, ಅಂಗನವಾಡಿ ನೌಕರರು, ಶಿಕ್ಷಕರು, ಪೊಲೀಸರು ಕೂಡಾ ಇದ್ದಾರೆ. ಒಡನಾಡಿ ಇದುವರೆಗೂ 1600 ಮಹಿಳೆಯರನ್ನು ಹಾಗೂ ಚಿಕ್ಕ ಹುಡುಗಿಯರನ್ನು ವೇಶ್ಯಾಜಾಲದಿಂದ ರಕ್ಷಿಸಿದೆ. ಇವೆಲ್ಲ ಪೊಲೀಸ್ ಕಾರ್ಯಾಚರಣೆಯ ಮೂಲಕವೇ ಆಗಿರುವಂತದ್ದು. ತಮ್ಮ ಪೋಷಕರ ವೃತ್ತಿ ಏನೆಂದು ಹೇಳಿಕೊಳ್ಳಲಾಗದ ವೇಶ್ಯೆಯರ 86 ಮಕ್ಕಳಿಗೆ ಒಡನಾಡಿ ಆಶ್ರಯ, ಶಿಕ್ಷಣ ನೀಡುತ್ತಿದೆ. ಇವರಲ್ಲಿ ಕೆಲವರು ಈಗ ಲಾಯರ್‌ಗಳಾಗಿದ್ದಾರೆ. ಡಿಗ್ರಿ ಮುಗಿಸಿದವರೂ ಇದ್ದಾರೆ.

ಹೀಗೆ ಇಡೀ ಇಂಡಿಯಾದಲ್ಲೇ ಒಂದು ಮಾದರಿ ಪುನರ್‌ವಸತಿ ಕೇಂದ್ರವಾಗಿರುವ ಒಡನಾಡಿ ಈ ದಿನ ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ


ಒಡನಾಡಿಯ ಸ್ಟ್ಯಾನ್ಲಿ ಮತ್ತು ಪರಶುರಾಂ

'ಮಾನವ ಸಾಗಾಣಿಕೆ ತಡೆ ಕಾಯ್ದೆ'ಯಡಿ ರಚನೆಯಾಗಿರುವ ಸಲಹಾ ಸಮಿತಿಯ ಮೆಂಬರ್ ಆಗಿದೆ. ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಚೇರ್ಮನ್ ಆಗಿರುವ ಕಮಿಟಿಯಲ್ಲೂ ಒಡನಾಡಿ ಇದೆ. ಇಲ್ಲಿಗೆ ಪ್ರತಿವರ್ಷ ಭಾರತದ ವಿವಿಧೆಡೆಗಳಿಂದ ಐಪಿಎಸ್ ಅಧಿಕಾರಿಗಳು ಬಂದು ಭೇಟಿ ನೀಡಿ ಅಧ್ಯಯನ ನಡೆಸಿ ಹೋಗುತ್ತಿದ್ದಾರೆ.

ಒಡನಾಡಿ ಸಂಸ್ಥೆಗೆ ಹಾಗೂ 86 ಮಕ್ಕಳಿಗೆಂದೇ ಒಂದು ಸುಸಜ್ಜಿತ ಕಚೇರಿ ಹಾಗೂ ಮನೆ ಇದೆ. ಒಬ್ಬರೊ, ಇಬ್ಬರೋ ಇರುವ ಜನರೇ ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಕೊಳ್ಳುವಾಗ 86 ಮಕ್ಕಳಿರಲು ಒಂದು ಪುಟ್ಟ ಮನೆ ಇರುವುದೇ ಅಪರಾಧವಾಗಿ ಕಾಣಿಸಿದರೆ ಅದು ಅವರ ಮನಸ್ಸಿನ ಕಾಯಿಲೆ ತಾನೆ? ಇಷ್ಟಕ್ಕೂ, ಒಡನಾಡಿ ಕಚೇರಿ ಹಾಗೂ ಮನೆ ಸ್ಟ್ಯಾನ್ಲಿ-ಪರಶುರಾಂರ ಸ್ವಂತ ಅರಮನೆ ಅಲ್ಲ, ಅವರೀಗಲೂ ವಾಸವಿರುವುದು ಬಾಡಿಗೆ ಮನೆಯಲ್ಲೇ.

ಒಡನಾಡಿಗೆ ಕೇಂದ್ರ-ರಾಜ್ಯ ಸರ್ಕಾರಗಳಿಂದ ಅನುದಾನ ಬರುತ್ತಿದೆ, ಮಾನವೀಯ ಕಾಳಜಿಗಳಿರುವ ಜನರೂ ನೆರವಾಗುತ್ತಿದ್ದಾರೆ. ಇದಕ್ಕೆಲ್ಲಾ ಲೆಕ್ಕ ಇರುತ್ತವೆ. ಸರ್ಕಾರ ಹಾಗೂ ಇನ್‌ಕಂ ಟ್ಯಾಕ್ಸಿನವರಿಗೆ ಅದರ ವಿವರ ಗೊತ್ತಿದೆ. ಒಡನಾಡಿಗೆ ಒಂದು ಚಿಕ್ಕಾಸೂ ಕೊಡದವರೆಲ್ಲಾ ಅಲ್ಲಿಗೆ ಹೋಗಿ ಜಬರ್‌ದಸ್ತ್ ಮಾಡಿ ಲೆಕ್ಕ ಕೇಳುತ್ತಾ ಕುಳಿತರೆ, ಅವರಿಗೆಲ್ಲಾ ಒಡನಾಡಿ ಉತ್ತರಿಸುತ್ತಾ ಕುಳಿತರೆ ಅದಕ್ಕೆ ಲಕ್ಷಾಂತರ ರೂಪಾಯಿ ಬೇಕಾಗುತ್ತದೆ ಅಷ್ಟೆ.


ಅಂದಹಾಗೆ ಒಡನಾಡಿಗೆ ಈಗ ಎದುರಾಗಿದ್ದ ಬಿಕ್ಕಟ್ಟಿನ ಸಂದರ್ಭದಲ್ಲಿ ಮೈಸೂರಿನ ಪ್ರೊ. ರಾಮದಾಸ್, 'ಆಂದೋಲನ'ದ ರಾಜಶೇಖರ ಕೋಟಿ ಮುಂತಾದವರು ನೈತಿಕ ಬೆಂಬಲ ನೀಡಿರುವುದು ಶ್ಲಾಘನೀಯ.

ಇಂತಾ ಒಡನಾಡಿಗೆ ನಿಮ್ಮ ಬೆಂಬಲವೂ ಇರಲಿ.

ನಕ್ಷತ್ರಗಳು ಮಿಂಚು ಹುಳುಗಳಂತೆ ಕಾಣಸಿಕೊಳ್ಳಲು ಅಂಜುವುದಿಲ್ಲ

ಕುರುಬ ಕೂಡಿ ಕೆಟ್ಟ ದ್ವಂಬ ಅಗಲಿ ಕೆಟ್ಟ ಅಂತ ಹೇಳಿಲ್ವೆ

ಕಾಳಮಾವ ಚಿಂತಾಕ್ರಾಂತನಾಗಿ ಕುಳಿತಿದ್ದ. ಇಷ್ಟೊತ್ತಿಗೆ ಬಿತ್ತನೆ ಮುಗಿದು ಬೀಜ ಮೊಳಕೆಯೊಡೆಯಬೇಕಿತ್ತು, ಆದರೆ ಬಿತ್ತನೆ ಬೀಜವಿನ್ನೂ ಮಡಕೆಯಲ್ಲೇ ಇದ್ದವು. ಸೀಮೆನಾಡಿಗೆಲ್ಲಾ ಮಳೆ ಬಂದು ಪ್ರಳಯವೇ ಸಂಭವಿಸುತ್ತಿರುವಾಗ ನಮಗೇಕೆ ಇನ್ನು ಮಳೆ ಆಟ ಆಡಿಸುತ್ತಿದೆ ಎಂದು ಕೊರಗುತ್ತಿರುವಾಗ ಉಗ್ರಿ ಬಂದ.



"ಬೆಂಗಳೂರಿಗೋಗಿದ್ದಲ್ಲ, ಅಲ್ಲಿ ಮಳೆ ಹೊಡಿತ್ತ?" ಎಂದಳು ಜುಮ್ಮಿ.

"ಬೆಂಗಳೂರು ಮಳೆ ಕಟಿಗಂಡು ನಮಿಗೇನಾಗಬೇಕೆ, ಅಲ್ಲಿ ಊದರೇಟು, ಹುಯ್ದೆ ಇದ್ರೇಟು."

"ಅಂಗರೆ ಹೋಗಿರಲಿಲ್ಲಾ ಅನ್ನು?"

"ಹೋಗಿದ್ರೆ ನಿನ್ನ ಕರಕಂಡೋಯ್ತಿರಲಿಲ್ಲ ಅನ್ನು?"

"ಇತ್ತೀಚೆಗೆ ನೀನು ಬುಟ್ಟು ಬುಟ್ಟು ಹೋಯ್ತಾಯಿದ್ದಿ. ಅಂಗೆ ಬುಟ್ಟು ಹೋಗಿದ್ದೇನೊ ಅನ್ನಕಂಡೆ."

"ಹೋಗಕ್ಕೆ ನಾನೇನು ಜಂತಾದಳದ ಲೀಡ್ರೇನೆ? ನೀನಾರ ಹೋಗಿದ್ರೆ ಅದಕೊಂದಿದಿರದು."

"ನನ್ನಾರು ಕರದಿರಲಿಲ್ಲ ಅದ್ಕೆ ಹೋಗಲಿಲ್ಲ."

"ದ್ಯಾವೇಗೌಡ್ರು ಕರದಿದ್ದು ಜಿಲ್ಲಾ ಲೀಡ್ರುಗಳ ಕಣೆ, ಅದರಲ್ಲೂ ಗಂಡುಸ್ರು ಕರದಿದ್ದ. ಹೆಂಗುಸ್ರು ಅಂದ್ರೆ ನಿಮ್ಮ ಪಾರ್ಟಿ ಅಷ್ಟಕಷ್ಟೆ ಅಲವೆ?"

"ದ್ಯಾವೇಗೌಡ್ಯಾಕೆ ಕರದಿದ್ದಾ?" ಎಂದ ಸೀರ.

"ತಾನು ಮಾಡಿರೊ ಗನಂಧಾರಿ ರಾಜಕೀಯ ನೋಡಿ ಪಾರ್ಟಿ ಲೀಡ್ರು ಏನಂತರೆ ಅಂತ ಕೇಳಕ್ಕೆ ಕರದಿದ್ನಂತೆ."

"ಅದ್ಯಾಕ್ಲ ಅಂಗಂತಿ?" ಎಂದ ಕಾಳಮಾವ.

"ಇನ್ನೇನು ಮಾವ ಮತ್ತೆ ಅವುನ್ಯಾವನಾರ ಇದ್ನು ಸರ್ಕಾರ ಅಂದನೆ? ಆ ಬಿಜೆಪಿ ಬಡ್ಡೆತ್ತವುಕೆ ಆಡಳತ ನ್ಯಡಸದೇ ಗೊತ್ತಿಲವಂತೆ. ಇನ್ನು ಜೆಡಿಎಸ್ ಮಂತ್ರಿಗಳಂತೂ ಏನು ಮಾಡಿದ್ರೆ ತಪ್ಪೋ, ಏನು ತಿಂದ್ರೆ ತಪ್ಪೊ, ದ್ಯಾವೇಗೌಡ ಬೋದ್ರೇನು ಮಾಡದು, ಕುಮಾರಣ್ಣ ಮುನಿಸಿಗಂಡ್ರೇನು ಮಾಡದು ಅಂತ ತಿಣುಕ್ತ ಕುಂತವಂತೆ" ಎಂದ ಉಗ್ರಿ.

"ಬಿಜೆಪಿಗಳಿಗಿನ್ಯಾವನುಭವಿದ್ದತ್ಲ?"

"ಅವು ಏನಿದ್ರೂ ಕೂಗಕ್ಕೆ ಸರಿ" ಎಂದ ಸೀರ.

"ಅದ್ಕೆ ಅಲವೆ, ಅವುರ್ಯಂಗೆ ಮಾಡ್ತರೆ ಅಂತ ಪರೀಕ್ಷೆ ಮಾಡಿ ಬುದ್ಧಿ ಹೇಳಿ ಕಳಿಸಿದ್ದು."

"ಯಾರು?"

"ಅದೆ, ಬಿಜೆಪಿಲಿ ಯಂಕ, ನಾಣಿ, ಸೀನ ಅಂತ ಯಂತ್ಯಂತವ್ರೊ ಅವಲ್ಲ, ಅವ್ರೆಲ್ಲ ಸೇರಿ ಇಂಗಲ್ಲ ಹಿಂಗೆ ಮಾಡಿ ಅಂತ ತೋರಿಸಿಕೊಟ್ಟು ಹೋದವಂತೆ."

"ಜೆಡಿಎಸ್ ಮಂತ್ರಿಗಳಿಗೆ ಹೇಳಿಕೊಡಲಿಲ್ವೆ?" ಎಂದಳು ಜುಮ್ಮಿ.

"ಯಾರೇಳಿ ಕೊಡಬೇಕು? ಕುಮಾರಸ್ವಾಮಿ ಹೇಳಕ್ಕೆ ಅವುನಿಗೇ ಏನೂ ಗೊತ್ತಿಲ್ಲ, ಇನ್ನ ದ್ಯಾವೇಗೌಡ ಹೇಳನಾ ಅಂದ್ರೆ ಹೇಳದಂಗೆ ಮಾಡಿಕಂಡವುನೆ."

"ಅದೇನು ಮಾಡಿಕಂಡಿದ್ದನೂ?"

"ಈ ಸರ್ಕಾರಕ್ಕೆ ನನಿಗೆ ಒಪ್ಪಿಗೆ ಇಲ್ಲ ಅಂದವುನೆ. ಅದೂ ಅಲ್ದೆ ಯಲ್ಲಾರ್ನೂ ಸಸ್ಪೆಂಡ್ ಮಾಡ್ಯವುನೆ. ಇನ್ನು ಏನೇನೊ ರಗಳೆ ಮಾಡಿಕಂಡು, ಬ್ಯಾಡಾ ಅವುನ ಫಜೀತಿ."

"ಯಲ್ಲಾ ಚೆನ್ನಾಗಿ ನ್ಯಡಕಂಡೋಯ್ತಾಯಿರುವಾಗ ಇಂಗ್ಯಲ್ಲ ಆಗಬಾರದಿತ್ತು ಕಂಢ್ಯ."

"ಸರಿ, ಯಾರು ಮಾಡಿದ್ದು ಮಾವ? ನೀನು ಮಾಡಿದ್ದೊ ಅಥವಾ ನಾವು ಮಾಡಿದ್ದೊ? ದ್ಯಾವೇಗೌಡನೆಯಪ್ಪ ಇದಕ್ಯಲ್ಲ ಕಾರಣ. ಹೋಗ್ಲಿ ಇವುನ ದ್ಯಸಿಂದ ಆ ಪಟೇಲ್ರು ಮಗ ಹೋಗಿ ಬಸಮ್ಮ ಸತ್ತ ಜಾಗದಲ್ಲಿ ಯಾರ ಜ್ವತೆಲೂ ಮಾತಾಡದಂಗೆ ಕುಂತನಲ್ಲ, ಏನಪ್ಪ ನಿನಿಗಾದ ಬೇಜಾರು, ಕ್ಷಾಪ ಮಾಡಿಕೊಬ್ಯಾಡ, ಇವತ್ತಲ್ಲ ನಾಳೆ ಏನಾರ ಮಾಡ್ತಿವಿ ಅಂತ ಒಂದು ಮಾತಂದನೇ, ಹೋಗ್ಲಿ ಕಾಗದ ಬರದನೆ?"

"ಯಲ್ಲಾತ್ಕು ದ್ಯಾವೇಗೌಡ, ದ್ಯಾವೇಗೌಡ ಅಂತಿರಲ್ಲಾ ಇನ್ಯಾರು ಕಾಣದಿಲವೆ ನಿಮಿಗೆ?"

"ಕುರುಬರು ಮಠ ಯರಡಾಯ್ತುಯಿದ್ದವಂತೆ ಅದೂ ದ್ಯಾವೇಗೌಡನೆ ಕಾರಣವಂತಲ್ಲಾ" ಎಂದಳು ಜುಮ್ಮಿ.


"ತಗಳಪ್ಪ, ಅದೂ ಇವುನ ಮ್ಯಾಲೆ ಬತ್ತೆ?"

"ಕುರುಬರ ಮಠದ್ದೇನ್ಲ ಗಲಾಟೆ?" ಎಂದ ಸೀರ.

"ಚಿಕ್ಕಣ್ಣನ್ನೇ ಕೇಳಪ್ಪ"

"ಏನ್ಲ ಚಿಕ್ಕ ಕುರುಬುರ ಮಠದ ಗಲಾಟ" ಎಂದ ಕಾಳಮಾವ.

"ಇವತ್ತಿಗೂ ಅದ್ಯತ್ತಗದೆ ಅಂತ ನೋಡಲಿಲ್ಲ ನಾನು, ಅದರ ಸ್ವಾಮಿ ಯಾವನೂ ಅಂತ್ಲೂ ಗೊತ್ತಾಗಲಿಲವಪ್ಪ, ನೀವು ಹೋಗಿ ಹೋಗಿ ನನ್ನ ಕೇಳ್ತೀರಿ" ಎಂದ ಚಿಕ್ಕ ಕೊಸರಿಕೊಂಡು ಕೂತ.



"ಕರಟ್ ಬುಡೊ ಚಿಕ್ಕಣ್ಣ ನೀನೇಳಿದ್ದು, ಈ ಕುಂಡಿಕ್ಯರೆ, ಕಾಡಗೆರೆ ಕಡಿಕೋಗಿ ಚುಂಚನಗಿರಿ ಮಠದ ವಿಷಯ ಕೇಳಿದ್ರೆ ಅವುರೂ ನಿನ್ನಂಗೆ ಮಾತಾಡ್ತರೆ."

"ಆದೆಯಪ್ಪ, ಮಠಕಟಿಗಂಡು ನನಿಗೇನು? ಈಗ ಮಳೆ ಹೊಡೇಟಿಗೆ ವಲ ಬಿತ್ತಬೇಕು. ಒಂದೇ ಒಂದಸದೆ ಇನ್ನೊಂದೇನಾರ ತಗುದು ಕೊಟ್ಟರೆ ಮಠದೋರು?"

"ಮಠದೋರು ಜನಕ್ಕೆಲ್ಲಿ ಸಾಯ ಮಾಡ್ಯರೂ? ಏನಿದ್ರು ನಾವೇ ಗೇದಿಕ್ಯಬೇಕು" ಎಂದ ಸೀರ.

"ಎಜ್ಜಾಟ್ಕಿ ಕರಟ್ ಚಿಗಪ್ಪ ನೀನೇಳಿದ ಮ್ಯಾಟ್ರು" ಎಂದುಕೊಂಡು ವಾಟಿಸ್ಸೆ ಬಂದ.

"ಇನ್ನು ಅವುನ್ ಕೇಳಪ್ಪ, ಯಾವ ಮಠದ ಸುದ್ದಿ ಕೇಳು ಹೇಳ್ತನೆ" ಎಂದು ಚಿಕ್ಕಣ್ಣ ಜಾರಿಕೊಂಡ.

"ಯಾವ ಮಠದ ಮ್ಯಾಟ್ರು ಬೇಕಪ್ಪ ನಿಮಗೆ? ಸಿರಿಗೆರೆದು ಬೇಕಾ, ಕೋಡಿ ಮಠದ್ದು ಬೇಕಾ, ಕುರುಬರ ಮಠದ್ದು ಬೇಕಾ ಹೇಳಿ?"

"ಕುರುಬರ ಮಠ ವಡದು ಯರಡಾದವಂತೆ. ಅದ್ಕು ದ್ಯಾವೇಗೌಡ್ರೆ ಕಾರಣ ಅಂತ ಯಾರ್ಯಾರೊ ಅಂತರಲ್ಲಾ ನಿಜವೇನ್ಲ?" ಎಂದಳು ಜುಮ್ಮಿ.

"ಯಾರೇ ಅಂದ್ರು ಎಲ್ಲೆಲ್ಲೊ ಹೇಳದಲ್ಲ, ನಿಜವಾದ ಸಾಕ್ಷಿ ಪುರಾವೆ ಇದ್ರೆ ತಗಂಡೋಗಿ ನ್ಯಾಯಾಲಯದ ಮುಂದೆ ಅಥವಾ ಆಯೋಗದ ಮುಂದೆ ಕೊಡಬೇಕು."

"ಇದೇನ್ಲ ಕುಮಾರಸ್ವಾಮಿಯಂಗೆ ಮಾತಾಡ್ತಿ?"

"ಈಗಂಗೆ ಕಣಕ್ಕ ಆಗಿರದು. ಏನೇ ಹೇಳಿದ್ರು ಆದೆಲ್ಲೊ ಹೋಗಿ ದೂರು ಕೊಡಿ ಅಂತರೆ. ಜಾಸ್ತಿ ಮಾತಾಡಿದ್ರೆ ನೀವು ಮಾಡಿರದ ಸರಿಯಾದ ಸಮಯ ನೋಡಿ ಹೇಳ್ತಿವಿ ಅಂತರೆ. ಕಾಲ ಕೂಡಿ ಬಂದಾಗ ಯಲ್ಲಾ ಈಚೆಗೆ ಬತ್ತದೆ ಅಂತರೆ."

"ಅದ್ಕೆ ನೀನು ಅಂಗಂದ್ಯಾ?"

"ಅಂಗನ್ನಲಿಲ್ಲ, ನಮ್ಮ ಬಾವನೆ ಏನಿದೆ ಅದನ್ನ ನಾವು ಇಟ್ಟದ್ದಿವಿ."

"ಅಹಹ ಬಾವುನ್ಯಂತೆ ಬಾವುನೆ, ಅಯ್ ನಿನ್ನ ತೀರ್ನಾ ಬಡಿಯಾ ಹೋಗು."

"ಬಾವುನೆ ಅನ್ನದೂ ಕುಮಾರಣ್ಣನ ಪದ ಕಣಕ್ಕ."

"ಹೋಗ್ಲಿ, ಕುರುಬರ ಮಠದ ಜಗಳ ಹೇಳು."

"ಮದ್ಲೆ ಹೇಳಿಲವೇನಕ್ಕ, ಕುರುಬ ಕೂಡಿ ಕೆಟ್ಟ ದ್ವಂಬ ಅಗಲಿ ಕೆಟ್ಟ ಅಂತ. ಅಂಗಾಗ್ಯದೆ ಈ ಕುರುಬರ ಗಲಾಟ."

"ಕುರುಬ್ಯಾಕೆ ಕೂಡಿ ಕೆಟ್ಟುನ್ಲ?"

"ಕುರುಬ ಯಾವಾಗ್ಲು ಅಗಚಿಗಂಡೆ ಅಲವೇನಕ್ಕ ಇ ಸು. ಮಂದೆ ಮಿಕ್ಸಾದೇಟಿಗೆ ಜಗಳ ನ್ಯಡಿತದೆ. ಅದ್ಯಂತ ಜಗಳ ಅಂತೀ, ಇವುನ ಕುರಿಮರಿಗೆ ಅವುನೇನೊ ಒಂದೇಟ ಹ್ವಡದಿರತನೆ. ಅದ ನ್ಯಾಯ ಮಾಡಕ್ಕೆ ಅಂತ ಕುಂತಗತ್ತರೆ. ಬೆಳಕರುದ್ರು ನ್ಯಾಯ ಮುಗಿಯದಿಲ್ಲ ಅಂಗಾಡ್ತರೆ."

"ನಿಜ ಕಂಢ್ಯ. ಆ ಚ್ವಾಳಸಂದ್ರುದಲ್ಲಿ ನ್ಯಾಯ ಅಂತ ಗೌರಕ್ಕ ಅವ್ರುಳ ಮಗಳ ಕರಕಂಡೋಗಿದ್ಲು. ಬ್ಯಳಗೂ ನ್ಯಾಯ ಆಡಿ ಕಡಿಗೆ ಒಂದು ಕುರಿತಂದು ಆರಿಸಮ್ಮನಿಗೆ ಕೂದು ತಪ್ಪಾಯ್ತು ಅಂದುಬುಟ್ಟು ಹೋಗಿ ಅಂದ್ರೂತೆ. ಪಾಪ ಇವಂಗೆ ಮಾಡ್ಯವೆ. ಅವುರತ್ಲಾಗೆ ದದಿಗರ ಕಂಡು ಗಿಲಬಲಗುಟ್ಟಿಗಂಡು ಬ್ಯಾಡುತಿಂದ್ರು" ಎಂದು ಜುಮ್ಮಿ ನಕ್ಕಳು.

"ಅದ್ಕೆ ಕಣಕ್ಕ ಜಕಾಲ್ ಅಂದ್ರೆ ಗುಳ್ಳೆ ನರಿ ಕುರುಬರ ನ್ಯಾಯಕೆ ಬರದಿಲ್ಲ ಅಂತದಂತೆ."

"ಅದಿರ್ಲಿ ಮಠದ ಗಲಾಟ ಹೇಳ್ಳ?"

"ಮಠದ ಗಲಾಟ ಇನ್ನೇನು, ಇದಕ್ಕೂ ದೇವೇಗೌಡ್ರಿಗೂ ಯಾವ ಕನಕ್ಷನ್ನು ಇಲ್ಲ. ಸದ್ದಿಕ್ಕೆ ಮುಂದೆ ಯಂಗೊ ಏನೊ, ಯಾಕೆ ಅಂದ್ರೆ ಅವುರ್ನ ಮಾಜಿ ಕುರುಬ್ರು ಅಂತ್ಲೂ ಕರಿತರಂತೆ."

"ಅಂಗರೆ ದ್ಯಾವೇಗೌಡ್ರು ಮಾಜಿ ಕುರುಬ್ರೆ?"

"ಏನೊ ನನಿಗಂತೂ ಗೊತ್ತಿಲ್ಲ. ಸಿದರಾಮಯ್ಯನ್ನ ಗೌಡ್ರು ಬ್ಯಳಸದ ನೋಡಿ ಕೆಲವು ಒಕ್ಕಲಿಗ ಲೀಡ್ರು ಅಂಗಂತಿದ್ರು."

"ಈಗೇನಂತರೇ?"

"ಈಗವುರಾಡದು ನೋಡಿದ್ರೆ ಹಾಲಿ ಕುರುಬರಂಗಾಗಿ, ಸಿದರಾಮಯ್ಯನೆ ಮಾಜಿ ಕುರುಬನಂಗಾಗ್ಯವುನೆ ಕಣಕ್ಕ. ಆದ್ರಿಂದ ಈಗ ಬೆಸ್ಟಂದ್ರೆ ದ್ಯಾವೇಗೌಡ್ರು ಯಂಗಿದ್ರು ರಾಜಕಾರಣದಿಂದ ನಿವೃತ್ತಿಯಾಯ್ತಿನಿ ಅಂತ ಕುಂತವುರೆ. ಈ ಬಂಡಾಯದ ಕುರುಬ್ರು ಗೌಡ್ರ ತಗಂಡೋಗಿ ಮಠದ ಸ್ವಾಮಿ ಮಾಡಿ ಕಳದು ವಳ್ಳೆದು."

"ಈಗಾಗಿರೋನ ಮ್ಯಾಲೆ ಅವುನ್ಯಾರೊ ಬಸವರಾಜದೇವರು ಅನ್ನೋನು ತಿರುಗಿ ಬದ್ದವುನಂತೆ, ಇನ್ನ ದ್ಯಾವೇಗೌಡ್ರ ಮಾಡಿಕಳಕ್ಯಾದತೇನೊ?" ಎಂದ ಉಗ್ರಿ.

"ಹಾಕ್ಲಾಸುಕಂದೆ ಕಣೊ ಉಗ್ರಿ... ಆ ಬಸವರಾಜ ದೇವರ ಸ್ವಾಮಿ ಮಾಡಿಕಂಡ್ರೆ ಕುಲಕ್ಕೆ ಮೂಲ ಕೊಡ್ಲಿ ಕಾವು ಅನ್ನಂಗಾಯ್ತದಂತೆ ಕಣೊ... ಅಂಗಂತ ವಿಶ್ವನಾಥನೆ ಹೇಳ್ತ ಕುಂತವುನೆ."

"ಯಾಕೆ ಅವುನು ಸರಿಲ್ವೆ?"

"ಸರಿದ್ದನೊ ಇಲವೊ, ಅಂತೂ ಅಥ್ನಿನಿಲ್ಲಿಗೆ ಬಂದಾಗ ಭಜರಂಗಿಗಳು ಓಡಿಸಿಗಂಡೋಗಿದ್ದೊ ನ್ಯನಪಿದ್ದತೇ?"

"ಓಹೊಹೊ ಆ ಸ್ವಾಮಿ ಆದ ಅನ್ನು?"

"ಆಗಿಲ್ಲ, ಅದ್ಕೆ ಅವುನು ನನ್ನ ಮಾಡಿ ಇಲ್ಲ ಅಂದ್ರೆ ನಾನು ಬ್ಯಾರೆಮಠ ಮಾಡ್ತಿನಿ ಅಂತ ಕುಂತವುನೆ."

"ಯಾವನಾರ ನನ್ನ ಮಾಡಿ ಅಂತನ್ಲ? ಮಾಡೋ ತರ ಇರಬೇಕಾಯ್ತದೆ" ಎಂದ ಕಾಳಮಾವ.

"ಎಜ್ಜಾಟ್ಕಿ ಕರಟ್ ದ್ಯಡಪ್ಪ, ನಮ್ಮ ದ್ಯಡಪ್ಪನ ಮಾತು ಆ ಬಸವರಾಜ ದೇವರಿಗೆ ಮುಟ್ಟುಸಬೇಕಲ್ಲಾ."

"ನೀನೆ ಹೇಳ್ಳ?"

"?!"

–ಬಿ. ಚಂದ್ರೇಗೌಡ

Zero Hour ಮುನ್ನಿ

1. ಸ್ತ್ರೀವಸ್ಯನು ಕಾನಿಷ್ಕಾದಿಂದ ದಕ್ಷಿಣ ದಿಕ್ಕಿನೆಡೆ 3 ಕಿ.ಮೀ. ನಡೆಯುತ್ತಾನೆ. 90^0 ಯಷ್ಟು ಎಡಕ್ಕೆ ತಿರುಗಿ ಪುನಃ 4ಕಿ.ಮಿ. ನಡೆದರೆ ಎಲ್ಲಿಗೆ ತಲುಪುತ್ತಾನೆ?
   - a) ನಿಮ್ಹಾನ್ಸ್
   - b) ಪರಪ್ಪನ ಅಗ್ರಹಾರ
   - c) ಹೊಸ ದೇವರ ಸಿನಿಮಾ
   - d) ಏಯ್ ಮುನ್ನಿ, ಕುಡಿ... ಚರಂಡಿಯಲ್ಲಿ ಬಿದ್ದಿರ್ತಾನೆ ಬಿಡು....
   - e) ಸ್ಟೇಟ್ಸ್ ಥಿಯೇಟರ್ ಬುಕ್ ಮಾಡೋಕೆ ಹೋಗಿರ್ಬೇಕು...



2. ತಿಂಗಳ ಮೌನವ್ರತ ಮುರಿದ ಮಹಿಮಾ ಪಟೇಲ್ 'ಅಮ್ಮ' ಎಂದು ಮರುಹುಟ್ಟು ಪಡೆದನಂತೆ. ಕಾಮೆಂಟ್ಸ್ ಪ್ಲೀಸ್....
   - a) ತಿಂಗಳುಗಟ್ಟಲೇ ಸುಮ್ಮನಿದ್ದನಲ್ಲ... ಇನ್ನು ಎಲ್ಲವನ್ನೂ ಕಕ್ಕಿಕೊಳ್ಳಲು ಆರಂಭಿಸಿ ತಲೆ ತಿಂತಾನೆ
   - b) ಆ ಡಾಲರ್ ಪ್ಯ(ಪ)ಗೆ ಸೊಕ್ಕು ಜಾಸ್ತಿಯಾದಂಗಿದೆ
   - c) ಮರುಹುಟ್ಟು ಪಡೆದ ಈ ಪುನಾಳ ಶಿಶುವನ್ನು ಗೌಡರೇ ಎತ್ತಿ ಆಡಿಸಬೇಕು
   - d) ಜಗತ್ತಿಗೆ ಕವಿದಿರುವ ಮಂಪರು ಬಿಡಿಸಲು ಜಗತ್ತಿಗೇ ಬ್ರೇನ್ ಮ್ಯಾಪಿಂಗ್ ಮಾಡ್ತಾನೇನೊ?
   - e) ಏನ್ ಬರೆದ್ರು ಸರಿ... ಮೊದ್ಲು ಆತ ಇನ್ನೊಂದ್ ತಿಂಗ್ಳು ಮೌನ ಆಚರಿಸ್ಲಿ...



3. "ಧರ್ಮಸಿಂಗ್, ಸಿಂಧ್ಯಾ ಏನು ಕನ್ನಡಿಗರೆ?"- ಮೋಹನ್‌ದಾಸ್ ಪೈ (ಇನ್ಫೋಸಿಸ್) ಸಾಹೇಬ್ರು ಹೇಳವ್ರೆ.... ನೀವು ಉತ್ತರಿಸ್ಲೇ ಬೇಕು...
   - a) ಏ ಹುಚ್ಚುನ್ಮಿ, ಮೊದ್ಲು ಹೇಳು ಇದ್ಯಾರಿದು ಪೈ ಮಾಮ?
   - b) ...
   - c) 'ನೈಸ್' ರಸ್ತೆ ಉದ್ಘಾಟನೆಗೆ ಹೋದಾಗ ಖೇಣಿ ಹೀಗೆ ಹೇಳು ಅಂತಾ ಹೇಳಿಕೊಟ್ಟಿದ್ನಂತೆ
   - d) ಈ ಧರ್ಮು, ಸಿಂಧ್ಯಾ ಹಿಂದೆ ಇನ್ಫೋಸಿಸ್ ಬಾಗಿಲು ಕಾದಿದ್ದವ್ರು. ಈಗ ಸರಿಯಾಗಿ ಇಕ್ಕಿಸಿಕೊಂಡಿವೆ ಬಿಡು
   - e) (b), (c) ಎರಡೂ ಸರಿ

4. ದೇವೇಗೌಡರ ಪುತ್ರಿಯರು, ಸೊಸೆಯಂದಿರು ಹಾಡಿರುವ ಈ 'ಬಂಡಾಯ' ಗೀತೆಗೆ ಟೈಟಲ್ಲು ಕೊಡಿ.



ಕಟ್ಟುತ್ತೇವ ನಾವು, ಕಟ್ಟುತ್ತೇವ ನಾವು
ಕಟ್ಟೇ ಕಟ್ಟುತೇವ
ಮಿಂಚೋ ಮಹಲುಗಳ, ಕಾಸಿನ ಗಣಿಗಳ
ಕಟ್ಟೇ ಕಟ್ಟುತೇವ...
ನಾವು ಮಹಲು ಕಟ್ಟುತೇವ್ವ
ನಾವು ಗಣಿಯ ಮೆಟ್ಟುತೇವ್ವ

   - a) ಮಹಲು-ಅಮಲು
   - b) ಅರಿಶಿಣ-ಕುಂಕುಮ ಭಾಗ್ಯ
   - c) ಅನಿತನುಸೂಯಶ್ಯೈಲಿ...
   - d) 'ಮಾರೇ ಮಾರುತೇವ... ನಾವು ರಾಜ್ಯ ಮಾರುತೇವ' ಎಂದಿಲ್ವಲ್ಲ ಸಾಕು ಬಿಡು

5. 'ಲಂಕೇಶ್' ಸಂದರ್ಶನದಲ್ಲಿ 'ಬೇಕಾದ್ರೆ ಪಬ್ಲಿಕ್ ಆಗಿ ನನ್ನ ಬ್ರೇನ್ ಮ್ಯಾಪಿಂಗ್ ನಡೆದು ಬಿಡ್ಲಿ ಸಾರ್' ಎಂದು ಡಾ. ರಮೇಶ್ ಹೇಳ್ಯವ್ರೆ... ಈಗ ನಿಮ್ಮ ಸರದಿ....



   - a) ದೊಡ್ಡ ಗೌಡ್ರು, "ಮೊದ್ಲು ಈ ಡಾಕ್ಟನ್ನ ನಿಮ್ಹಾನ್ಸ್‌ಗೆ ಸೇರ್ಸಿ ಬಿಡ್ರಲಾ" ಎಂದರಂತೆ
   - b) ಮುನ್ನಾಭಾಯಿ ಎಂಬಿಬಿಎಸ್ ಅಂದ್ರೆ ಈತನೇ ನೋಡು
   - c) ತಾನಾಗಿ ರೇಶ್ಮೆಯವ್ರ ಮನೆಗೆ ಹೋಗಿ, ತನಗೇ ಗೊತ್ತಿಲ್ಲದಂತೆ 'ಬ್ರೇನ್ ಮ್ಯಾಪಿಂಗ್'ಗೆ ಒಳಗಾದ 'ಧೀರ' ಆತ!
   - d) (b) ಮತ್ತು (c) ಸರಿ

ಉತ್ತರಗಳು : (1) ಅಮ್ಮ f ಆದರೂ O.K (2) e (3) ಎಲ್ಲಾ O.K (4) d (5) d


ನವಿಲಿನ ಬಾಲದ ಭಾರಕ್ಕಾಗಿ ಗುಬ್ಬಿಯು ನವಿಲನ್ನು ಕಂಡು ಕನಿಕರಿಸುತ್ತದೆ



ಈಕೆ ಕಾಲಿಗೆ ಚಕ್ರ ಹಾಕಿದಂತೆ ತಿರುಗುತ್ತಾಳೆ. ಈಕೆಯನ್ನು ನೋಡಿಯೇ 'ಹೆಣ್ಣು ತಿರುಗಿ ಕೆಟ್ಟಳು' ಎಂಬ ಗಾದೆ ಮಾಡಿರಬೇಕು. ನಾಯಕಿ ಈಕೆ. ನೋಡುವವಳು, ಸಾಹಸದಲ್ಲಿ ತೊಡಗುವವಳು. ಒಂದು ವ್ಯಕ್ತಿಯಿಂದ ಇನ್ನೊಂದು ವ್ಯಕ್ತಿಗೆ, ಒಂದು ಹಾಸಿಗೆಯಿಂದ ಇನ್ನೊಂದಕ್ಕೆ, ಒಂದು ವರ್ಗದಿಂದ ಇನ್ನೊಂದಕ್ಕೆ ಹೋಗಿ ಸ್ಪಂದಿಸಿ ಹೊಸ ಅನುಭವ, ಹೊಸ ಕುತೂಹಲ ಪಡೆಯುವವಳು. ಈಕೆಯ ಗ್ರಹಿಕೆಯಿಂದಾಗಿಯೇ ಈಕೆಯ ಸಮಾಜ ನಮ್ಮ ಕಣ್ಣೆದುರು ಹಾಸಿಕೊಳ್ಳುತ್ತದೆ. ಈ ಸಮಾಜದ ಕಾಳಜಿಗಳು, ಮರ್ಯಾದೆಗಳು, ಮೋಸಗಳು ನಮಗೆ ಗೊತ್ತಾಗುತ್ತದೆ. ಅನೇಕ ಸಿನಿಮಾಗಳಲ್ಲಿ ಕ್ಲೋಸಪ್, ಮೀಡಿಯಂ ಶಾಟ್‌ಗಳಲ್ಲಿ ಒಂದು ಮುಖವನ್ನು ನೋಡುತ್ತ ನೋಡುತ್ತ ಆ ಮುಖವನ್ನು ನಾವು ಪ್ರೀತಿಸತೊಡಗುವಂತೆ, ಆ ಮುಖದವಳು ಎಷ್ಟೇ ಕೆಟ್ಟವಳಿದ್ದರೂ ಮೆಚ್ಚತೊಡಗುವಂತೆ ಈಕೆಗೆ ಒಲಿಯತೊಡಗುತ್ತೇವೆ. ಈಕೆಯ ಹಾಸ್ಯ, ತರಲೆ, ಪ್ರೇಮ, ಮಾರ್ದವವೆಲ್ಲ ನಮ್ಮ ನರನಾಡಿಗಳಲ್ಲಿ ಪುಟಿಯತೊಡಗುತ್ತದೆ.

'ಪಿಕರೆಸ್ಕ್'

ಈ ಅಲೆಮಾರಿಯ ಅನುಭವ ಹೇಳುವ ಕಾದಂಬರಿಯನ್ನು 'ಪಿಕರೆಸ್ಕ್ ನಾವೆಲ್' ಎಂದು ಕರೆಯುತ್ತಾರೆ. ಮೇಲೆ ಹೇಳಿದ ಹೆಂಗಸು ಮಾಲ್ ಫ್ಲಾಂಡರ್ಸ್ ಎಂಬ ನಾಯಕಿ. ಡೇನಿಯಲ್ ಡಿಫೋ ಎಂಬ ಇಂಗ್ಲಿಷ್ ಕಾದಂಬರಿಕಾರ ಮತ್ತು ಪತ್ರಕರ್ತ ಸೃಷ್ಟಿಸಿದ ಮನರಂಜಿಸುವ ಪಾತ್ರ ಈಕೆ. ಈಕೆಯ ಅಲೆಮಾರಿತನವೇ ಈ ಕಾದಂಬರಿಯ ವಸ್ತು ರೂಪ.




ಕಾದಂಬರಿ ಎಂಥ ಮೋಜಿನ ಪ್ರಕಾರ! ಇಲ್ಲಿ ಕತೆ ಹೇಳಬಹುದು, ಅಡ್ಡದಾರಿ ಹಿಡಿದು ಹೋಗಿ ಏನನ್ನೋ ಕಂಡು ಮುಗುಳ್ನಗುತ್ತಾ ಹೆದ್ದಾರಿಗೆ ಹಿಂದಿರುಗಬಹುದು. ಕವನ, ನೃತ್ಯ ಪುರಾಣ ಎಲ್ಲಾ ಇದರಲ್ಲಿ ಬರಬಹುದು. ಅಮೆರಿಕಾದಲ್ಲಿ ಸ್ಯಾಲಿಂಜರ್ ಎಂಬ ಕಾದಂಬರಿಕಾರ ಒಬ್ಬ ತಲೆತಪ್ಪಿಸಿಕೊಂಡ ಶಾಲೆ ಹುಡುಗನ ಅನುಭವ ಹೇಳಿದ. ಈತ ಮುಖೇಡಿಯಾದ, ಅಂದರೆ ಯಾರನ್ನು ನೋಡಿದರೂ ಗೋಣಗಿ ಕಣ್ಮರೆಯಾಗುವ ಹುಡುಗ. ಶಾಲೆ ದರಿದ್ರವಾಗಿ ಕಾಣುತ್ತದೆ. ಮಾಸ್ತರುಗಳು ಗೋರ್ಕಲ್ಲುಗಳ ಹಾಗೆ ಇವನಿಗೆ ಕಾಣುತ್ತಾರೆ. ಅಲ್ಲಿಂದ ಓಡಿಹೋಗುವುದೇ ಸನ್ಮಾರ್ಗವೆನ್ನಿಸಿ ಓಡುತ್ತಾನೆ. ರೈಲಿನಲ್ಲಿ ಪ್ರಯಾಣಿಕರ ಪಯಣದ ಪರಿ, ಚರ್ಚಿನ ನನ್‌ಗಳ ಒಣಕಲು ಧಾರ್ಮಿಕತೆ, ಹೋಟೆಲಿನಲ್ಲಿ ಸಿನಿಮಾ ಸ್ಟಾರ್‌ಗಳನ್ನು ನೋಡಲು ಫೇರಾಯಿಸಿದ ಮೂರ್ಖ ಹುಡುಗಿಯರು. ಅವರ ರೋಮಾಂಚನದಲ್ಲಿರುವ ಕೊಳಕು ಆಶೆಗಳು, ಭ್ರಮೆಗಳು. ಪುಸ್ತಕ ಓದುತ್ತ, ಮೊತ್ತ ಮೊದಲ ತಲೆರೋಸಿದ ಬಂಡಾಯಗಾರ ಹಾರ್ಮೆಟ್‌ನ ಹಾಸ್ಯಾಸ್ಪದ ಗುಣ.....

ಅಲೆದಾಟ! ಎಲ್ಲೆಲ್ಲಿಗೆ? ಸ್ಥಳದಿಂದ ಸ್ಥಳಕ್ಕೆ ಮಾತ್ರವಲ್ಲ- ಮನಸ್ಸಿನ ಒಂದು ಸ್ತರದಿಂದ ಇನ್ನೊಂದು ಸ್ತರಕ್ಕೆ.

ಹಕ್! ಹಕಲ್‌ಬರಿ ಫಿನ್ ಹೆಸರನ್ನು ನೀವು ಕೇಳಿರಬಹುದು. ಆತ ಅಮೆರಿಕಾದಲ್ಲಿ ಮೊದಲು ಪೋಲಿ ಅಲೆದ ಚಿಕ್ಕ ಹುಡುಗ.

ಕಲಾತ್ಮಕವಾಗಿ ಅಲೆದಾಡುವ ಪುಂಡ ಹುಡುಗರು ನಮ್ಮಲ್ಲೀಗ ಕಾದಂಬರಿ, ಕತೆ ಬರೆಯಬೇಕಾಗಿದೆ. ಅವರಿಂದ ಜೀವ ಬರಬೇಕಾಗಿದೆ, ಸಾಹಿತ್ಯಕ್ಕೆ, ರಾಜಕಾರಣಕ್ಕೆ, ಜಡ್ಡಾಗುತ್ತಿರುವ ಬದುಕಿಗೆ.



ಜೂನ್ 5, 1988

ಸಹನೆ....?

ಈತನ ಮಾತು ಚೈನಾದಲ್ಲಿ ಗಾದೆ ಮಾತಾಗಿವೆ; ಚೈನಾದ ಪರಂಪರಾಗತ ಜಾಣ ತನದ ಒಂದು ಅರ್ಥಪೂರ್ಣ ಭಾಗವಾಗಿವೆ.


ಈತ ಪ್ರಖ್ಯಾತ ಗುರು, ರಾಜಕಾರಣಿ ಮತ್ತು ಸಂತ ಕನ್‌ಫ್ಯೂಸಿಯಸ್.

ಸರ್ಕಾರವನ್ನು ಹೇಗೆ ನಡೆಸುವುದೆಂದು ಹೇಳಿಕೊಡುವ ಗುರು ಈತನಾಗಿದ್ದ, ನೈತಿಕತೆ ಅಂದರೇನೆಂದು ವಿವರಿಸಬಲ್ಲವನಾಗಿದ್ದ. ಸುಮಾರು ಎರಡು ಸಾವಿರ ವರ್ಷಗಳ ಕಾಲ ಈತನ ವಿಚಾರಗಳು ಚೈನಾದ ಮಕ್ಕಳಿಗೆ ಪಠ್ಯವಾಗಿದ್ದವು. ಬಡವನಾಗಿ ಹುಟ್ಟಿ ಬಡವನಾಗಿ ಬದುಕಿದ್ದ ಕನ್‌ಫ್ಯೂಸಿಯಸ್ ಒಮ್ಮೆ ತನ್ನ ರಾಷ್ಟ್ರದ ರಾಜಕಾರಣಿಗಳ ಭ್ರಷ್ಟತೆಯನ್ನು ನೋಡಿ ಕೇಳಿದ: "ನಾವು ಇದನ್ನು ಸಹಿಸುವುದಾದರೆ ಸಹಿಸದೆ ಇರುವಂಥದು ಇನ್ನೇನಿದೆ?"

ಸಹಿಸದೆ ಇರುವ ಒಂದು ಮಾರ್ಗ ರಚನಾತ್ಮಕ ಕ್ರಿಯೆ, ಪ್ರತಿಭಟನೆಯ ಧ್ವನಿ.



ಮೋಡ ಮೋಡ ಡಿಕ್ಕಿಯಾದರೆ ಮಳೆ. ಹೆಣ್ಣು-ಗಂಡು ಡಿಕ್ಕಿಯಾದರೆ?



ಎಚ್.ಸಿ. ಮಹಾದೇವ್, ಬೀದರ್
ಕುಮಾರಸ್ವಾಮಿಗೆ ಒಂದು ಕೋಟಿಯಲ್ಲಿ ಎಷ್ಟು ಸೊನ್ನೆಗಳಿವೆ ಎಂಬುದೇ ಗೊತ್ತಿಲ್ಲವಂತೆ?
* ಹೌದೌದು, ಪಾಪ ಬಾಯಲ್ಲಿ ಬೆರಳಿಟ್ಟರೂ ಕಚ್ಚೋಕೆ ಬರಲ್ವಂತೆ!

ಕಲಂದರ್ ಅಜೀಜ್, ಜಾವಗಲ್
ಈಗಿನ ನಟಿಯರು ಮುಚ್ಚಿಡುವುದಕ್ಕಿಂತ ಬಿಚ್ಚುವುದರಲ್ಲೇ ಸುಖ ಎನ್ನಲು ಕಾರಣ?
* ಬಿಚ್ಚಿದಷ್ಟೂ ಬಚ್ಚಿಡುವಷ್ಟು ಹಣ ಸಿಗುತ್ತಾದ್ದರಿಂದ.

ಶ್ರೀನಿವಾಸ್, ಮಂಡ್ಯ
ಕುಮಾರಸ್ವಾಮಿ ಈಗ ಚಿತ್ರ ನಿರ್ಮಿಸಿದರೆ ಹೆಸರು ಏನಿಡಬಹುದು?
* 'ಮಳ್ಳಿ ಮಳ್ಳಿ ಮಂಚಕ್ಕೆ ಕಾಲೆಷ್ಟು'.

ಹೇಮಲತಾ ಮಹಾದೇವ್, ಬೆಂಗಳೂರು
ಕಲರ್ ಚಿತ್ರಗಳನ್ನು ನಿರ್ಮಿಸುವ ಕುಮಾರಸ್ವಾಮಿ Black N'white ಡ್ರೆಸ್ ಧರಿಸುವುದೇಕೆ?
* ರಾಜಕೀಯದ ಡೀಲ್‌ಗಳಲ್ಲಿ ರಾಮನ ಲೆಕ್ಕ, ಕೃಷ್ಣನ ಲೆಕ್ಕ ಜಾಸ್ತಿ ಇವೆ ಅಂತ ಗೊತ್ತಿರೋದ್ರಿಂದ.

ಪೂರ್ಣಿಮಾ, ಹಗರಿಬೊಮ್ಮನಹಳ್ಳಿ
ಸುಷ್ಮಾಗೆ ಮಂಗಳಾರತಿ ಎತ್ತಲು ಬಳ್ಳಾರಿಯವರೇ ಆಗಬೇಕಾ?
* ಪಾಪ, ಒಮ್ಮೆ ಸೋನಿಯಾರಿಂದ ಮಂಗಳಾರತಿ ಎತ್ತಿಸಿಕೊಂಡಿದ್ದು ಈಗ ಚಟವಾಗಿದೆಯಂತೆ.

ಸವಿತಾ ಮಧುಸೂದನ್, ದಾವಣಗೆರೆ
ಹೆತ್ತ ತಾಯಿಗೂ-ಹೊತ್ತ ಭೂಮಿಗೂ ಏನು ವ್ಯತ್ಯಾಸ?
* ತಾಯಿ ಹಡೆಯುತ್ತಾಳೆ, ಭೂಮಿ ಸ್ವೀಕರಿಸುತ್ತಾಳೆ.

ಅನಾರ್ಕಲಿಸಲೀಂಚಿಣ್ಯ, ಶ್ರೀರಂಗಪಟ್ಟಣ
ಜನರನ್ನು ಕಾಡುತ್ತಿರುವ ಚಿಕೂನ್‌ಗುನ್ಯಾಕ್ಕೂ, ಕುಮಾರಣ್ಣನಿಗೆ ಕಾಡುತ್ತಿರುವ ರೆಡ್ಡಿ ಗುನ್ನಕ್ಕೂ ಏನು ವ್ಯತ್ಯಾಸ?
* ಚಿಕೂನ್ ಒಮ್ಮೆ ಬಂದು ಹೋಗುತ್ತದೆ. ಆದರೆ ರೆಡ್ಡಿ ಗುನ್ನ ಮತ್ತೆ ಮತ್ತೆ ಕಾಡುತ್ತಿರುತ್ತದೆ.

ಎಂ. ಶ್ರೀಧರ್, ಮಿರ್ಜಾನ್
ಸಮ್ಮಿಶ್ರ ಸರಕಾರದ ಆಯಸ್ಸು ಇನ್ನೆಷ್ಟು ದಿನ?
* ಯಡ್ಡಿಗೆ ಸಫಾರಿ ಸೂಟ್ ಹೊಲಿಸುವ ಅಗತ್ಯ ಬಾರದಿರುವಷ್ಟು ದಿನ.

ಎ.ಎಸ್. ಸ್ವಾಮಿ, ಶೋರಾಪೂರ
'ಕಾಮಿನಿ'ಗೂ 'ಮನಿ'ಗೂ ಇರುವ ಅಂತರ?
* ನೀ ನನಗಿದ್ದರೆ ನಾ ನಿನಗೆ ಅಂತಾರೆ.

ಎಂ.ಎಸ್. ಕಾರ್ತಿಕ್, ಕುಮಟಾ
ಮನುಷ್ಯನ ವ್ಯಕ್ತಿತ್ವವನ್ನು ಅಳೆಯುವ ಮಾನದಂಡ ಯಾವುದು?
* ಪಿ. ಲಂಕೇಶರ 'ನೀತಿ ಸಂಹಿತೆ'.


ಪಾಪಿ, ಬೆಂಗಳೂರು
ಸಮಾಜಸೇವೆ ಎಂದರೆ?
* ಸಮಾಜದ 'ಶೇವು' ಎನ್ನುವವರಿದ್ದಾರೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಸ್ಲೀವ್‌ಲೆಸ್ ಬ್ಲೌಸ್‌ಗಳಂತೆ ಹುಕ್‌ಲೆಸ್ ಬಾಡಿಗಳೂ ಇದ್ದಿದ್ದರೆ?
* ಅವು ಗಂಡಸರ ಬನಿಯನ್‌ನಂತಿರುತ್ತಿದ್ದವು.

ಬಸವರಾಜ್ ಬೆಸ್ತರ್, ಹರಪನಹಳ್ಳಿ
ಮೊನ್ನೆ ಚೆಡ್ಡಿಗಳು ಜಾಗಟೆ ಗಂಟೆ ಬಾರಿಸಿದವಲ್ಲ?
* ಕೆಲಸವಿಲ್ಲದ ಬಡಿಗನ ಕತೆ ನಿಮಗೆ ಗೊತ್ತಲ್ಲಾ...!

ಎನ್. ವಿ. ಹಾಲಪ್ಪ, ಶಿವಮೊಗ್ಗ
ಚಲುವ, ಚನ್ನಿಗರ ಚಿನ್ನಾಟ ಕುಮಾರಸ್ವಾಮಿಗೆ ಪ್ರಾಣ ಸಂಕಟವೇ?
* ಇಲ್ಲ ಪ್ರಣಯ ಸಲ್ಲಾಪ.

ಕೆ.ವಿ.ಶಿವಕುಮಾರ್, ಕಾಳೀಹುಂದಿ
ರೆಡ್ಡಿ ಬಾಂಬ್‌ಗೂ, ಡಿಕೆಶಿ ಬಾಂಬ್‌ಗೂ ಕುಮಾರಣ್ಣ ಸಿಡಿಯಲಿಲ್ಲವಲ್ಲಾ?
* ತಾಳ್ಮೆ... 'ಲಂಕೇಶ್' ಬಾಂಬ್‌ನಿಂದ ಸ್ಫೋಟಗೊಳ್ಳಲಿದ್ದಾರೆ.



ರಾಮು ಮಲ್ಲಿಕಪ್ಪ, ಕೋಣಂದೂರು
ಇಟ್ಟುಕೊಂಡವಳು ಇರೋತನಕ, ಕಟ್ಟಿಕೊಂಡವಳು ಕೊನೆ ತನಕ, ಹಾಗಾದರೆ ಬಿಟ್ಟು ಹೋದವಳು?
* ಭ್ರಮೆಗಳು ಇರೋತನಕ.

ಡಿ.ಎನ್. ನಾಗರಾಜ್, ಹರಪನಹಳ್ಳಿ
ರಾಜಕೀಯದ ದೊಂಬರಾಟಕ್ಕೂ ಪ್ರೇಮದ ಕಣ್ಣಾಮುಚ್ಚಾಲೆಗೂ ಏನು ಸಂಬಂಧ?
* ಶೋಭಾಳ ಅಣ್ಣನಿಗೆ ಯಡ್ಡಿ ಕೊಡಿಸಿದ ಗಣಿ ಲೈಸೆನ್ಸ್‌ನಷ್ಟೇ ಸಂಬಂಧ.

ಬಿ.ಎಸ್. ಇಮ್ಯಾನುವೇಲ, ಮಸರಕಲ
ಊಟಕ್ಕೆ ಮೊದಲು ಉಪ್ಪಿನ ಕಾಯಿ, ಪ್ರೇಮಕ್ಕೆ ಮೊದಲು...?
* ಕಾಮಸೂತ್ರ... ಅಂಗಡಿಯಿಂದ ತಂದದ್ದು!

ಬಹುಮಾನಿತ ಪ್ರಶ್ನೆ

ಜೆ.ಡಿ.ಎಲ್. ಲಕ್ಷ್ಮಿ, ಗದ್ದಂಬಚ್ಚಹಳ್ಳಿ
ಮೋಡ ಮೋಡ ಡಿಕ್ಕಿಯಾದರೆ ಮಳೆ. ಹೆಣ್ಣು-ಗಂಡು ಡಿಕ್ಕಿಯಾದರೆ?
* ಮಕ್ಕಳ ಬೆಳೆ.

ಛೀ ತುಂಟಿ!

ಮೂವರು ಮಹಿಳೆಯರು ತಮ್ಮ ಪತಿರಾಯರ ಸಾಮರ್ಥ್ಯದ ಬಗ್ಗೆ ಚರ್ಚಿಸುತ್ತಿದ್ದರು.

"ನನ್ನ ಗಂಡ ಕ್ರಿಕೆಟ್ ಆಟಗಾರನಂತೆ. ಬ್ಯಾಟ್ ಬಾರಿಸಿ, ಬಾರಿಸಿ ಅದರಲ್ಲಿ ಪರಿಣಿತನಾಗಿದ್ದಾನೆ" ಎಂದಳು ಮೊದಲನೆಯವಳು.

"ನನ್ನ ಗಂಡ ಕಬ್ಬಡಿ ಆಟಗಾರನಂತೆ. ಉಸಿರು ಗಟ್ಟಿಸುವಷ್ಟು ಅದ್ಭುತವಾಗಿ ಪ್ರೇಮಿಸುತ್ತಾನೆ" ಎಂದಳು ಎರಡನೆಯವಳು.

"ಅದೆಲ್ಲಾ ಏನೂ ಅಲ್ಲ, ನನ್ನ ಗಂಡ ಒಲಂಪಿಕ್ಸ್‌ನಲ್ಲಿ ಚಿನ್ನದ ಪದಕ ಗಳಿಸಿದ ಕ್ರೀಡಾಪಟುವಿನಂತೆ" ಎಂದಳು ಮೂರನೆಯವಳು.

"ಹೌದಾ? ಹೇಗೆ" ಎಂದು ಕುತೂಹಲದಿಂದ ಇತರರು ಕೇಳಿದರು.

"ಎಲ್ಲವೂ 40 ಸೆಕೆಂಡ್‌ಗಳಲ್ಲಿ ಮುಗಿದು ಬಿಡುತ್ತದೆ" ಎಂದು ನಿಟ್ಟುಸಿರುಬಿಟ್ಟಳು ಮೂರನೆಯವಳು.



ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!


ವಾರದ ಪ್ರಶ್ನೆ:

ವಾಜಪೇಯಿ ಕಾಲಿಗೆ ಬಿದ್ದು ಕುಮಾರಸ್ವಾಮಿ ಕೊಟ್ಟ ಬೊಕೆಯಲ್ಲಿ ಏನಿದ್ದಿರಬಹುದು?

ಆಗಸ್ಟ್ 9ರ ಸಂಚಿಕೆಯ ನಮ್ಮ ಪ್ರಶ್ನೆ: ದೇವೇಗೌಡರು 'ಮಾದು ಇಲ್ಲವೆ ಮಡಿ' ಹೋರಾಟ ಪ್ರಾರಂಭಿಸಿದ್ದಾರಲ್ಲ?
ನಿಮ್ಮ ಉತ್ತರ: 'ಮಡದಿ ಇಲ್ಲ, ನದಿ'ಯ ಮುಂದುವರೆದ ಭಾಗ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಸಿ. ಹಸೀನ್, ಉಜಿರೆ

ಗಾಡ್-ಫಾದರ್ ರಾಮಮೂರ್ತಿ ಗಾನ್!



'ಮುನ್ನಾಭಾಯಿ' ಡಾ. ಎಚ್.ಡಿ. ರಮೇಶ್ ಕಳೆದ ವಾರವಷ್ಟೇ ನಮ್ಮೊಂದಿಗೆ ಮಾತನಾಡುವಾಗ ತಮ್ಮ ಐರನ್ ಓರ್ ಮೈನಿಂಗ್ ವ್ಯವಹಾರದ 'ಗಾಡ್‌ಫಾದರ್' ಎಂದು ಬಣ್ಣಿಸಿದ್ದ ಚಿತ್ರದುರ್ಗ ಜಿಲ್ಲೆ ಸಿರಿಗೆರೆ ತಾಲ್ಲೂಕು ಮದಿಕೇರಿಪುರದ ಜಾನ್ ಮೈನ್ಸ್ ಮಾಲೀಕ ರಾಮಮೂರ್ತಿ ಶನಿವಾರ ಆಗಸ್ಟ್ 5 ರಂದೇ ಇಹಲೋಕ ಯಾತ್ರೆ ತೀರಿಸಿಬಿಟ್ಟಿದ್ದಾರೆ....

69 ವರ್ಷ ವಯಸ್ಸಿನ ರಾಮಮೂರ್ತಿ ಪ್ರಾಣತ್ಯಾಗ ಮಾಡಿದ ಬೆಂಗಳೂರಿನ 'ಟ್ರಿನಿಟಿ' ಖಾಸಗಿ ಹೈಟೆಕ್ ಆಸ್ಪತ್ರೆಯಲ್ಲಿ ಅವರ ಅಂತಿಮ ಕ್ಷಣದವರೆಗೂ ಚಿಕಿತ್ಸೆ ನೀಡಿದ್ದೂ ಡಾ. ರಮೇಶರ ಬ್ರದರ್-ಇನ್-ಲಾ ಹಾಗೂ ಸುಪ್ರಸಿದ್ಧ ಹೃದ್ರೋಗ ತಜ್ಞ ಡಾ. ಸಿ.ಎನ್. ಮಂಜುನಾಥ್‌ರವರೇ....


ರಾಮಮೂರ್ತಿಯವರ ಸಾವು ಅತ್ಯಂತ ಸಹಜ, ಸ್ವಾಭಾವಿಕ ಕ್ರಿಯೆಯಾದರೂ ಕಳೆದ 2-3 ವರ್ಷಗಳಿಂದ ದೇವೇಗೌಡರ ಪುತ್ರದ್ವಯರಾದ ಎಚ್.ಡಿ. ಬಾಲಕೃಷ್ಣೇಗೌಡ ಮತ್ತು ಡಾ. ರಮೇಶ್ ಜೋಡಿ ನಡೆಸುತ್ತಿದ್ದ ಬಿಎಸ್‌ಕೆ ಟ್ರೇಡಿಂಗ್ ಕಂಪನಿಯ ಜತೆ ಕೊಂಚ ಹೆಚ್ಚೆನಿಸುವಷ್ಟು ಬಾಂಧವ್ಯ ರೂಢಿಸಿಕೊಂಡಿದ್ದರಿಂದಾಗಿ ಹಲವು ಹತ್ತು ಊಹಾಪೋಹಗಳು, ವದಂತಿಗಳನ್ನು ಹುಟ್ಟು ಹಾಕಿದೆ....

ಮೂರ್ತಿಯವರ ಏಕೈಕ ಪುತ್ರ, ಸಾಫ್ಟ್‌ವೇರ್ ಇಂಜಿನಿಯರ್, 30ರ ಹರೆಯದ ಪ್ರವೀಣ್‌ಚಂದ್ರರೇ ಜಾನ್ ಮೈನ್ಸ್ ಹಾಗು ಇನ್ನಿತರ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿಪಾಸ್ತಿಗಳಿಗೆ ಅಧಿಕೃತ ವಾರಸುದಾರರೆನಿಸಿದರೂ ಗಣಿಗಾರಿಕೆ ವಿರುದ್ಧ ಕುಮಾರಸ್ವಾಮಿಯವರ ಸರ್ಕಾರ ಸಾರಿರುವ ರಾಜಕೀಯ ಸಮರದಿಂದಾಗಿ ಭವಿಷ್ಯದ ಸಾಧ್ಯತೆಗಳ ಬಗ್ಗೆ ಅನಿಶ್ಚಿತತೆಯ ಕಾರ್ಮೋಡಗಳು ಆವರಿಸಿಕೊಂಡಿವೆ.

'ಲಂಕೇಶ್' ಜೊತೆ ಮುಖಾಮುಖಿಯಲ್ಲಿ ಡಾ. ರಮೇಶ್ ತುಂಬಾ ಲೋಕಾಭಿರಾಮವಾಗಿ ತಮ್ಮ ಮೈನಿಂಗ್ ವ್ಯಾಪಾರದ ಸ್ವಾರಸ್ಯಕರ ಸಂಗತಿಗಳನ್ನು ಹಂಚಿಕೊಂಡಂತೆ ಮೇಲ್ನೋಟಕ್ಕೆ ಗೋಚರಿಸಿರಬಹುದಾದರೂ, ಆತ ಹೇಳದೆಯೇ ಹೋದ ವಿಚಾರಗಳು ತರಹೇವಾರಿ ಊಹೆಗಳಿಗೆ ಕಾರಣವಾಗಿವೆ...


ರಾಮಮೂರ್ತಿಯನ್ನು ಮಾತ್ರ 'ಗಾಡ್‌ಫಾದರ್' ಎಂದು ಬಣ್ಣಿಸಿದ ರಮೇಶ್ ತಮ್ಮ ಬಿಎಸ್‌ಕೆ ಕಂಪನಿಯ ಇನ್ನೊಂದು ತುದಿಯಲ್ಲಿ ನಿಕಟವರ್ತಿಯಾಗಿ ವ್ಯವಹರಿಸುತ್ತ ಬಂದ ವಸಂತ್ ಪೋದ್ದಾರ್ ಎಂಬ ಮತ್ತೊಬ್ಬ ಹಿತೈಷಿಯ ಹೆಸರನ್ನು ಅಪ್ಪಿತಪ್ಪಿಯೂ ಉಲ್ಲೇಖಿಸಲಿಲ್ಲ....

MEL, PGH ಮತ್ತು ಕಾಂಟಿನೆಂಟಲ್ ಎಂಬ ಮೂರು ಮೈನಿಂಗ್, ಟ್ರೇಡಿಂಗ್ ಕಂಪನಿಗಳ ಮಾಲೀಕನಾದ ಈ ಪೋದ್ದಾರ್ 1982-83 ರಲ್ಲಿಯೇ ಅಂದಿನ ಮುಖ್ಯಮಂತ್ರಿ ಗುಂಡೂರಾಯರ ಗೆಳೆಕಾರರಲ್ಲೊಬ್ಬನಾಗಿದ್ದ.... ಹಾಗೆಯೇ ಕ್ರಮೇಣ ತನ್ನ ವೃತ್ತಿಬಾಂಧವರಾದ ಜಾನ್ ಮೈನ್ಸ್ ರಾಮಮೂರ್ತಿಯವರ ಪ್ರಬಲ ಶತ್ರುವಾಗಿಯೂ ಮಾರ್ಪಾಟಾಗಿದ್ದ....



ಜಾನ್ ಮೈನ್ಸ್ ಪಕ್ಕದಲ್ಲಿ ಗೋವಾದ ಸಲಗಾಂವ್‌ಕರ್‌ರ ಸೀಸಾ-ಗೋವಾ ಮೈನ್ಸ್ ಇದ್ದು ಅದರ ನಂತರವೇ ಈ ಪೋದ್ದಾರ್ ಮೈನ್ಸ್... ಗುಣಮಟ್ಟದಲ್ಲಿ ಕೊಂಚ ಕಳಪೆ ಎಂದೇ ಹೆಸರುವಾಸಿಯಾದ ಈ ಪೋದ್ದಾರ್ ಮೈನ್ಸ್‌ನ ಕಬ್ಬಿಣದ ಅದಿರಿಗೆ ರಾಮಮೂರ್ತಿಯವರ ಗಣಿಯ ಅತ್ಯುತ್ತಮ (65 GR) ಶ್ರೇಣಿಯ ಅದಿರು ಭಾರೀ ಪೈಪೋಟಿ ಒಡ್ಡುತ್ತ ಬಂದಿತ್ತು.

ತಮ್ಮ 109 ಎಕರೆ ವಿಸ್ತಾರದ ಜಾನ್ ಮೈನ್ಸ್ ಪೈಕಿ 30 ಎಕರೆಯನ್ನು ತುಂಗಭದ್ರಾ ಮೈನಿಂಗ್ ಲಿ. ಕಂಪನಿಯ (TML) ಸಲಗಾಂವ್‌ಕರ್‌ಗೆ ರೇಸಿಂಗ್ ಕಂಟ್ರಾಕ್ಟ್ ನೀಡಿದ್ದ ರಾಮಮೂರ್ತಿ ಉಳಿದಿದ್ದರಲ್ಲಿ ಒಂದಷ್ಟು ಪಾಲು ಆಶಾಪೂರ್ ಮೈನ್ಸ್, ಥೆರಾಪಂತ್ ಹಾಗು ಭಗವತಿ ಇಂಟರ್‌ನ್ಯಾಷನಲ್ ಕಂಪನಿಗಳಿಗೆ ಹಂಚುತ್ತ ನೆಮ್ಮದಿಯಿಂದಲೇ ವ್ಯವಹರಿಸುತ್ತಲಿದ್ದರು....



ಹೀಗಿರಲಾಗಿ 2003-04 ರಲ್ಲಿ ಅಂದಿನ ಗಣಿ ಇಲಾಖೆ ನಿರ್ದೇಶಕ ಬಸಪ್ಪರೆಡ್ಡಿ ಎಂಬ 'ಮಹಾಮಹಿಮನ' ಕೃಪಾಕಟಾಕ್ಷದಿಂದ ಈ ಬಿಎಸ್‌ಕೆ ಕಂಪನಿಯ ಬಾಲಣ್ಣ-ರಮೇಶಣ್ಣ ಜೋಡಿಯ ಪರಿಚಯವಾಯ್ತು... ಪರಿಚಯ ವ್ಯವಹಾರವಾಗಿ ಬೆಳೆಯಿತು...

ನಿವೃತ್ತಿಯಂಚಿನಲ್ಲಿದ್ದ ಬಸಪ್ಪರೆಡ್ಡಿಗೆ ಸೇವಾ ವಿಸ್ತರಣೆಯ ಆಸೆ ತೋರಿಸಿದ ಬಾಲಕೃಷ್ಣ ಒಂದೇ ಸಾರಿಗೆ ಜಾನ್ ಮೈನ್ಸ್‌ನಿಂದ 40 ಸಾವಿರ ಟನ್ ಮಾಲು ಗಿಟ್ಟಿಸಿದ್ದರು.....

ಚೈನಾದ ಗ್ರಾಹಕರೊಂದಿಗೆ ಒಬೆರಾಯ್ಸ್‌ನಲ್ಲಿ ವ್ಯವಹಾರ ಕುದುರಿಸಿದ ಬಾಲಕೃಷ್ಣೇಗೌಡರಿಗೆ ಕಬ್ಬಿಣದ ಅದಿರಿನ ವ್ಯಾಪಾರದಲ್ಲಿ ಚಿನ್ನದ ಗಣಿಯೆ ಗೋಚರಿಸಿಬಿಟ್ಟಿತು.... ಮೆತ್ತಗೆ ರೆಡ್ಡಿಯ ಮುಲಾಜು ಬಿಡಿಸಿಕೊಂಡು ಏಕಾಂಗಿಯಾಗಿ (ಅಂದರೆ ತಮ್ಮನೊಡನೆ) ವ್ಯಾಪಾರ ಮಾಡಲು ನಿರ್ಧರಿಸಿದರು... ಪಾಪ, ಬಸಪ್ಪರೆಡ್ಡಿ ಹತಾಶರಾಗಿ ತಮ್ಮ ರಿಟೈರ್‌ಮೆಂಟ್ ದಿನ ಫೋನ್ ಮಾಡಿದಾಗ "ರೆಡ್ಡಿ, ನಾನು ದುಬೈನಲ್ಲಿದ್ದೇನೆ" ಎಂದೇಳಿ ಫೋನ್ ಕ[...] ಮಾಡಿಬಿಟ್ಟರು ಬಾಲ[...]

ಮುಂದೊಂದು [...] 2005 ರಲ್ಲಿ ಕುಮಾರಣ್ಣನವರೇ ಬಸಪ್ಪರೆಡ್ಡಿಯವರಿಗೆ ಫೋನಾಯಿಸಿದರು: "ರೆಡ್ಡಿಯವರೇ, ದಯವಿಟ್ಟು 2 ಲಕ್ಷ ಮೆಟೀರಿಯಲ್ ಅರೆ[...] ಮಾಡಿಸ್ತೀರಾ" ಎಂದು ಬೇಡಿಕೆ ಇಟ್ಟರು....

ಇದೇ ಕ್ಷಣಕ್ಕಾಗಿ ಕಾದಿದ್ದ ರೆಡ್ಡಿ, "ಸಾರಿ ಇವತ್ತು ನಾನು ಯೋಗೇಂದ್ರ ತ್ರಿಪಾಠಿಯವರಿಗೆ ಚಾ[...] ಕೊಡ್ತಾ ಇದ್ದೇನೆ" ಎಂದೆನ್ನುತ್ತ ಫೋನ್ ಕುಕ್ಕಿದರು[...]


ಕ್ರಮೇಣ ಬಿಎಸ್‌ಕೆ ಕಂಪನಿಯ ಸೋದರದ್ವ[...] ರಾಮಮೂರ್ತಿಯವರ ಕಂಪನಿಯ ಸಣ್ಣಪುಟ್ಟ ಸಾ[...] ಗಳನ್ನೆಲ್ಲ ತಮ್ಮದೇ ಕಪಿಮುಷ್ಟಿಯಲ್ಲಿದ್ದ ಸ[...] ಸರ್ಕಾರಗಳಿಂದ ಬಗೆಹರಿಸುತ್ತ ಅವರನ್ನು ಅ[...] ವಶೀಕರಣ ಮಾಡಿಕೊಂಡರು....

ತಮ್ಮ ಬಹುತೇಕ ಉತ್ಪನ್ನವನ್ನೆಲ್ಲ ಈ ಬಿ[...] ಕಂಪನಿಗೇ ಧಾರೆಯೆರೆಯುತ್ತ ಬಂದ ರಾಮಮೂ[...] ಹಳೆಯ ನಂಬಿಕಸ್ತ ಗಿರಾಕಿಗಳ ಬಾಂಧವ್ಯವನ್ನೇ [...] ಮಾಡಿಸಿಬಿಟ್ಟರು....


ಇತರರಿಗೆ ಟನ್ನಿಗೆ 1000-1100 ರೂ.ಗ[...] ಐದ್ಯೆದು ಸಾವಿರ ಟನ್ನಿನಂತೆ ಹಂಚುತ್ತಿದ್ದ ರಾಮಮೂ[...] ದೇವೇಗೌಡರ ಮಕ್ಕಳ ಕಂಪನಿಗೆ ಬರೀ 700 [...] ಮಾರಿ ಅವರ ಕೃಪಾ-ಕಟಾಕ್ಷಕ್ಕಾಗಿ ಹಾತೊ[...] ಲಾರಂಭಿಸಿದರು... ಸಿರಿಗೆರೆಯಿಂದ ಮಂಗಳೂ[...] ಟ್ರಕ್‌ನಲ್ಲಾದರೆ 950 ರೂ. ಸಾಗಾಣಿಕೆ ವೆಚ್ಚವಾಗು[...] ಆದ್ದರಿಂದ ಟನ್ನಿಗೆ ಮೂರ್ತಿಯವರೇ ಖುದ್ದು [...] ವಹಿಸಿ ಸಾಸಲು ಸ್ಟೇಷನ್ನಿನಿಂದ ರೈಲು ವ್ಯಾಗ[...] ಲೋಡ್ ಮಾಡಿಸಿ ಟನ್ನಿಗೆ ಕೇವಲ 600[...] ವೆಚ್ಚವಾಗುವಂತೆ ನೋಡಿಕೊಂಡರು...

ಲಾಯರ್ ಎಲೆಕ್ಷನ್

ಸುಬ್ಬಾರೆಡ್ಡಿ ಗಿಮಿಕ್ಸ್!



ಆಗಸ್ಟ್ 20 ರಂದು ನಡೆಯಲಿರುವ ಬೆಂಗಳೂರು ವಕೀಲರ ಸಂಘದ ಎಲೆಕ್ಷನ್ ಎಲ್ಲಾ ರೀತಿಯ ಪುಡಾರಿ ವರಸೆಗಳನ್ನು ತೋರಿಸುತ್ತಿದೆ. ಜಾತಿ, ಪ್ರಾಂತ್ಯ ಅಷ್ಟೇ ಅಲ್ಲ ಈ ಬಾರಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ನವರೂ ಇದರಲ್ಲಿ ಮೂಗು ತೂರಿಸಿದ್ದಾರೆ. ಇದರಲ್ಲಿ ಅತೀ ರಂಜಕವಾಗಿರುವುದು ಬಿಜೆಪಿ ಮಾಜಿ ಶಾಸಕ ಹಾಗೂ ಹತ್ತು ವರ್ಷ ಸಂಘದ ಅಧ್ಯಕ್ಷರಾಗಿದ್ದ ಸುಬ್ಬಾರೆಡ್ಡಿಯವರ ಚಟುವಟಿಕೆಗಳು. ಇವರು ಹತ್ತು ವರ್ಷಗಳಷ್ಟು ದೀರ್ಘ ಕಾಲ ಅಧ್ಯಕ್ಷರಾಗಿದ್ದರೂ ವಕೀಲರ ಸಂಘಕ್ಕೊಂದು ಸ್ವಂತ ಕಟ್ಟಡ ಇರಲಿಲ್ಲ, ಸ್ಟೈಫಂಡ್ ಮೊತ್ತ ನಗಣ್ಯವಾಗಿತ್ತು, ಆಗಾಗ್ಗೆ ಸಿಟಿ ಪೊಲೀಸರೊಂದಿಗೆ ನಡೆಯುತ್ತಿದ್ದ ಜಗಳಗಳನ್ನು ಬಿಟ್ಟರೆ ಉಳಿದಂತೆ ವಕೀಲರ ಸಂಘದ ಅಸ್ತಿತ್ವವೇ ಯಾರ ಗಮನಕ್ಕೂ ಬರುತ್ತಿರಲಿಲ್ಲ. ಆದರೆ ಡಿ.ಎಲ್. ಜಗದೀಶ್ ಅಧ್ಯಕ್ಷರಾಗಿ ಬಂದ ನಂತರ ಅವರ ಬೆಂಬಲಕ್ಕಿದ್ದ ಕೆ.ಎನ್. ಪುಟ್ಟೇಗೌಡ ಮತ್ತಿತರರ ಪ್ರಯತ್ನಗಳಿಂದಾಗಿ ಈಗ ಸುಸಜ್ಜಿತ ವಕೀಲರ ಭವನ ನಿರ್ಮಾಣಗೊಂಡಿದೆ. ಹೊಸದಾಗಿ ಲಾಯರ್‌ಗಳಾಗಿ ಪ್ರಾಕ್ಟೀಸ್ ಶುರು ಮಾಡುವವರಿಗೆ ತಿಂಗಳಿಗೆ ಒಂದು ಸಾವಿರ ರೂ. ಸ್ಟೈಫಂಡ್ ನೀಡುವಂತೆ ಏರ್ಪಾಟಾಗಿದೆ. ಈ ಮೊತ್ತ ಮೊದಲು ಐನೂರಾಗಿತ್ತು.




ಕೆ.ಎನ್. ಪುಟ್ಟೇಗೌಡ

ಇತ್ತೀಚಿನವರೆಗೂ ಜೊತೆಯಾಗೇ ಇದ್ದ ಡಿ.ಎಲ್. ಜಗದೀಶ್ ಹಾಗೂ ಕೆ.ಎನ್. ಪುಟ್ಟೇಗೌಡ ಇಬ್ಬರೂ ಈ ಬಾರಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದಾರೆ. ಕಳೆದ ಬಾರಿಯೂ ಈ ಇಬ್ಬರು ಸ್ಪರ್ಧಿಸಿದ್ದಾಗ 'ಮುಂದಿನ ಬಾರಿಗೆ ಪುಟ್ಟೇಗೌಡರಿಗೇ ಅವಕಾಶ'ವೆಂಬ ಅಲಿಖಿತ ಒಪ್ಪಂದ ಮಾಡಿಕೊಂಡು ಪುಟ್ಟೇಗೌಡರು ಕಣದಿಂದ ಹಿಂದೆ ಸರಿಯುವಂತೆ ಜಗದೀಶ್ ನೋಡಿಕೊಂಡಿದ್ದರು. ಅದಕ್ಕೊಪ್ಪಿದ್ದ ಪುಟ್ಟೇಗೌಡರು ಜಗದೀಶ್ ಗೆಲುವಿಗೆ ಕೆಲಸ ಮಾಡಿದ್ದರು. ನಂತರವೂ ವಕೀಲರ ಸಹಕಾರ ಸಂಘ, ವಕೀಲರ ಭವನ ನಿರ್ಮಾಣದಲ್ಲಿ ಓಡಾಡಿ ಹೆಸರು ಮಾಡಿದ್ದರು. ಆದರೆ ಅದೇನಾಯಿತೋ ಏನೋ ಈ ಬಾರಿ ಜಗದೀಶ್ ಮತ್ತೆ ಸ್ಪರ್ಧಿಸಿದ್ದಾರೆ. ವಂಚನೆಗೊಳಗಾದೆನೆಂಬ ಸಿಟ್ಟಿನಿಂದ ಪುಟ್ಟೇಗೌಡರೂ ಅಖಾಡಕ್ಕಿಳಿದಿದ್ದಾರೆ. ಅದೇ ಕಣದಲ್ಲಿ ಮರಿಯಪ್ಪ, ಮಂಜುನಾಥ್, ಬಿ.ಬಿ. ರಾಜ ಇದ್ದಾರಾದರೂ ಇವರ ಪೈಕಿ ಮರಿಯಪ್ಪನವರ ತೂಕ ಸ್ವಲ್ಪ ಜಾಸ್ತಿ ಇದೆ.

ಇದೆಲ್ಲಾ ಏನೇ ಇರಲಿ, ಮತ್ತೆ ವಕೀಲರ ಸಂಘಕ್ಕೆ ಅಧ್ಯಕ್ಷರಾಗಲು ತಿಣುಕಾಡುತ್ತಿರುವ ಸುಬ್ಬಾರೆಡ್ಡಿ ಮಾಡುತ್ತಿರುವ ಗಿಮಿಕ್‌ಗಳನ್ನು ನೋಡಿ ಈಗ ಇಡೀ ವಕೀಲ ಸಂಘ ನಗಾಡುತ್ತಿದೆ.

ಕಳೆದ ತಿಂಗಳು ಗೃಹ ಇಲಾಖೆಯ ಉನ್ನತ ಅಧಿಕಾರಿಗಳು 'ಉಗ್ರಗಾಮಿ ದಾಳಿ ಹಾಗೂ ಮುನ್ನೆಚ್ಚರಿಕೆ ಬಗ್ಗೆ' ಒಂದು ಮೀಟಿಂಗ್ ಮಾಡಿ ಇನ್ನು ಮುಂದೆ ಪಾಸ್ ಇರದವರನ್ನು ವಿಧಾನಸೌಧಕ್ಕೆ ಬಿಡಬಾರದೆಂದು ನಿರ್ಧಾರ ಮಾಡಿದ್ದರು.



ಡಿ.ಎಲ್. ಜಗದೀಶ್

ಅದರ ಮಾರನೇ ದಿನವೇ ಯಾವುದೋ ಕೆ[...] ವಿಧಾನಸೌಧದೊಳಕ್ಕೆ ಹೋಗಲು ಸುಬ್ಬಾರೆಡ್ಡಿ ಬ[...] ಕಾವಲಿಗಿದ್ದ ಪೊಲೀಸರು ಅವರ ಬಳಿ ಪಾಸ್ [...] ಕಾರಣ ಬಿಟ್ಟರಲಿಲ್ಲ. ಇದರಿಂದ ಸ್ಥಳದಲ್ಲೇ [...] ಎಂದು ರೇಗಿ ಕುಣಿದಾಡಿದ ಸುಬ್ಬಾರೆಡ್ಡಿ ಇಡೀ ಹ[...] ರನ್ನು ಎತ್ತಿಕಟ್ಟಿ ಗಲಾಟೆ ಮಾಡಲು ಪ್ರಯತ್ನಿ[...] 'ಕರೀ ಕೋಟು ಹಾಕಿಕೊಂಡು ಯಾರೇ ಬಂ[...] ಪೊಲೀಸರು ಪ್ರಶ್ನಿಸದೆ ಒಳಬಿಡಬೇಕೆಂದು' [...] ವಾದ ಮಂಡಿಸಿದ್ದರು. ಆದರೆ ಪೊಲೀಸರು ಅ[...] ಕೇರ್ ಮಾಡಲಿಲ್ಲವೆನ್ನಿ. ವಾಸ್ತವವಾಗಿ ಸುಬ್ಬಾರೆಡ್ಡಿಯ[...] ಮಾಡಿದ ಈ ಗಲಾಟೆಯ ಉದ್ದೇಶ ಆಗಸ್ಟ್ [...] ಎಲೆಕ್ಷನ್ನೇ ಆಗಿತ್ತು. ವಕೀಲರ ಪರವಾಗಿ ತಾ[...] ಧೀರತನದಿಂದ ಹೋರಾಡಿದೆನೆಂಬ ಪೋಜು ಕೊ[...] ದಷ್ಟೇ ಆಗಿತ್ತು. ಇದಲ್ಲದೆ ಕೊಕಾಕೋಲಾ ಬಾ[...] ಒಡೆದು ಹಾಕುವುದು ಇತ್ಯಾದಿ 'ಶೋ'ಗಳೂ ರೆಡ್ಡಿ[...] ರಿಂದ ನಡೆಯುತ್ತಿವೆ. ತಾವು ಸಂಘದ ಅಧ್ಯಕ್ಷ[...] ಕಾಲ ಪೂರ್ತಿ ತಮ್ಮ ತವರು[...] ಕೋಲಾರದ ವಕೀಲರನ್ನು ಬ[...] ಸಂಖ್ಯೆಯಲ್ಲಿ ಸಂಘದ ಮೆಂಬರ್[...] ಎನ್‌ರೋಲ್ ಮಾಡಿಸುತ್ತಾ ಬ[...] ಸುಬ್ಬಾರೆಡ್ಡಿ ಇವತ್ತು ಸಂಘದ ಸ[...] ಪ್ರಾದೇಶಿಕ ಪ್ರಾತಿನಿಧ್ಯತೆಯಲ್ಲಿ [...] ತೋಲನ ಉಂಟಾಗಲು ಪ್ರ[...] ಹೊಣೆಯಾಗಿದ್ದಾರೆ. ಹಾಲಿ [...] ಹದಿನಾಲ್ಕು ಸಾವಿರ ಸದಸ್ಯರಲ್ಲಿ [...] ಜನ ಕೋಲಾರದವರೇ ಆಗಿದ್ದಾರೆ[...] ರೊಂದಿಗೆ ಜಾತಿ ಹಾಗೂ ಬಜ[...] ಮೇಲುಜಾತಿ ಲಾಬಿಗಳೂ [...] ಕೊಂಡರೆ ವಕೀಲರ ಸಂಘದ ಹಣ[...] ಏನಾಗಬಹುದೋ ಊಹಿಸಿ!

ಮತ್ತೊಂದೆಡೆ ಜನರಲ್ ಸೆಕ್ರೆಟರಿ ಸ್ಥಾನಕ್ಕೆ [...] ಜನ ಸ್ಪರ್ಧಿಸಿದ್ದು ದೇವೇಗೌಡರ ಶಿಷ್ಯ ಎ.ಪಿ. ರಂಗ[...]

ಇದೇ ಅವಕಾಶಕ್ಕಾಗಿ ಹೊಂಚು ಹಾಕಿದ್ದ ಮೂರ್ತಿಯವರ ಶತ್ರು ಪೋದ್ದಾರ್ ಗುಟ್ಟಾಗಿ ಮತ್ತೊಂದು ತುದಿಯಿಂದ ಬಿಎಸ್‌ಕೆ ಸೋದರರ ಸಲಿಗೆ ರೂಢಿಸಿಕೊಂಡ. ತನ್ನದೇ ಹಾಂಕಾಂಗ್ ನೆಲೆಯುಳ್ಳ "ಕಾಂಟಿನೆಂಟಲ್" ಎಂಬ ಬೇನಾಮಿ ಕಂಪನಿಗೆ ಅದಿರನ್ನು ರಫ್ತು ಮಾಡಿದಲ್ಲಿ 52 ಡಾಲರ್ ಬದಲು 54 ಡಾಲರ್‌ನಂತೆ ಹೆಚ್ಚು ಬೆಲೆ ನೀಡುವ ಒಪ್ಪಂದ ಮಾಡಿಕೊಂಡ....

ಹೀಗೆ ರಾಮಮೂರ್ತಿಯವರ ಜಾನ್ ಮೈನ್ಸ್‌ನ ಮೆಟೀರಿಯಲ್ಲು ಬಾಲಣ್ಣ-ರಮೇಶಣ್ಣನವರ ಬಿಎಸ್‌ಕೆ ಕಂಪನಿಯ ಮೂಲಕ ತನ್ನದೇ ಕಾಂಟಿನೆಂಟಲ್ ಕಂಪನಿಗೆ ಸರಬರಾಜಾಗುವಂತೆ ಮ್ಯಾನೇಜು ಮಾಡುತ್ತ ಬಂದ ಪೋದ್ದಾರ್ ನೇಪಥ್ಯದಲ್ಲಿ ನಿಂತುಕೊಂಡೇ ತನ್ನ ಶತ್ರುವಿನ ವಿರುದ್ಧ ಸೇಡು ತೀರಿಸಿಕೊಂಡ....

ಇತ್ತ ಮೂರು ಹಂತದಲ್ಲೂ ಬೆಲೆ ರಿಯಾಯಿತಿ, ಸಾಗಾಣಿಕೆ ಉಳಿತಾಯ ಮತ್ತು ಟನ್ನಿಗೆ ಎರಡೆರಡು ಡಾಲರ್ ಹೆಚ್ಚುವರಿ ಬೋನಸ್ ಗಿಟ್ಟಿಸುತ್ತ ಬಂದ ಬಿಎಸ್‌ಕೆ-ಸೋದರದ್ವಯರು ತಾವು ಮಂಗಳೂರು ಬಂದರಿನಿಂದ ರಫ್ತು ಮಾಡಿದ ಪ್ರತಿ ಟನ್ನಿಗೆ ಗಳಿಸುತ್ತ ಬಂದ ನಿವ್ವಳ ಆದಾಯ ಸುಮಾರು 950 ರೂ!!

ಮುನ್ನಾಭಾಯಿ- ಡಾ. ರಮೇಶ್, ಎಂಬಿಬಿಎಸ್, ಎಂ.ಡಿ.ರವರ ಮಾತಿನ ಪ್ರಕಾರವೇ ಅವರ ಬಿಎಸ್‌ಕೆ ಕಂಪನಿ ಇದುವರೆಗೆ ಕೇವಲ 2.25 ಲಕ್ಷ ಟನ್ನಿನಷ್ಟೇ ಅದಿರನ್ನು ಚೈನಾಗೆ ರಫ್ತು ಮಾಡಿದೆ ಯೆಂದಿಟ್ಟುಕೊಂಡರೂ ಟನ್ನಿಗೆ 950 ರೂ.ನಂತೆ ಅವರ ಸಮಗ್ರ ಆದಾಯ ಎಷ್ಟಾದೀತೆಂದು ನಮ್ಮಂತಹ ಹುಲು ಮಾನವರು ಊಹಿಸಿಲಿಕ್ಕೂ ಆಗದು...

ಕಡೇ ದಿನಗಳಲ್ಲಿ ರಾಮಮೂರ್ತಿ ತಾವು ವಿನಾಕಾರಣ ಈ ಗೌಡ ಕುಟುಂಬದ ಬಲೆಯಲ್ಲಿ ಸಿಲುಕಿಬಿಟ್ಟೆ ಎಂಬ ಹತಾಶ ಭಾವನೆಯಿಂದ ನರಳುತ್ತಿದ್ದರೆಂಬುದು ನಿಜವೆ? ಶಿವಗಂಗೆಯ ಬಳಿ ಅವರು ಹಿಡಿಯಬೇಕೆಂದಿದ್ದ 110 ಎಕರೆ ಮ್ಯಾಂಗನೀಸ್ ಮೈನ್ಸ್‌ನ ಪರವಾನಗಿ ಕೇಂದ್ರ ಸರ್ಕಾರದಿಂದ ವಿಳಂಬವಾಗಲು ಸ್ವತಃ ಮೂರ್ತಿಯವರೇ ಕಾರಣರಾಗಿದ್ದರೆ? ಮೂರ್ತಿ ನಿಧನದ ನಂತರ ಜಾನ್ ಮೈನ್ಸ್‌ಗೆ ಬಿಎಸ್‌ಕೆ ಕಂಪನಿಯ ಬಲಿಷ್ಠ ಸೋದರರೇ ಲಗ್ಗೆಯಿಡುವ ಸಂಭವವಿದೆಯೇ?.... ಈ ಪ್ರಶ್ನೆಗಳಿಗೆ 'ಕುಮಾರಪರ್ವದ' ಮುಂಬರುವ ದಿನಗಳೇ ಉತ್ತರಿಸಬೇಕು.

-ರೇಶ್ಮೆ



ವಕೀಲರ ಭವನದ ಭವ್ಯ ಕಟ್ಟಡ

ಓಡಾಟ ಎದ್ದು ಕಾಣುತ್ತಿದೆ. ಆದರೆ ರಂಗನಾಥ್ ಎಲೆಕ್ಷನ್‌ಗೇ ಸ್ಪರ್ಧಿಸದಂತೆ ಕೆಲವರು ಮಾಡಿದ ತಂತ್ರ ಫಲಿಸಲಿಲ್ಲ.

ಇಷ್ಟಕ್ಕೂ, ವಕೀಲರ ಸಂಘ ಎಂದರೆ ಅದು ಇನ್ಯಾವುದೋ ಪುಢಾರಿಗಳ ಸಂಘಟನೆಯಂತಲ್ಲ, ಕನಿಷ್ಠ ಇಲ್ಲಾದರೂ ಆಂತರಿಕ ಪ್ರಜಾಪ್ರಭುತ್ವ, ಪಾರದರ್ಶಕತೆ, ಈರ್ಷ್ಯೆ, ಅಸೂಯೆಗಳಿಗೆ ಹೊರತಾದ ವಾತಾವರಣ ನಿರ್ಮಿಸಬೇಕಿದೆ.

-ಬಿಳಿದಾಳೆ ಈಶ

ಈ ಸರ್ಕಾರ ಬೀಳ್ಸೋದಕ್ಕೆ ನಾವು ಬಿಡಲ್ಲ!

ಇದ್ದಕ್ಕಿದ್ದಂತೆ ತಮ್ಮ ಕುಟುಂಬದ ಮೇಲೆ ಬಂದೆರಗಿದ ಆಪಾದನೆಗಳನ್ನು ಹೋಗಲಾಡಿಸಿ, ಜೆಡಿಎಸ್ ಸಂಘಟನೆ ಮಾಡಿ, ಕುಮಾರಸ್ವಾಮಿ ಸರ್ಕಾರ ಬೀಳದಂತೆ ತಡೆಗೋಡೆ ನಿರ್ಮಿಸಲು ತೀರ್ಮಾನಿಸಿದ ದೇವೇಗೌಡರು ಸಭೆ ಕರೆದು ಗಂಟೆಗಟ್ಟಲೆ ಭಾಷಣ ಜಡಿದೇ ಬಿಟ್ಟರಂತಲ್ಲಾ, "ನಮ್ಮದೇ ಪಕ್ಷದ ಸರ್ಕಾರವಿದ್ದರೂ, ನಮಗ್ಯಾವ ಅಧಿಕಾರವೂ ಇಲ್ಲ, ನಿಗಮ ಮಂಡಲಿ ಅಧಿಕಾರವಂತೂ ಕನ್ನಡಿಯೊಳಗಿನ ಗಂಟಾಗಿದೆ. ಸರ್ಕಾರದೊಳಗೆ, ವಿಧಾನಸೌಧದೊಳಗೆ, ಸರ್ಕಾರಿ ಕಚೇರಿಯೊಳಗೆ ಎಲ್ಲಿ ನೋಡಿದರೂ ಬಿಜೆಪಿಗಳು ಕೆಂಜಿರುವೆಯಂತೆ ಮುತ್ತಿಕೊಂಡು ಇಡೀ ಸರ್ಕಾರವನ್ನೇ ಇಡಿಯಾಗಿ ನುಂಗುತ್ತಿದ್ದಾರೆ. ಇದನ್ನು ನೋಡಿದ ನಮಗೆ ಕಣ್ಣೀರೇ ಬತ್ತಿ ಹೋಗಿದೆ" ಎಂದು ಜೆಡಿಎಸ್‌ನ ಕೆಲವು ದೊಡ್ಡ ಗಂಟಲುಗಳು ದೇವೇಗೌಡರಿಗೆ ಕೇಳುವಂತೆಯೇ ಮಾತನಾಡಿದವಂತಲ್ಲಾ, ಆಗ ಹೆಗಲ ಮೇಲಿನ ಟವಲ್ ಬೀಸಿ ಎಸೆದ ದೇವೇಗೌಡರು "ಅಧಿಕಾರದ ಆಸೆಗೆ, ಸ್ಥಾನಮಾನದ ಆಸೆಗೆ ಬರುವವರು ಇಲ್ಲಿ ಬರಲೇಬೇಡಿ. ಈಗಾಗಲೇ ಕೆಲವರು ಹೋದರಲ್ಲ, ಹಾಗೇ ನೀವೂ ಹೋಗಿಬಿಡಿ" ಎಂದರಂತಲ್ಲಾ, ಇದರಿಂದ ಕೆರಳಿ ಕ್ಯಾಕರಿಸಿದ ಕೆಲವು ಕಾರ್ಯಕರ್ತರು "ಈ ಮುದಿಗೌಡ ಹೇಳೋದರಲ್ಲೂ ಅರ್ಥ ಇದೆ ಕಂಡ್ರಿ. ಅದೇ ನಮಗಿನ್ನ ಅರ್ಥವಾಗಿಲ್ಲವಲ್ಲಾ, ಅಧಿಕಾರದ ಆಸೆ ಏನಿದ್ದರೂ ಅವನ ಮಕ್ಕಳು, ಮರಿಗಳು, ಬೀಗರು, ಬಿಜ್ಜರಿಗೆ ಮೀಸಲೆ ಹೊರತು, ನಮಗಲ್ಲ" ಎಂದುಕೊಂಡು ಬರಖಾಸ್ತಾದರಂತಲ್ಲಾ, ಥೂತ್ತೇರಿ!



* * * * *

ಬೆಂಗಳೂರಲ್ಲಿ ನಡೆದ ಜೆಡಿಎಸ್ ಪಕ್ಷದ ಪ್ರಮುಖರ ಸಭೆಯಲ್ಲಿ ಭಾಗವಹಿಸಿದ ದೇವೇಗೌಡರ ಆಸನದ ಹಿಂದೆಯೇ ಆಸೀನನಾಗುವ ಸುಯೋಗ ನನಗೆ ಒದಗಿ ಬಂತಲ್ಲಾ, ಕಣ್ಮುಚ್ಚಿ ಕುಳಿತಿದ್ದ ಗೌಡರ ಹಿಂಬದಿಯಿಂದ,

"ನಮಸ್ಕಾರ ಸಾರ್, ನಾನು ಯಾಹೂ...."

"ಓಹ್ ಹೊ, ನೀವೂ ಬಂದಿದೀರಾ ಇಲ್ಲಿ?"

"ಬರಲೇಬೇಕಲ್ಲಾ ಸಾರ್. ನಾನು ಮೊದಲಿಂದ್ಲೂ ಜೆಡಿಎಸ್ ಅಭಿಮಾನಿ."

"ಒಳ್ಳೆಯದು. ಆ ಅಭಿಮಾನನ ಹಾಗೇ ಉಳಿಸಿಕೊಳ್ಳಿ. ನಮಗೆ ನಿಮ್ಮಂತವರು ಬೇಕೆ ಹೊರತು ಸ್ಥಾನಮಾನಾಕಾಂಕ್ಷಿಗಳಲ್ಲ."

"ಕಾಂಗ್ರೆಸ್ ಜೊತೆ ಸೇರಿ ಸರ್ಕಾರ ಮಾಡಿದ್ದಾಗ ನಮ್ಮ ಕಾರ್ಯಕರ್ತರ ಕಣ್ಣಲ್ಲಿ ನೀರು ಬರ್‍ತಾಯಿದೆ ಅಂದಿದ್ರಿ. ಈಗ ಪರವಾಗಿಲ್ಲವ ಸಾರ್?"

"ಹತ್ತೊಂಬತ್ತನೂರ ಅರವತ್ತೇಳನೆ ಇಸವಿಯಲ್ಲಿ ಯಾವ ಕಾಂಗ್ರೆಸ್ ಸರ್ಕಾರದ ವಿರುದ್ಧವಾಗಿ ನಾನು ಗೆದ್ದು ಬಂದನೊ, ಆಗ ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಂತಹ ಕಾಲ, ಆಗಲೂ ಕೂಡ ನಾನು ಭಿನ್ನ ರೀತಿಯಲ್ಲಿ ಹೋರಾಟ ಮಾಡಿಕೊಂಡು ಬಂದಂತವನು, ಈಗಲೂ ನನ್ನ ರಾಜಕಾರಣ ಹೋರಾಟಕ್ಕೇ ಮೀಸಲಾಗಿರುವಂತದ್ದು."

"ಅಲ್ಲ ಸಾರ್, ಕಾಂಗ್ರೆಸ್ಸಿನಿಂದ ಹೊರಬರುವಾಗ ಕುಮಾರಸ್ವಾಮಿ ಮತ್ತು ನೀವು, ನಿಗಮ ಮಂಡಳಿಗೆ ಕಾರ್ಯಕರ್ತರ ನೇಮಕ ಆಗ್ತಾಯಿಲ್ಲ ಅನ್ನೋ ಕಾರಣನೆ ಮುಂದಿಟ್ಟಿದ್ರಿ ಅಲ್ವಾ?"

"ನೋಡಿ ನನಗೆ ನೋವಾಗ್ತಯಿದೆ. ನಮ್ಮ ಮುಖ್ಯಮಂತ್ರಿಗಳು ಸುಮಾರು ಎಂಟು ಗಂಟೆಗಳ ಕಾಲ ಸತತವಾಗಿ ಸಾರ್ವಜನಿಕರಿಂದ ಅರ್ಜಿ ತಗೊಳ್ತರೆ. ಅವಕ್ಕೆಲ್ಲಾ ಟಿಪ್ಪಣಿ ಬರಿಬೇಕು, ಸಂಬಂಧಪಟ್ಟ ಇಲಾಖೆಗೆ ನಿರ್ದೇಶನ ಕೊಡಬೇಕು, ಆ ರೀತಿ ಶ್ರಮ ವಹಿಸಿ ಕೆಲಸ ಮಾಡೋ ಮುಖ್ಯಮಂತ್ರಿಗಳ ಮೇಲೆ ಆಪಾದನೆ ಮಾಡ್ತರಲ್ಲ, ಇದು ನೋವಿನ ಸಂಗತಿ...."

"ಜನಾರ್ಧನ ಪೂಜಾರಿಯವರು ನಿಮ್ಮ ಭೂಮಿ ಹಗರಣದ ವಿಷಯದಲ್ಲಿ ಮಾತಾಡಿದಾರಲ್ಲ ಸಾರ್?"


"ನೋಡಿ ಆ ಮಹಾತ್ಮರ ಹೆಸರೇಳಲ್ಲ ನಾನು. ಬಹಳ ದೊಡ್ಡವರು ಅವರು, ದೇವರು ಅವರಿಗೆ ಒಳ್ಳೆಯದನ್ನು ಮಾಡಲಿ. ಆ ಮಹಾನುಭಾವರು ಕೇಂದ್ರದ ಹಣಕಾಸಿನ ಸಚಿವರಾಗಿದ್ದಂತಹ ಕಾಲದಲ್ಲಿ ಏನು ಮಾಡಿದ್ರು ಎಂಬತಕ್ಕಂತಹ ವಿಷಯವನ್ನು ನಾನು ಒಬ್ಬ ಮಾಜಿ ಪ್ರಧಾನಿಯಾಗಿ ಮಾತನಾಡಕ್ಕೆ ಹೋಗೋದಿಲ್ಲ, ದೇವರು ಅವರಿಗೆ ಒಳ್ಳೇದು ಮಾಡ್ಲಿ...."

"ನೀವು ಯಾರ ವಿರುದ್ಧಾನೂ ಭ್ರಷ್ಟಾಚಾರದ ಆಪಾದನೆ ಮಾಡಲ್ಲ, ಯಾಕೆ ಸಾರ್?"

"ನೋಡಿ ಗುರುಗಳೇ, ಹತ್ತೊಂಬತ್ತನೂರ ಎಪ್ಪತ್ತೆಂಟನೇ ಇಸವಿ ಸೆಪ್ಟೆಂಬರ್‌ನಲ್ಲಿ ಯಾವ ಜನತಾ ಸರ್ಕಾರ ಕೇಂದ್ರದಲ್ಲಿ ಅಧಿಕಾರ ಗ್ರಹಣ ಮಾಡಿದ್ದಂತಹ ಸಂದರ್ಭದಲ್ಲಿ ಶ್ರೀಮಾನ್ ಮುರಾರ್ಜಿ ದೇಸಾಯಿಯವರು ಪ್ರಧಾನಮಂತ್ರಿಗಳಾಗಿದ್ರು, ಇಲ್ಲಿ ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ರು, ಶ್ರೀಮಾನ್ ಅರಸುರವರನ್ನು ನಾನು ಭ್ರಷ್ಟಾಚಾರದ ಉದ್ಘಾಟಕ ಅಂತ ಹೇಳಿ ಸಾರ್ವಜನಿಕವಾಗಿ ಭಾಷಣ ಮಾಡಿದ್ದೆ. ಆದ್ರೆ ಏನಾಯ್ತು? ಮುರಾರ್ಜಿ ದೇಸಾಯಿ ಅಧಿಕಾರ ಕಳಕೊಳ್ಳೊ ಸಮಯ ಬಂದಾಗ ಕರ್ನಾಟಕ ಎಂ.ಪಿ.ಗಳನ್ನು ಮನವೊಲಿಸಿ ಮುರಾರ್ಜಿಗೆ ಬೆಂಬಲ ಕೇಳತಕ್ಕಂತ ಪರಿಸ್ಥಿತಿ ನಿರ್ಮಾಣ ಆಯ್ತು, ಆಗ ನಾನು ಬೆಳಗ್ಗೆ ಹೋಗಿ ಶ್ರೀಮಾನ್ ಅರಸುರವರ ಮನೆ ಮುಂದೆ ನಿಲ್ಬೇಕಾಯ್ತು, ಅಂದಿನಿಂದ ನಾನು ಯಾವುದೇ ವ್ಯಕ್ತಿ ಮೇಲೆ ಭ್ರಷ್ಟಾಚಾರದ ಆರೋಪ ಮಾಡೋದನ್ನ ಬಿಟ್ಟುಬಿಟ್ಟೆ!"

"ಇದು ಮೆಚ್ಚಿಕೊಳ್ಳೋ ಗುಣವ ಸಾರ್?"

"ಹಾಗಲ್ಲಾ, 'ನಮ್ಮ ಬಹಿರಂಗ ಆಪಾದನೆಗಳು ಸಾಬೀತಾಗೋತರ ಇರಬೇಕು, ಮಾಡಬೇಕು. ಸುಮ್ಮಸುಮ್ಮನೆ...."



"ಅಂದ್ರೆ ನಿಮ್ಮ ಮೇಲೆ ಯಾರೂ ಆಪಾದನೆ ಮಾಡಬಾರದು ಅಂತ ನೀವೂ ಮಾಡಲ್ಲವಾ?"

"ಕೇಳು ಗುರೂ, ನಾನೂ ಕೇಂದ್ರದಲ್ಲಿ ಅಧಿಕಾರ ನಡೆಸಿದಂತವನು. ಹನ್ನೊಂದು ತಿಂಗಳು ದೇಶವನ್ನು ಹೇಗೆ ನಡೆಸಿದೆ ಎಂಬತಕ್ಕಂತದಕ್ಕೆ ಸಾಕ್ಷಿ ಪುರಾವೆಗಳಿವೆ. ಕೇವಲ ಒಂದು ಮೂಗರ್ಜಿಗೆ ಒಬ್ಬ ಅಧಿಕಾರಿಯನ್ನು ಡಿಸ್‌ಮಿಸ್ ಮಾಡಿಸಿದೆ. ನೋಡಿ ಅಲ್ಲಿ ಕುಳಿತಿದಾಳಲ್ಲ ಹೆಣ್ಣುಮಗಳು, ಆಕೆ ಯಾರು ಗೊತ್ತೊ?"

"ಅದೇ ಲಲಿತಾನಾಯಕ ಅಲ್ಲವಾ ಸಾರ್?"

"ಆಕೆ ನಿರಪರಾಧಿಯಾಗಿದ್ರೂ ಕೂಡ ಸಂಪುಟದಿಂದ ಕೈಬಿಟ್ಟೆ, ಯಾಕೆ ಗೊತ್ತ?"

"ಅವುರೇಳೊ ಪ್ರಕಾರ, ಮಂತ್ರಿಗಳು ತಮ್ಮ ಇಲಾಖೆಯಿಂದ ವಸೂಲು ಮಾಡೋ ಹಣನ ಮುಖ್ಯಮಂತ್ರಿಗೆ ತಲುಪಿಸಬೇಕಾಗಿತ್ತು, ಅವರಿಗದು ಗೊತ್ತಿರಲಿಲ್ಲ, ಅಂಗಾಗಿ ದೇವೇಗೌಡ್ರು ಕೈಬಿಟ್ರು ಅಂದರಂತಲ್ಲಾ ಸಾರ್, ಅದೂ ಟಿ.ವಿ. ಸಂದರ್ಶನದಲ್ಲಿ."

"ನೋಡಿ ಯಾರ ಆಪಾದನೆಗಳಿಗೂ ನಾನು ಉತ್ತರ ಕೊಡಕ್ಹೋಗಲ್ಲ."

"ಸಮಯ ಬಂದಾಗ ಬುದ್ಧಿ ಕಲುಸ್ತಿರಲವೆ?"

"ಏನೇಳ್ತಾಯಿದ್ದಿರಿ ನೀವು?"

"ನೋಡಿ ಸಾರ್, ಲಲಿತಾನಾಯಕಿ ಮೇಲೆ ನಿಮ್ಮ ದೃಷ್ಟಿ ಬಿತ್ತು, ದೇವದುರ್ಗದಲ್ಲಿ ಟಿಕೆಟ್ ತಪ್ಪಿಸಿದ್ರಿ, ಕೈಗೆ ನಾಲ್ಕು ಲಕ್ಷ ಕೊಟ್ಟು ಹೊಳೆಹೊನ್ನೂರಿಗೆ ಹೋಗಿ ನಿಲ್ಲು ಅಂದ್ರಿ. ಅವರು ಹೊಳೆಹೊನ್ನೂರ ಅಡ್ರೆಸ್ ಕೇಳಿಕೊಂಡು ಹೋಗಿ ನಾಕು ಲಕ್ಷದ ಜೊತೆಗೆ ಇನ್ನು ಎರಡು ಲಕ್ಷ ಸೇರಿಸಿ ಚುನಾವಣೆ ಮಾಡಿ ಮೂರುವರೆ ಸಾವಿರ ಓಟು ತಗಂಡು ಮನಿಗೋದ್ರು. ಪಾಪ ಇವತ್ತು ಅವರಿಗೆ ಯಾವ ನೆಲೆನೂ ಇಲ್ಲದಂಗೆ ಮಾಡಿದ್ರಿ. ಅವರೂ ನಿಮ್ಮ ಹೆಣ್ಣುಮಕ್ಕಳ ತರ ಅಲ್ಲವ ಸಾರ್? ನಿಮ್ಮ ಪಾರ್ಟಿಲಿ ನಿಮ್ಮ ಮನೆ ಹೆಣ್ಣುಮಕ್ಕಳ ಬಿಟ್ರೆ ಇನ್ಯಾರಿಗೂ ಬೆಲೆ ಇಲ್ಲ ಅನ್ನಂಗಾಗಿದೆಯಲ್ಲಾ ಸಾರ್."

"ನೋಡಿ ನನ್ನ ಮುಂದಿನ ಸಾಲಿನಲ್ಲಿ ಎಷ್ಟು ಹೆಣ್ಣುಮಕ್ಕಳು ಆಸೀನರಾಗಿದ್ದಾರೆ. ಅವುರೆಲ್ಲಾ ಯಾಕ್ ಬಂದಿದಾರೆ? ಯಾವುದೇ ಸ್ಥಾನಮಾನದ ಆಕಾಂಕ್ಷೆಯಿಲ್ಲದೆ ಕೇವಲ ನಿಸ್ವಾರ್ಥತೆಯಿಂದ ಬಂದು ಕುಳಿತಿದ್ದಾರೆ. ಅಂತ ಜನಗಳಿಗಾಗಿ ನಾನು ಪಾರ್ಟಿ ಕಟ್ಟತಿನಿ. ಇಡೀ ಕರ್ನಾಟಕವನ್ನು ಸುತ್ತಿಬರ್ತಿನಿ. ಈ ದೇವೇಗೌಡ ಎಂದೂ ಯಾರಿಗೂ ಹೆದರೋನಲ್ಲ."

"ಹೆದರೋದಿಲ್ಲ ಅಂದ ಕ್ಷಣಕ್ಕೆ ಹೆದರಿಕೆ ನಿಮ್ಮತ್ರ ಸುಳಿದಿತ್ತು ಅಂತ ಅಲ್ಲವ ಸಾರ್?"

"ನೋ, ನೋ. ನಾನು ನಿಮ್ಮ ಅಭಿಪ್ರಾಯವನ್ನು ಒಪ್ಪಲ್ಲ, ಈ ಸರ್ಕಾರ ಬೀಳಬಹುದು ಅನ್ನೋ ಅಭಿಪ್ರಾಯ ನಮ್ಮ ಕಾರ್ಯಕರ್ತರಲ್ಲಿದೆ. ಅದಕ್ಕೇ ಈ ಸಭೆ."

"ಇದು ನಿಮ್ಮ ಒಪ್ಪಿಗೆಯಿಲ್ಲದ ಸರ್ಕಾರ ಅಲ್ಲವ ಸಾರ್?"

"ಹೌದು. ಆ ಪಾರ್ಟಿಯ ಮುಖಂಡರೇ ಹೇಳಿದಾರಲ್ಲ, ನಮ್ಮ ಸಂಬಂಧ ಏನಿದ್ರು ಕುಮಾರಸ್ವಾಮಿ ಜೊತೆನೆ ಹೊರತು ದೇವೇಗೌಡರೊಟ್ಟಿಗೆ ಅಲ್ಲ ಅಂತ."

"ಅಂದ ಮೇಲೆ ಹೋಗ್ಲಿ ಬಿಡಿ ಈ ಸರ್ಕಾರ."

"ಹೋಗ್ಲಿ ಬಿಡಿ ಅಂತ ಅಷ್ಟು ಸುಲಭವಾಗಿ ನೀವು ಹೇಳಿದ್ರೆ ನಾನು ಬಿಡ್ತಿನಾ? ಸರ್ಕಾರ ಕೆಡವ್ಹೋದು ಅಷ್ಟು ಸುಲಭವಲ್ಲಾ."

"ಅಲ್ಲಿಗೆ ನಿಮ್ಮ ಒಪ್ಪಿಗೆ ಪಡೆದ ಸರ್ಕಾರ ಅಂದಂಗಾಯ್ತಲ್ಲ ಸಾರ್?"

"ಎಪ್ಪತ್ತು ದಿನ ನಾನು ಅನುಭವಿಸಿದ ಮಾನಸಿಕ ಹಿಂಸೆ ಯಾರಿಗೂ ಗೊತ್ತಿಲ್ಲ."

"ಬಿಜೆಪಿ ಜೊತೆ ಸಂಬಂಧ ಬೆಳೆಸಿದ್ದಕ್ಕಾ?"

"ಸ್ವಾಮಿ, ಏನು ಬೇಕಾದ್ರು ಈ ದೇವೇಗೌಡನತ್ರ ಮಾತನಾಡಬವುದು ಅಂತ ತಿಳಕೊಂಡಿರಬೌದು. ಸ್ವಲ್ಪ ಎಚ್ಚರ ಇರಲಿ ನಿಮ್ಮ ಮಾತಿನಲ್ಲಿ."

"ಎಚ್ಚರಿಕೆಯಿಂದ ಮಾತನಾಡಬೇಕಾದೋರು ನೀವು ಸಾರ್."

"ನಾನು ಎಚ್ಚರಿಕೆಯಿಂದ್ಲೆ ಮಾತನಾಡ್ತಿನಿ."

"ಎಲ್ಲಿ ಮಾತಾಡ್ತಿರಿ? ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರ ಕೊಡಲ್ಲ, ನಿಮ್ಮ ಮಾತನ್ನು ನೀವೇ ಅಲ್ಲಗಳಿತಿರಿ. ಸರ್ಕಾರ ನನ್ನ ಒಪ್ಪಿಗೆಯಿಲ್ಲದೆ ರಚನೆ ಆಗಿದೆ ಅಂತಿರಿ. ಅದನ್ನ ಬೀಳಿಸೋಕೆ ಬಿಡಲ್ಲ ಅಂತಿರಿ. ಕುಮಾರಣ್ಣನ ಶ್ರಮ ನೋಡಿದ್ರೆ ನೋವಾಗುತ್ತೆ ಅಂತಿರಿ. ಈ ಸರ್ಕಾರದ ಕೆಲಸವೂ ನನಗೆ ತೃಪ್ತಿ ಕೊಟ್ಟಿಲ್ಲ ಅಂತಿರಿ, ನಾಲ್ಕು ತಿಂಗಳ ಒಳ್ಳೆ ಆಡಳಿತ ನೋಡಿ ಸಹಿಸಕ್ಕಾಗದ ಕಾಂಗ್ರೆಸ್ಸಿಗರು ಸರ್ಕಾರ ಬೀಳಸಕ್ಕೆ ಸಂಚು ಮಾಡಿದ್ರು ಅಂತಿರಿ. ಇಷ್ಟಲ್ಲದೆ ಜನಾರ್ಧನ ರೆಡ್ಡಿಗೆ ಸರಿಯಾಗಿ ಬುದ್ಧಿ ಕಲುಸಬೇಕಾದ್ರೆ ಹೋಗಿ ವಾಜಪೇಯಿ ಕಾಲಿಡಿ ಅಂತ ಕುಮಾರಣ್ಣ ನಿಗೇಳಿದರಂತೆ...."

"ಸುಳ್ಳು, ಸುಳ್ಳು. ನಿಮ್ಮ ಆಪಾದನೆಗಳು ಆ ಚಾಮುಂಡೇಶ್ವರಿ ಕ್ಷೇತ್ರದ ವ್ಯಕ್ತಿ ಮಾಡ್ತರಲ್ಲ ಅಂತ ಆಪಾದನೆ ತರ ಇವೆ. ಆದ್ದರಿಂದ ತಮ್ಮ ಇಂತಹ ಕುತ್ಸಿತ ಮನಸ್ಸಿನ ಸಂದರ್ಶನ ಸಾಕು. ತಾವಿನ್ನ ದಯಮಾಡಿಸಬಹುದು."

"ನಾನು ಜೆಡಿಎಸ್ ಅಭಿಮಾನಿ ಸಾರ್, ಒಂಥರಾ ಕಾರ್ಯಕರ್ತ."

"ತಮ್ಮಂತ ಕಾರ್ಯಕರ್ತರ ಅಗತ್ಯವಿಲ್ಲ."

"ಥೂತ್ತೇರಿ!!!"

-ಯಾಹೂ

ವಿಶಾಲವಾದ ಭೂಮಿಯು ಹುಲ್ಲುಗರಿಕೆಯ ಸಹಾಯದಿಂದ ಅತಿಥಿ ಸತ್ಕಾರ ನಡೆಸುತ್ತದೆ

ಬೆಂಗಳೂರು ಸುತ್ತ-ಮುತ್ತ ಕವಿತಾ 'ಸಂಕ್ರಮಣ'

ಅತ್ಯಂತ ಪ್ರತಿಷ್ಠಿತ ಬೆಂಗಳೂರು ಐಟಿ ಪಾರ್ಕ್ ಪ್ರದೇಶದ ಸುತ್ತಮುತ್ತಲಿನ ಗ್ರಾಮಗಳಲ್ಲಿ ಈ ಕವಿತಾ ಎಚ್. ಬಿನ್ ಕೆ.ಎಂ. ಹೊನ್ನಪ್ಪ ಅಲಿಯಾಸ್ ಕವಿತಾ ಎಚ್. ಕೋಂ. ಎಚ್.ಡಿ. ಬಾಲಕೃಷ್ಣೇಗೌಡರ ಆಗಮನವಾಗಿದೆ, ಹುಷಾರ್!!

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದ ನಿವಾಸಿ ಕೆ.ಎಂ. ಹೊನ್ನಪ್ಪನವರ ಮಗಳೆಂದೇ ಕಂದಾಯ ಇಲಾಖೆಯ ಪಹಣಿ, ಮ್ಯೂಟೇಶನ್ ರಿಜಿಸ್ಟರು, ಸೇಲ್-ಡೀಡ್‌ಗಳಲ್ಲಿ ಗುರುತಿಸಿಕೊಂಡಿರುವ ಸದರಿ ಶ್ರೀಮತಿ ಎಚ್. ಕವಿತಾ ಎಂಬ ರೈತ-ಮಹಿಳೆ(!) ಅಸಲಿಗೆ ಬೆಂಗಳೂರಿನ ಪದ್ಮನಾಭನಗರದ ನಿವಾಸಿ ಹಾಗು ರಿಟೈರ್ಡ್ ಸ್ಪೆಷಲ್ ಡೆಪ್ಯೂಟಿ ಕಮಿಷನರ್ ಸನ್ಮಾನ್ಯ ಶ್ರೀ ಎಚ್.ಡಿ. ಬಾಲಕೃಷ್ಣೇಗೌಡರ ಧರ್ಮಪತ್ನಿ....

ಸನ್ 2005 ನೇ ವರ್ಷದ ಜುಲೈ ತಿಂಗಳ ನಾಲ್ಕನೇ ವಾರದಲ್ಲಿ ದಿನಂಪ್ರತಿ ಒಂದು-ಎರಡರಂತೆ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ-2 ಹೋಬಳಿ, ಚಿಕ್ಕಗುಬ್ಬಿ ಗ್ರಾಮದ ವ್ಯಾಪ್ತಿಯ ವಿವಿಧ ಸರ್ವೇ ನಂಬರುಗಳಲ್ಲಿನ ಕೃಷಿ ಜಮೀನನ್ನು ಹಲವು ಹತ್ತು ತುಂಡುಗಳಲ್ಲಿ ಖರೀದಿಸುತ್ತ



ಕವಿತಾ ಬಾಲಕೃಷ್ಣೇಗೌಡ

ಸಾಗಿದ ಶ್ರೀಮತಿ ಕವಿತಾ ಎಚ್. ಬಿನ್ ಹೊನ್ನಪ್ಪ ಇಂದು ಸುಮಾರು 235 ಎಕರೆ ಬೆಂಗಳೂರು ಮಹಾನಗರ ವ್ಯಾಪ್ತಿಗೆ ಸೇರಲಿರುವ ಅಮೂಲ್ಯ ಆಸ್ತಿಯ ಒಡತಿ.



ಬಾಲಕೃಷ್ಣೇಗೌಡ

"ಹೊರೆ ಹೊತ್ತ ಮಹಿಳೆ"!! (ಜೆಡಿ-ಎಸ್ ಸಿಂಬಲ್ ಎಂಬುದು ಆಕಸ್ಮಿಕ!)

ಕೃಷಿ ಜಮೀನು ಖರೀದಿ ವಹಿವಾಟುಗಳುದ್ದಕ್ಕೂ ತಮ್ಮ ವಿವಾಹಪೂರ್ವ ಹೆಸರಲ್ಲಿಯೇ ವ್ಯವಹರಿಸುತ್ತ ಬಂದಿರುವ ಕವಿತಾರವರು ತಮ್ಮ ವೈವಾಹಿಕ ಸ್ಥಾನಮಾನವನ್ನು ನಿರಂತರವಾಗಿ ಬಚ್ಚಿಡುತ್ತಲೇ ನಡೆದು ತಾವು ಮಾಜಿ ಪ್ರಧಾನಿ ಪ್ರಧಾನಿ ಎಚ್.ಡಿ. ದೇವೇಗೌಡರ ಹೆಸರು, ಕೀರ್ತಿ, ಪ್ರತಿಷ್ಠೆಗಳನ್ನು ಗೋಪ್ಯವಾಗಿ ರಕ್ಷಿಸುತ್ತಿರುವ ಆದರ್ಶ ಸೊಸೆಯಾಗಿ ಮೆರೆದಿದ್ದಾರೆ....

ಕೇವಲ ಒಂದೇ ಒಂದು ಸಾರಿ ಅಂದರೆ 2004 ರ ಆಗಸ್ಟ್ 31 ರಂದು ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ-3 ಹೋಬಳಿಯ ದೇವಗೆರೆ ಗ್ರಾಮದ 5 ಎಕರೆ 37 ಗುಂಟೆ ಫಲವತ್ತಾದ ತೆಂಗು-ಬಾಳೆ ತೋಟ ಖರೀದಿಸುವಾಗ ಮಾತ್ರ ಶ್ರೀಮತಿ ಕವಿತಾ ತಮ್ಮನ್ನು ವೈಫ್ ಆಫ್ ಎಚ್.ಡಿ. ಬಾಲಕೃಷ್ಣೇಗೌಡ ಎಂದು ತಮ್ಮ ಯಜಮಾನ- ಬಿಎಸ್‌ಕೆ ಮೈನಿಂಗ್ ಕಂಪನಿಯ ಬಾಸ್- ಬಾಲಣ್ಣನವರ ಹೆಸರಲ್ಲಿಯೇ ಅಧಿಕೃತವಾಗಿ ದಾಖಲಿಸಿಕೊಂಡಿದ್ದಾರೆ...

ಕವಿತಾ ಎಚ್.ಬಿನ್ ಹೊನ್ನಪ್ಪ ಎಂಬ ಈ ಅತಿಗಣ್ಯ ಪರಿವಾರದ ಸೊಸೆಯೆ ಇತ್ತೀಚೆಗೆ ತಮ್ಮ ಸಮಸ್ತ ನಾದಿನಿ-ಓರಗಿತ್ತಿ ಹಾಗು ಮೈದುನರ ಸಮೇತ ಬ್ಯಾಂಕಿನಿಂದ "36 ಕೋಟಿ ರೂ. ಸಾಲ ಮಾಡಿ ಪಾಲುದಾರಿಕೆಯಲ್ಲಿ ಖರೀದಿಸಲಾದ" RMZ ಕಾಂಪ್ಲೆಕ್ಸ್ ವಹಿವಾಟನಲ್ಲೂ ಕಾಣಿಸಿಕೊಂಡಿದ್ದರಲ್ಲವೇ?

ಕವಿತಾರ ಪತಿ ಬಾಲಕೃಷ್ಣ ತಮ್ಮ ಸರ್ವಿಸ್ಸಿನಲ್ಲಿ ಸುಮಾರು 6-7 ವರ್ಷಗಳ ಕಾಲ ಭೂ ಸ್ವಾಧೀನ ಇಲಾಖೆಯ ಸ್ಪೆಷಲ್ ಡಿ.ಸಿ.ಯಾಗಿ ಗಳಿಸಿದ್ದ ಸಮಗ್ರ ಅನುಭವವನ್ನೇ ಕೃಷಿಕರಲ್ಲದ ತಮ್ಮ ಪತ್ನಿಯ ಹೆಸರಲ್ಲಿ ರಾಜಧಾನಿಯ ಸರಹದ್ದಿನಲ್ಲಿಯೇ ಹೀಗೆ ಹತ್ತಾರು ಎಕರೆ ಕೃಷಿ ಜಮೀನು ಖರೀದಿಯಲ್ಲಿ ಧಾರೆಯೆರೆದಿರುವಂತಿದೆ....

ತತ್ಪರಿಣಾಮವಾಗಿಯೇ ಕರ್ನಾಟಕ ಭೂ ಸ್ವಾಧೀನ ಕಾಯ್ದೆ, ಕರ್ನಾಟಕ ಭೂಸುಧಾರಣಾ ಕಾಯ್ದೆಯ ಸಮಸ್ತ ಕಟ್ಟುಪಾಡುಗಳನ್ನು ಅತ್ಯಂತ ವ್ಯವಸ್ಥಿತವಾಗಿ 'ಮ್ಯಾನೇಜು' ಮಾಡುವಲ್ಲಿ ಯಶಸ್ವಿಯಾಗಿದ್ದಾರೆ....

ಸಾರ್ವಜನಿಕ ಹುದ್ದೆ ಅಥವಾ ಸರ್ಕಾರಿ ಅಧಿಕಾರಿ

ರವೀಂದ್ರ ರೇಶ್ಮೆ

ಪದವಿಯಲ್ಲಿದ್ದು ಸಧ್ಯರ್ಹಿಣಿಯರಾದ ತಮ್ಮ ಪತ್ನಿಯರ ಹೆಸರಲ್ಲಿ ಆಸ್ತಿ-ಖರೀದಿ, ರಿಯಲ್-ಎಸ್ಟೇಟ್ ಅಥವಾ ಮೈನಿಂಗ್ ವ್ಯಾಪಾರ ಮುಂತಾದ ಚಟುವಟಿಕೆಗಳನ್ನು ನಿರ್ವಹಿಸುವಲ್ಲಿ ದೇವೇಗೌಡರ ಪುತ್ರರು, ಅಳಿಯಂದಿರೆಲ್ಲ 'ಬೇನಾಮಿ' ಎಂಬ ವಹಿವಾಟನ್ನು ಅತ್ಯಂತ ಗಣ್ಯಸ್ಥಾನಮಾನಕ್ಕೇರಿಸಿಬಿಟ್ಟಿರುವಂತಿದೆ...

ಅಂದಹಾಗೆ ಬೆಂಗಳೂರು ಪೂರ್ವ ತಾಲ್ಲೂಕಿನ ಭೂ ಒಡೆಯರಿಂದ ಈ ಕವಿತಾ-ಬಾಲಕೃಷ್ಣ ದಂಪತಿಗಳು ಖರೀದಿಸಿರುವ ಜಮೀನಿನ ಹಾಲಿ ಮಾರುಕಟ್ಟೆ ಬೆಲೆ ಏನಿಲ್ಲವೆಂದರೂ ಎಕರೆಗೆ ಕನಿಷ್ಠ 3 ರಿಂದ 4 ಕೋಟಿ ರೂಪಾಯಿಗಳು!! ಯಾಕೆಂದರೆ ಈ ಕೃಷಿ ಜಮೀನುಗಳೆಲ್ಲವೂ ಅತಿ ಶೀಘ್ರದಲ್ಲಿಯೇ 'ಕೃಷಿಯೇತರ' ಎಂದು ಪರಿವರ್ತನೆಗೊಂಡು ಹೈಟೆಕ್-ಬೆಂಗಳೂರಿನ ಅತ್ಯಂತ ತೀವ್ರಗಾಮಿ ಅಭಿವೃದ್ಧಿಶೀಲ ಪ್ರದೇಶದಲ್ಲಿ ಬಿಕರಿಯಾಗುವಂತಹವು.....

ಇದೇ ಮಾರುಕಟ್ಟೆ ದರದಲ್ಲಿ ಕವಿತಾರ ಹೆಸರಿಗೆ ಬಂದಿರುವ ಸುಮಾರು 235 ಎಕರೆಯ ಸಮಗ್ರ ಮಾರುಕಟ್ಟೆ ಮೌಲ್ಯ ಕನಿಷ್ಠ 700 ಕೋಟಿಗಳಷ್ಟಾದೀತಲ್ಲವೆ.... ಹಾಗಾದರೆ ಕರ್ನಾಟಕದ ಹಾಲಿ ರಾಜಪರಿವಾರದ ಎರಡನೆಯ ಸೊಸೆ ಸದರಿ ಸ್ಥಿರಾಸ್ತಿಗಳ ಮೂಲ ಒಡೆಯರಾದ ರೈತರ ಮಕ್ಕಳಿಗೆ ನೀಡಿರಬಹುದಾದ ಅಸಲಿ ಖರೀದಿ ದರವಾದರೂ ಎಷ್ಟು?

ಸೇಲ್ ಡೀಡುಗಳಲ್ಲಿ ನಮೂದಿಸಲಾದ ಕ್ರಯದ ಬೆಲೆಯನ್ನೇ ನಿಜವೋ-ಸುಳ್ಳು ಎಂದು ಚರ್ಚಿಸಲು ಹೋಗುವುದೇ ಇಂದಿನ ಮುಕ್ತಮಾರುಕಟ್ಟೆ ಪರಿಸರದಲ್ಲಿ ನಿರರ್ಥಕ ಕಸರತ್ತಾದೀತಷ್ಟೇ....

ಜಾತಿಬಲ, ಧನಬಲ, ಅಧಿಕಾರಬಲ ಹಾಗು ಹಾಲಿ ಮುಖ್ಯಮಂತ್ರಿಯ ಅತ್ತಿಗೆಯೆಂಬ ಸ್ಥಾನಬಲವನ್ನು ಪಡೆದ ಅದೃಷ್ಟದಂತೆ ಕವಿತಾ ಬಾಲಕೃಷ್ಣೇಗೌಡರು ಕಳೆದ ಒಂದು ವರ್ಷದಲ್ಲಿ ಬೆಂಗಳೂರು ಮಹಾನಗರದ ಸುತ್ತಮುತ್ತಲಿನ ಪ್ರದೇಶದಲ್ಲಿಯೇ ನಡೆಸಿದ ಖರೀದಿ ವಹಿವಾಟಿನ ಪಟ್ಟಿಯನ್ನೇ ಇಲ್ಲಿ ಸಾದರಪಡಿಸಲಾಗಿದೆ... ಈ ಪಟ್ಟಿಯ ವಿವರಗಳೇ ಕರ್ನಾಟಕದ ಜನಸಾಮಾನ್ಯರಿಗೆ ತಮ್ಮನ್ನಾಳುವ ರಾಜವಂಶದ ವೈಭವದ ಸ್ವರೂಪವನ್ನು ತೀರ್ಮಾನಿಸಲು ಸಹಕಾರಿಯಾದೀತು.

ಕವಿತಾರ ಆಸ್ತಿ ಖರೀದಿಪಟ್ಟಿ

ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ-2 ಹೋಬಳಿ, ಚಿಕ್ಕಗುಬ್ಬಿ ಗ್ರಾಮ

ಸರ್ವೆ ನಂಬರ್ 43

ಖಾತಾ ನಂ	ವಿಸ್ತೀರ್ಣ ಎಕರೆ-ಗುಂಟೆ	ಕ್ರಯ ದಿನಾಂಕ
MR 51/2004-05	21-14	25.7.2005
MR 47/2004-05	21-14	25.7.2005
MR 48/2004-	21-14	20.7.2005
MR 49/2004-05	21-14	21.7.2005
MR 50/2004-05	21-14	25.7.2005
ಸರ್ವೆ ನಂಬರ್ 45		
MR 47/2004-05	22-11	25.7.2005
MR 48/2004-05	22-1	20.7.2005
MR 49/2004-05	22-11	21.7.2005
MR 50/2004-05	22-11	25.7.2005

ಮಾರಾಟದಾರರು: ಕೆ.ಟಿ. ನಾರಾಯಣಸ್ವಾಮಿ, ಚೌಡಪ್ಪ ಬಿನ್ ಲೇ ಮೋಟಪ್ಪ, ಶಾಂತಮ್ಮ, ಮಂಜುನಾಥ್, ವೆಂಕಟೇಶಮೂರ್ತಿ, ಎಚ್.ಎಸ್. ವೆಂಕಟಮ್ಮ, ಇತ್ಯಾದಿ.

ಬಿದರಹಳ್ಳಿ-2 ಹೋಬಳಿ, ಕಣ್ಣೂರು ಗ್ರಾಮ

ಸರ್ವೆ ನಂಬರ್ 16

MR 86/2004-05	3-10	2.7.2005
MR 39/2005-06	1-30	9.12.2005
ಸರ್ವೆ ನಂಬರ್ 157		
MR 13/93-94	4-36	2.7.2005
MR 5/93-94	0-32	2.7.2005
MR 91/2004-05	0-33	2.7.2005
MR 100/2004-	1-26	2.7.2005

ಮಾರಾಟದಾರರು: ಕೆ.ಟಿ. ನಾರಾಯಣರಾವ್ ಬಿನ್ ವೆಂಕಟಸ್ವಾಮಿ, ಚಿಕ್ಕಪ್ಪಯ್ಯ, ಹನುಮಂತಪ್ಪ, ಪೂರ್ಣಿಮಾ ಎಸ್. ಸ್ವಾಮಿ, ಇತ್ಯಾದಿ...

ಭೂದಾನ!!

MR 78/2005-06	1.23.08	10.4.2006

ದಾನಿಗಳು: ಜಾಕೋಬ್ ವರ್ಗೀಸ್

ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ-3 ಹೋಬಳಿ, ದೇವಗೆರೆ ಗ್ರಾಮ, ಸರ್ವೆ ನಂಬರ್ 15

* MR1/2004-05	5-37	31.8.2004

* ಬೋರ್‌ವೆಲ್ ಇರುವ ತೆಂಗು-ಬಾಳೆ ತೋಟ!

ಕೇಂದ್ರೀಯ ಕಾನೂನು ಮಂಡಲಿ (Central Law Board) ಚೆನ್ನೈ, ಇದು ಕಂಪನಿ ವ್ಯಾಜ್ಯಗಳನ್ನು ಇತ್ಯರ್ಥಗೊಳಿಸಲೆಂದೇ ಸ್ಥಾಪಿಸಲಾದ ಶಾಸನಬದ್ಧ ನ್ಯಾಯಾಧಿಕರಣ....

ಕಳೆದ ವಾರ ನಾವು ಪುರಾವೆ ಸಮೇತವಾಗಿ ವಿವರಿಸಿದ್ದ 'ಅರಿಶಿಣ-ಕುಂಕುಮಕ್ಕೆ 36 ಕೋಟಿ ಆಸ್ತಿ" ವಹಿವಾಟಿನ ಬ್ರೋಕರುಗಳೆಲ್ಲರೂ ಖರೀದಿದಾರರಾದ ಕರ್ನಾಟಕದ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿಯವರ ಸಮಸ್ತ ಪರಿವಾರದ ಹಿತಾಸಕ್ತಿ ಕಾಪಾಡಲೆಂದು ಸದರಿ ನ್ಯಾಯಪೀಠದೆದುರು, ದಿನಾಂಕ 7.8.06 ರಂದು ತಮ್ಮ ಎಂದಿನ ಮುಖವಾಡ ಧರಿಸಿ ಹಾಜರಾಗಿದ್ದರು.

ಕಾನೂನು ಮಂಡಲಿಯ ಉಪಾಧ್ಯಕ್ಷರಾದ ಕೆ.ಕೆ. ಬಾಲುರವರ ಏಕಸದಸ್ಯ ಪೀಠದೆದುರು ಪ್ರತ್ಯಕ್ಷರಾದ ಈ ವೈಟ್‌ಫೀಲ್ಡ್ ಆಸ್ತಿ ವಿಕ್ರಯದ ಮಧ್ಯವರ್ತಿಗಳು ಇದೇ ಮೊದಲ ಬಾರಿಗೆ ರಾಷ್ಟ್ರದ ಸುಪ್ರಸಿದ್ಧ ನ್ಯಾಯವಾದಿಗಳ ಮರಿ ಸೈನ್ಯವನ್ನೇ ಮುಂದಿಟ್ಟುಕೊಂಡು ತಾವು ಕರ್ನಾಟಕದ ಹಾಲಿ ರಾಜವಂಶದ 'ಸ್ತ್ರೀ ಶಕ್ತಿ ಗುಂಪಿಗೆ' ಪ್ರಶ್ನಿತ ಆಸ್ತಿಯನ್ನು ಮಾರಾಟ ಮಾಡಿದ ಕಾರುಬಾರನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದರು...

ಅಂದಹಾಗೆ ಈ ಆಸ್ತಿ ಹಗರಣದ ಸಮಗ್ರ ಮಾಹಿತಿಯನ್ನೊಳಗೊಂಡ 'ಲಂಕೇಶ್' ಸಂಚಿಕೆ ಹೊರಬಂದ ಸೋಮವಾರದ (ಆ.8) ದಿನವೇ ಚೆನ್ನೈನಲ್ಲಿ ಈ ವಿವಾದಗ್ರಸ್ತ ವಹಿವಾಟಿನ ನ್ಯಾಯಾಂಗೀಯ ವಿಚಾರಣೆಯೂ ನಡೆಯಿತು.

ಕಳೆದ ಆಕ್ಟೋಬರ್ 2005 ರಲ್ಲಿಯೇ ಕಾನೂನು ಮಂಡಲಿಯೆದುರು ಪ್ರಶ್ನಿತ ಆಸ್ತಿಯ ಅಸಲಿ ಮಾಲೀಕರಾದ ಪೆರಿವಾಲ್ ಕುಟುಂಬದ ಪರವಾಗಿ ಪಿಯೂಷ್

300 ಎಕರೆ

ಕಳೆದ ಫೆಬ್ರವರಿ ತಿಂಗಳಿನಲ್ಲಿ ಕುಮಾರಸ್ವಾಮಿಯ ರಾಜಕೀಯ ದೊಂಬರಾಟ ನಡೆದಾಗ ಮಣ್ಣಿನ ಮಗ ದೇವೇಗೌಡರು ಪದ್ಮನಾಭನಗರದ ತಮ್ಮ ನಿವಾಸದಲ್ಲಿ ಕುಳಿತು, "ಅಯ್ಯೋ ಕುಮಾರ" ಎಂದು ರೋಧಿಸುತ್ತಿದ್ದರಲ್ಲಾ... ಆಗ ತಂದೆಯ ಪಕ್ಕದಲ್ಲಿ ನಿಂತು ಸಾಂತ್ವನ ಹೇಳುತ್ತಿದ್ದ ದೇವೇಗೌಡರ ಹಿರಿಯಪುತ್ರ ಮಾಜಿ ಕೆಎಎಸ್ ಅಧಿಕಾರಿ ಎಚ್.ಡಿ. ಬಾಲಕೃಷ್ಣೇಗೌಡರ ನಿಜವಾದ ಬಣ್ಣ ಈಗ ಮತ್ತೊಮ್ಮೆ ಬಯಲಾಗುತ್ತಿದೆ.

ಅಂದು ಧರ್ಮಸಿಂಗ್ ನೇತೃತ್ವದ ಸಮ್ಮಿಶ್ರ ಸರ್ಕಾರಕ್ಕೆ ಕುಮಾರಸ್ವಾಮಿ ಕೊಕ್ ಕೊಟ್ಟಾಗ ಅವರ ಬೆನ್ನಿಗೆ ನಿಂತಿದ್ದವರು ಇದೇ ಬಾಲಕೃಷ್ಣೇಗೌಡ ಮತ್ತು ತಂಗಿ ಡಾ. ಅನುಸೂಯ. ಆಗ ಮೊಸಳೆ ಕಣ್ಣೀರಿಡುತ್ತಿದ್ದ ದೇವೇಗೌಡರನ್ನೇ ಗದರಿಸಿ, "ಅವಕಾಶ ಸಿಕ್ಕಿದೆ, ಆಗಲಿ ಬಿಡಿ" ಎಂದು ತಂದೆಯ ಮುಂದೆ ಬಾಲಕೃಷ್ಣೇಗೌಡ ಶಂಖ ಊದಿದ್ದರು. ಅದು ಮುಂದೆ ತಾವು ಬೆಂಗಳೂರು-ಮೈಸೂರು ಚತುಷ್ಪಥ ಹೆದ್ದಾರಿ ಮತ್ತು ಬೇಣಿಯ ಬಿಎಂಐಸಿ ಕಾರಿಡಾರ್ ಸುತ್ತಮುತ್ತ ಹೊಂದಿರುವ ಬೇನಾಮಿ ಹೆಸರಿನ ನೂರಾರು ಎಕರೆ ಜಮೀನಿನ ಸಕ್ರಮಕ್ಕಾಗಿ ಎಂಬುದು ಈಗ ಬಹಿರಂಗವಾಗಿದೆ.

ವಿ.ಆರ್.ಎಸ್. ಪಡೆದದ್ದೇ ಲ್ಯಾಂಡ್ ಡೀಲಿಗೆ.....

ರಾಜ್ಯ ಸರ್ಕಾರದಲ್ಲಿ ಹಿರಿಯ ಶ್ರೇಣಿಯ ಕೆಎಎಸ್ ಅಧಿಕಾರಿಯಾಗಿದ್ದ ಬಾಲಕೃಷ್ಣೇಗೌಡ, ಅಲ್ಲೇನು ಜನಪರ ಆಡಳಿತ ನೀಡಿದ ಕೀರ್ತಿ ಪಡೆದು ವಿ.ಆರ್.ಎಸ್. ಪಡೆಯಲಿಲ್ಲ, ನೌಕರಿಯಲ್ಲಿದ್ದಷ್ಟು ದಿನ ಪತ್ನಿ ಎಚ್. ಕವಿತಾಳ ಹೆಸರಿನಲ್ಲಿ ಲ್ಯಾಂಡ್ ಡೀಲಿಂಗ್ ನಡೆಸುತ್ತಿದ್ದ. ನಂತರ ಕೃಷ್ಣರ ಕಾಂಗ್ರೆಸ್ ಸರ್ಕಾರದ ಅಂತಿಮ ದಿನಗಳಲ್ಲಿ ಈತ ಸರ್ಕಾರಿ ಸೇವೆಯಿಂದ ವಾಲೆಂಟರಿ ನಿವೃತ್ತಿ ಪಡೆದಾಗ, ಗೌಡರು ಬಾಲಕೃಷ್ಣೇಗೌಡರನ್ನು ಮಂಡ್ಯದಿಂದ ಲೋಕಸಭೆಗೆ ಅಭ್ಯರ್ಥಿ ಮಾಡುತ್ತಾರೆಂದೇ ಜನ ಮಾತಾಡಿಕೊಂಡಿದ್ದರು.

ಬಾಲಕೃಷ್ಣೇಗೌಡರು ವಿ.ಆರ್.ಎಸ್. ಪಡೆಯುವ ವೇಳೆಗಾಗಲೇ ಬೆಂಗಳೂರು-ಮೈಸೂರು ನಡುವಿನ ಚತುಷ್ಪಥ ಹೆದ್ದಾರಿಯ ಕಾಮಗಾರಿ ಆರಂಭಗೊಂಡಿತ್ತು, ಇದೇ ವೇಳೆಗೆ ಬಿ.ಎಂ.ಐ.ಸಿ. ಯೋಜನೆಗೂ ನ್ಯಾಯಾಲಯದ ಆದೇಶ ಹೊರಬೀಳುವುದು ಖಾತರಿಯಾಗಿತ್ತು.

ಆಸ್ತಿ-ಖರೀದಿ: ಚೆನ್ನೈ ನ್ಯಾಯಾಲಯದಿಂದ ಛೀಮಾರಿ


...ರಿವಾಲ್ ಮತ್ತು ಇತರ 9 ಮಂದಿ ಸದಸ್ಯರು ಅರ್ಜಿ ...ಸಿದ್ದು ತಮ್ಮದೇ ಹೆಸರಿನ 'ಮೆ. ಪೆರಿವಾಲ್ ಗ್ರೂಪ್ ...ಫ್ ಕಂಪನೀಸ್' ಸಂಸ್ಥೆಗಳನ್ನು ಮೋಸದಿಂದ ...ಪಟಾಯಿಸಿದ್ದ ಪ್ರೀತಮ್ ಸೇನ್ ಎಂಬ ವಂಚಕನ ...ರುದ್ಧ....

ಅರ್ಜಿ ಸಲ್ಲಿಸಿ 10 ತಿಂಗಳಾಗುತ್ತಾ ಬಂದರೂ ...ಮ್ಮೆಯೂ ತನ್ನ ಮಾಲೀಕತ್ವವನ್ನು ಸಾಬೀತುಗೊಳಿಸ ...ಲ್ಲಿ ಪುರಾವೆ ಮಂಡಿಸುವಲ್ಲಿ ವಿಫಲವಾಗಿದ್ದ ಈ ...ತಮ್ ಸೇನ್ ಅಕ್ರಮ ಕಾನೂನುಬಾಹಿರವಾಗಿ ಪ್ರಶ್ನಿತ ...ಸ್ತಿಯನ್ನು ಮಾಜಿ ಪ್ರಧಾನಿ ದೇವೇಗೌಡರ ಕುಟುಂಬಕ್ಕೆ ...ರಭಾರೆ ಮಾಡಿದ ವಿಚಾರ ಮಾಧ್ಯಮಗಳಲ್ಲಿ ...ಹೀರುಗೊಂಡಾದ ಮೇಲಷ್ಟೇ ಎಚ್ಚೆತ್ತುಗೊಂಡಿದ್ದ!

ಕರ್ನಾಟಕದ ಅತಿಗಣ್ಯ ಕುಟುಂಬದ ಮಾನ-...ರ್ಯಾದೆಯು ಪ್ರಶ್ನೆಯಾಗಿಬಿಟ್ಟದ್ದರಿಂದ ಇದೇ ...ೊದಲ ಬಾರಿ ಕೊಂಚ ಹೆಸರುವಾಸಿ ಲಾಯರುಗಳು ...ತಿವಾದಿ ಪ್ರೀತಮ್ ಪರವಾಗಿ ಕಾಣಿಸಿಕೊಂಡಿದ್ದರು.

ಪಶ್ಚಿಮ ಬಂಗಾಲದ ಅಡ್ವೋಕೇಟ್ ಜನರಲ್ ...ಲನ್ ಬ್ಯಾನರ್ಜಿರವರ ಪುತ್ರ ಮಿ. ರಾಯ್, ದಿಲ್ಲಿಯ ...ಪ್ರೀಂಕೋರ್ಟಿನ ನ್ಯಾಯವಾದಿ ದಿವಾನ್ ಹಾಗು ...ದ್ರಾಸ್ ಹೈಕೋರ್ಟಿನ ವಕೀಲ ರಾಜಗೋಪಾಲರ ...ದಯೇ ಕರಿಕೋಟು ಕಳಚಿಟ್ಟು ಬರೀ 'ಮಫ್ತಿ'ಯಲ್ಲಿದ್ದ ...ಂಗಳೂರಿನ ಮರಿ ವಕೀಲರುಗಳೂ ನ್ಯಾಯಾಲಯದಲ್ಲಿ ...ಾಜರಾಗಿದ್ದರು.

ಪ್ರಶ್ನಿತ ಆಸ್ತಿ ಈಗಾಗಲೇ ಕರ್ನಾಟಕದ ಮುಖ್ಯ ...ಂತ್ರಿಯವರ ಕುಟುಂಬಕ್ಕೆ ಮಾರಾಟವಾಗಿಬಿಟ್ಟಿರುವುದರಿಂದ ಹಾಗು ಸದರಿ ಮಾರಾಟದ ವ್ಯವಹಾರವೆಲ್ಲವೂ ನಿಯಮಾನುಸಾರವೇ ಜರುಗಿರುವುದರಿಂದ ಪೆರಿವಾಲ್ ಕುಟುಂಬದ ಅರ್ಜಿಗಳಲ್ಲಿ ಯಾವುದೇ ಹುರುಳಿಲ್ಲವೆಂದು ಈ ಅತಿರಥ ಮಹಾರಥರೆಲ್ಲ ವಾದಿಸಿದರು...



ಪಿಟಿಶನ್ ನಂ. 5,6,7 ಮತ್ತು 8/2006 ಕ್ರಮಸಂಖ್ಯೆ ಅರ್ಜಿಗಳಿಗೆ ಸಂಬಂಧಿಸಿದಂತೆ ಈ ವಾದವನ್ನಾಲಿಸಿದ ನ್ಯಾಯಪೀಠದ ಅಧ್ಯಕ್ಷತೆಯಲ್ಲಿದ್ದ ಕೆ.ಕೆ. ಬಾಲುರವರು ಈ ಹಿಂದೆ ತಾವೇ 24.2.2006 ರಂದು ವಿಧಿಸಿದ್ದ ತಡೆಯಾಜ್ಞೆಯ ಸ್ಪಷ್ಟ ಉಲ್ಲಂಘನೆಯಾಗಿದ್ದ ಈ ವಹಿವಾಟನ್ನು ಮನ್ನಿಸುವುದು ಸಾಧ್ಯವೇ ಇಲ್ಲವೆಂದು ಸಾರಿ ಈ ಕಾನೂನು ಪಂಡಿತರುಗಳ ಮುಖದ ನೀರಿಳಿಸಿಬಿಟ್ಟರು.....

"ನೀವುಗಳು ಮಾಡಿರೋದು ಕಾನೂನುಬಾಹಿರ ವ್ಯವಹಾರ... ಇದು ಅಕ್ಷಮ್ಯ" ಎಂದು ಪ್ರತಿಕ್ರಿಯಿಸಿದ ಬಾಲುರವರೇ "10 ತಿಂಗಳಾದರೂ ತನ್ನ ಮಾಲೀಕತ್ವವನ್ನು ಸಾಬೀತುಪಡಿಸುವ ಒಂದೇ ಒಂದು ಹಾಳೆಯನ್ನೂ ಮಂಡಿಸಲಾಗದ ಪ್ರತಿವಾದಿ ಪ್ರೀತಮ್ ಸೇನ್‌ಗೆ ಇನ್ನು ಒಂದೇ ಒಂದು ತಿಂಗಳು ವಾಯ್ದೆ ನೀಡ್ತೇವೆ... ಇದೇ ಕಡೇ ಛಾನ್ಸು" ಎಂದುಬಿಟ್ಟರು....

"CM ಕುಟುಂಬವನ್ನು implead ಮಾಡಲಿ...."

ಕಾನೂನು ಮಂಡಲಿಯ ನ್ಯಾಯಪೀಠ ಈ ವಿವಾದಗ್ರಸ್ತ ಆಸ್ತಿಯನ್ನು ಆತುರಾತುರವಾಗಿ ಖರೀದಿಸಿದ ಕರ್ನಾಟಕದ ಮುಖ್ಯಮಂತ್ರಿ ಕುಮಾರಸ್ವಾಮಿಯವರ ಪರಿವಾರದ ವರ್ತನೆಯನ್ನು ಗಂಭೀರವಾಗಿ ಪರಿಗಣಿಸಿತು.

ಆಸ್ತಿಯ ಮಾಲೀಕತ್ವ ಪ್ರಶ್ನಾರ್ಹ ಎಂದು ತಿಳಿದಿದ್ದೂ ಅದರ ಪರಭಾರೆಗೆ ನ್ಯಾಯ ಮಂಡಲಿಯ ತಡೆಯಾಜ್ಞೆಯಿದೆ ಎಂಬ ಮಾಹಿತಿಯಿದ್ದೂ, ಯಾವುದೇ ಎಗ್ಗಿಲ್ಲದೇ 36 ಕೋಟಿ ಚೆಲ್ಲಿ ಈ ಆಸ್ತಿ ಖರೀದಿಸಿದ ಗೌಡರ ಕುಟುಂಬಕ್ಕೆ ಮೊಟ್ಟಮೊದಲ ಬಾರಿಗೆ ಕಾನೂನಿನ ಚುರುಕನ್ನೂ ಮುಟ್ಟಿಸಿಬಿಟ್ಟಿತು...

"ಬರುವ ಸೆಪ್ಟೆಂಬರ್ ಎರಡನೇ ವಾರದಲ್ಲಿ ನಿಗದಿಗೊಳಿಸಲಾದ ನ್ಯಾಯ ಮಂಡಲಿಯ ಮುಂದಿನ ಹಿಯರಿಂಗ್ ಒಳಗಾಗಿ ಕರ್ನಾಟಕದ ಸಿ.ಎಂ. ಕುಟುಂಬ ವನ್ನು Implead ಮಾಡಲು (ಕೇಸಿನೊಳಗೆ ಸೇರಿಸಲು) ಅರ್ಜಿದಾರರಿಗೆ ಪರವಾನಗಿ ನೀಡಿದ್ದೇವೆ" ಎಂದು ಶ್ರೀ ಬಾಲುರವರು ಆದೇಶಿಸುತ್ತಿದ್ದಂತೆಯೇ ಕುಮಾರಣ್ಣನವರ ಪರಿವಾರದ ಆಸ್ತಿ- ಖರೀದಿದಾರ ತಂಡದ ಹೆಣ್ಣುಮಕ್ಕಳೆಲ್ಲರೂ ಚೆನ್ನೈ ನ್ಯಾಯ ಮಂಡಲಿಯೆದುರು ಆರೋಪಿ ಸ್ಥಾನದಲ್ಲಿ ನಿಲ್ಲುವಂತಾಗಿ ಬಿಟ್ಟಿದೆ....

ಬಹುಶಃ ನಾಳೆಯೆ, ಅಂದರೆ ಸೋಮವಾರ ಆ.14 ರಂದೇ ಅರ್ಜಿದಾರರಾದ ಪಿಯೂಶ್ ಪೆರಿವಾಲ್ ಮತ್ತಿತರರು ಮಂಡಲಿಯೆದುರು ಪ್ರತ್ಯೇಕ ಕೋರಿಕೆ ಸಲ್ಲಿಸಿ ಶ್ರೀಮತಿ ಕವಿತಾ ಬಾಲಕೃಷ್ಣ, ಶ್ರೀಮತಿ ಅನುಸೂಯಾ ಮಂಜುನಾಥ್ ಮತ್ತಿತರ 6 ಸದಸ್ಯರನ್ನು implead ಮಾಡುವಂತೆ ಪ್ರಾರ್ಥಿಸಲಿದ್ದಾರೆ!

ರೈತರನ್ನು ಬೀದಿಗೆ ತಳ್ಳಿದ ಗೌಡರ 'ಸ್ತ್ರೀಶಕ್ತಿ'!




ಬೆಂಗಳೂರು-ಮೈಸೂರಿನ ನಡುವೆ ಚತುಷ್ಪಥ ...ದ್ದಾರಿ ಜೊತೆಗೆ ಬಿಎಂಐಸಿ ರಸ್ತೆ ನಿರ್ಮಾಣವಾಗುವುದು ...ಚಿತವಾಗುತ್ತಿದ್ದಂತೆಯೇ ಈ ಎರಡು ರಸ್ತೆಗಳ ...ಕ್ಕ-ಪಕ್ಕದ ಜಮೀನಿಗೆ ಚಿನ್ನದ ಬೆಲೆ ...ಂದುಬಿಟ್ಟಿತು. ಚತುಷ್ಪಥ ಹೆದ್ದಾರಿ ಪಕ್ಕದ ಅಷ್ಟು ...ಮೀನು ಕೆಆರ್‌ಎಸ್ ನೀರಾವರಿ ಸೌಲಭ್ಯಕ್ಕೊಳಪಟ್ಟದ್ದು ...ಲ್ಲಿನ ಭೂಮಿಯ ಬೆಲೆ ಎಕರೆ ಒಂದಕ್ಕೆ ಮೂರರಿಂದ ...ಲ್ಕು ಲಕ್ಷದಷ್ಟಿದ್ದರೆ; ಬಿಎಂಐಸಿ ಕಾರಿಡಾರ್ ಸುತ್ತಲಿನ ...ೂಮಿಯ ಬೆಲೆ 50 ಸಾವಿರದ ಆಜು-ಬಾಜಿನಲ್ಲಿದ್ದುದು ...ಳ್ಳಲ್ಲ.

ಇಂತಹ ಸಂದರ್ಭದಲ್ಲಿಯೇ ಶ್ರೀರಂಗಪಟ್ಟಣಕ್ಕೆ ...ಗಮಿಸಿದ ಬಾಲಕೃಷ್ಣೇಗೌಡ ಕಾಣಿಸಿಕೊಂಡಿದ್ದು ಲ್ಯಾಂಡ್ ...ಲಿಂಗ್‌ನಲ್ಲಿಯೇ. ಕೇವಲ ಬಾಲಕೃಷ್ಣೇಗೌಡರು ಮಾತ್ರ ...ಂಡ್ ಡೀಲಿಂಗಿಗಿಳಿದಿದ್ದರೆ, ಅದು ಅವರ ವೈಯಕ್ತಿಕ ...ಷಯವೆನ್ನಬಹುದಿತ್ತು, ಆದರೆ ಇವರ ಜೊತೆ ...ೋದರಿ ಅನುಸೂಯ, ಇವರ ಪತ್ನಿಯ ತಂದೆ ...ೃಷ್ಣ (?) ಹಾಗೂ ಇವರ ಸಂಬಂಧಿಗಳು ನಡೆಸಿದ ...ಮೀನು ವ್ಯವಹಾರಗಳು, ಮಂಡ್ಯದ ರೈತರನ್ನೇ ...ಬ್ಬಿಸಿ ಬೀದಿಗೆ ತಳ್ಳುತ್ತಿವೆ.

ಇವತ್ತು ಬಾಲಕೃಷ್ಣೇಗೌಡ ಮತ್ತವರ ಕುಟುಂಬ ...ರಂಗಪಟ್ಟಣದ ಹಳ್ಳಿಗಳಲ್ಲಿ ನಡೆಸಿರುವ ಅಷ್ಟೂ ...-ವ್ಯವಹಾರಗಳು ಪಾರದರ್ಶಕವಾಗಿಲ್ಲ, ಬಹುತೇಕ ...ರಣಗಳಲ್ಲಿ ಸರ್ಕಾರಕ್ಕೆ ಸೇರಬೇಕಾದ ಸ್ಟಾಂಪ್ ಡ್ಯೂಟಿ ...ಚಿಸಲಾಗಿದೆ. ಹಿಂದಿನ ಧರ್ಮಸಿಂಗ್ ಸರ್ಕಾರದ ...ವಧಿಯಲ್ಲಿ ರೈತರಿಂದ ಪವರ್ ಆಫ್ ಅಟಾರ್ನಿ ಪಡೆದು [illegible] ಹೆಸರಿನಲ್ಲಿ [illegible] ಎಕರೆ ಭೂಮಿ ...ರೀದಿಸಿದ್ದ ಗೌಡರ ಕುಟುಂಬ, ಕುಮಾರಸ್ವಾಮಿ ...-ಜಾ ಸರ್ಕಾರದ ಮುಖ್ಯಮಂತ್ರಿಯಾಗುತ್ತಿದ್ದಂತೆ [illegible] ...ರಿಗಳಿಗೆ ಬೆದರಿಸಿ ತಮ್ಮ ಹೆಸರಿಗೆ ನೋಂದಣಿ [illegible]

ಎಲ್ಲೆಲ್ಲಿದೆ ಜಮೀನು!

ಕುಮಾರಸ್ವಾಮಿ ಅಧಿಕಾರಕ್ಕೆ ಬಂದ ನಂತರ ನೆಲ ನುಂಗುವುದನ್ನೇ ಧಂದೆ ಮಾಡಿಕೊಂಡಿರುವ ಬಾಲಕೃಷ್ಣೇಗೌಡ, ಅಷ್ಟೂ ಭೂ-ವ್ಯವಹಾರ ನಡೆಸಿರುವುದು ಪತ್ನಿ ಎಚ್. ಕವಿತಾಳ ಹೆಸರಿನಲ್ಲಿ 2006 ನೇ ಜೂನ್


ನರೋನಾ

8 ರಂದು ಗಣಂಗೂರು ಗ್ರಾಮದ ಬಳಿ 14 ಎಕರೆ 22 ಗುಂಟೆ ಜಮೀನು ಖರೀದಿಸಿದ್ದಾರೆ.

[illegible] ಈ ಜಮೀನನ್ನು ಮಾರಿದ [illegible] ಮತೊಬ್ಬ ನೆಲಗಳ್ಳ ಫಾದರ್ ಡಿ. ನರೋನಾ [illegible] ಈತ ಮಂಡ್ಯಕ್ಕೆ ವರ್ಗವಾಗಿ ಬರುವ ಮುನ್ನ ಮೈಸೂರಿನ ಕೆಸರೆಯ ಚರ್ಚಿನಲ್ಲಿ ಕ್ರಿಸ್ತನ ಸಂದೇಶ ಬೋಧಿಸುತ್ತಿದ್ದ. ಅಲ್ಲಿಯೂ ಭೂವ್ಯವಹಾರಕ್ಕೆ ಕೈಹಾಕಿ ಕೆಸರು ಮೆತ್ತಿಸಿಕೊಂಡಿದ್ದ.

ಕೆಸರೆ ಮತ್ತು ಮೈಸೂರು-ರಸ್ತೆಯ ಮಧ್ಯದಲ್ಲಿರುವ ನೂರಾರು ಎಕರೆ ತೆಂಗಿನ ತೋಟವನ್ನು ಮೈಸೂರು ಅರಸು ಮನೆತನದವರು ಅಲ್ಲಿನ ನಿವಾಸಿಗಳಿಗೆ ಇನಾಮಾಗಿ ನೀಡಿದ್ದರು. ಮೈಸೂರು ಬೆಳೆದಂತೆಲ್ಲಾ ಇಲ್ಲಿನ ಭೂಮಿಯ ಬೆಲೆ ಹೆಚ್ಚಾಯಿತು ನೋಡಿ, ಆಗಲೇ ಈ ಬಂಗಾರದ ಬೆಲೆಯ ಭೂಮಿಯ ಮೇಲೆ ಫಾದರ್ ನರೋನಾನ ಕಣ್ಣು ಬಿತ್ತು.

ಕೆಸರೆಯ ಬಡ ರೈತರ ಜಮೀನಿನ ಮೇಲೆ ಕಣ್ಣು ಹಾಕಿದ ನರೋನಾ, ಅದೇನು ಮಂಕುಬೂದಿ ಎಸೆದನೋ ಗೊತ್ತಿಲ್ಲ, ಅಷ್ಟೂ ಜಮೀನಿನ ಪವರ್ ಆಫ್ ಅಟಾರ್ನಿ ಪಡೆದು, ರೈತರಿಗೆ ಕಾಸು ಕೊಡದೆ ಕೈ ಎತ್ತಿ ಮಂಡ್ಯ ಸೇರಿಕೊಂಡ.

ಈಗ ಬಾಲಕೃಷ್ಣೇಗೌಡರ ಪತ್ನಿ ಕವಿತಾ ಜಮೀನು ಖರೀದಿಸಿರುವುದು ಈ ನೆಲಗಳ್ಳನಿಂದಲೇ.

ಫಾದರ್ ನರೋನಾನಿಂದ ಪಡೆದಿರುವ 14 ಎಕರೆ 22 ಗುಂಟೆ ಜಮೀನನ್ನು 23 ಲಕ್ಷ ರೂಪಾಯಿಗೆ ಕ್ರಯಕ್ಕೆ ನೋಂದಣಿ ಮಾಡಿಸಿರುವ ಕವಿತಾ ಮೇಡಮ್ಮು ಖರೀದಿಯಲ್ಲಿ ಪೂರ್ಣವಾಗಿ ಸರ್ಕಾರಕ್ಕೆ ಟೋಪಿ ಹಾಕಿದ್ದಾರೆ.

ಬಿಎಂಐಸಿ ಯೋಜನೆಯ ಕಾಮಗಾರಿ ಆರಂಭವಾಗುತ್ತಿದ್ದಂತೆ ಗಣಂಗೂರು, ಭದ್ರಾಪುರ [illegible] ಜಮೀನಿನ ಬೆಲೆಯೂ ಗಗನಕ್ಕೇರಿದೆ. ಈ ಹಿಂದೆ 1 ಲಕ್ಷದಿಂದ 1.50 ಲಕ್ಷ [illegible] 1 ಎಕರೆ ಜಮೀನಿನ ಬೆಲೆ ಈಗ [illegible] 20 ಲಕ್ಷ. [illegible] 14.22 ಎಕರೆ [illegible] 2 ಕೋಟಿ 80 ಲಕ್ಷ [illegible] ಮತ್ತೆ 12 ಎಕರೆ ಜಮೀನನ್ನು ತನ್ನ ತಂದೆ ಹೊನ್ನಪ್ಪನ ಹೆಸರಿನಲ್ಲಿ ಜೂನ್ ತಿಂಗಳಿನಲ್ಲಿಯೇ ಸಬ್ ರಿಜಿಸ್ಟಾರ್ ಕಚೇರಿಯಲ್ಲಿ 18 ಲಕ್ಷ ರೂಪಾಯಿ ಕ್ರಯಕ್ಕೆ ಖರೀದಿಸಿದ್ದೇವೆಂದು ನೋಂದಣಿಯಾಗಿದೆ. ಈ ಜಮೀನಿನ ಮಾರುಕಟ್ಟೆ ಬೆಲೆಯೇ 2 ಕೋಟಿ 40 ಲಕ್ಷ....

ಇದಲ್ಲದೆ ಶ್ರೀರಂಗಪಟ್ಟಣ ತಾಲ್ಲೂಕು ಕಸಬಾ ಹೋಬಳಿಯ ಬೊಮ್ಮೂರು ಅಗ್ರಹಾರದಲ್ಲಿ 8 ಎಕರೆ ಜಮೀನು 2005 ರ ಡಿಸೆಂಬರ್ ತಿಂಗಳಿನಲ್ಲಿ ಕವಿತಾ ಎಚ್. ಬಿನ್ ಹೊನ್ನಪ್ಪ ಹೆಸರಿನಲ್ಲಿ ನೋಂದಣಿಯಾಗಿದೆ. ಈ ಜಮೀನಿನ ಮಾರುಕಟ್ಟೆ ಬೆಲೆ ಎಕರೆಗೆ 28 ಲಕ್ಷ. 8 ಎಕರೆಗೆ 2 ಕೋಟಿ 24 ಲಕ್ಷ. ಇಲ್ಲೂ ಸಹ ಎಕರೆಗೆ 5 ಲಕ್ಷದಂತೆ ಕ್ರಯ ತೋರಿಸಿ ಸ್ಟ್ಯಾಂಪ್ ಡ್ಯೂಟಿ ವಂಚಿಸಲಾಗಿದೆ.

ಬೊಮ್ಮೂರು ಅಗ್ರಹಾರದಿಂದ ಕೆಲವೇ ಮೀಟರ್‌ಗಳ ದೂರದಲ್ಲಿರುವ ಬ್ರಹ್ಮಪುರ ಸ.ನಂ. 224 ಮತ್ತು 226 ರಲ್ಲಿ 4 ಎಕರೆ ಜಮೀನನ್ನು ಬೆಂಗಳೂರಿನ ಬಿ. ನಾರಾಯಣ್ ಎನ್ನುವವರಿಂದ ಕವಿತಾರ ಹೆಸರಿನಲ್ಲಿ ಖರೀದಿಸಲಾಗಿದೆ.

ಇದಿಷ್ಟಲ್ಲದೇ ಬಿಎಂಐಸಿ ರಸ್ತೆ ಹಾದುಹೋಗುವ ಮಹದೇವಪುರ, ನಗುನವಹಳ್ಳಿ, ಚಿಕ್ಕ ಅಂಕನಹಳ್ಳಿ, ಕೊಕ್ಕರೆ ಹುಂಡಿ, ಬೊಂತುಗುಂಡಿ, ಮೆಳ್ಳಹಳ್ಳಿ, ವಾಜಮಂಗಲ, ಹೆಬ್ಬಾಡಿ, ಹೆಬ್ಬಾಡಿ ಹುಂಡಿ, ಹಂಪಾಪುರದ ಸುತ್ತಮುತ್ತ 147 ಎಕರೆ ಜಮೀನನ್ನು ಬೇನಾಮಿ ಹೆಸರಿನಲ್ಲಿ ರೈತರಿಂದ ಖರೀದಿಸಿರುವ ಗೌಡರ ಕುಟುಂಬದವರು ಮುಂದೆ ತಕರಾರು ಬರದಿರಲೆಂದು ಈ ಬೇನಾಮಿ ವ್ಯಕ್ತಿಗಳಿಂದ ಪವರ್ ಆಫ್ ಆಟಾರ್ನಿ ಪಡೆದು ಪದ್ಮನಾಭನಗರದ ಮನೆಯ ಬೀರುವಿನಲ್ಲಿ ಭದ್ರವಾಗಿಟ್ಟುಕೊಂಡಿದ್ದಾರೆ.

[illegible]

ಶ್ರೀರಂಗಪಟ್ಟಣದ ಸುತ್ತಮುತ್ತ ಗೌಡರ ಕುಟುಂಬ [illegible]

(13 ನೇ ಪುಟಕ್ಕೆ)

ಕಾಮ್ರೇಡ್ ಶ್ರೀರಾಮರೆಡ್ಡಿಯ ಖಯಾಲಿಗಳು....

"ಅಲ್ಲಾ! ಅಖಂಡ ಬ್ರಹ್ಮಚಾರಿಯಾದ ಕಾಮ್ರೇಡ್ ಶ್ರೀರಾಮರೆಡ್ಡಿಗೆ ಜೇಬಿನಿಂದ ಹಣ ಹಾಕಿ, ಆ ಹೆಂಗುಸನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗುವ ಹಕೀಕತ್ತಾದರೂ ಏನಿತ್ತು?!"

ಇಂತಹ ಕುಹಕದ ಮಾತನ್ನು ವಿಧಾನಸೌಧದ ಸಚಿವಾಲಯದ ಗೋಡೆಗಳು ಪಿಸುಗುಡುತ್ತಿವೆ. ಸಚಿವಾಲಯದ ನೌಕರರ ಬಾಯಿಗೆ ಎಲೆ ಅಡಿಕೆಯಂತೆ ಸಿಕ್ಕಿ ಜಗಿದಾಡುತ್ತಿರುವ ಹೆಸರೇ ಬಾಗೇಪಲ್ಲಿಯ ಶಾಸಕರೂ, ರಾಜ್ಯದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕರೂ ಆಗಿರುವ ಕಾಮ್ರೇಡ್ ಜಿ.ವಿ. ಶ್ರೀರಾಮ ರೆಡ್ಡಿಯವರದ್ದು.

ಗರಿ-ಗರಿ ಸೂಟು ತೊಟ್ಟು, ಸದನದಲ್ಲಿ ನಿಂತು, ನಾಡಿನ ಸಮಸ್ಯೆಗಳ ಬಗ್ಗೆ ಮುನ್ನಿಷ್ಠ ವಿಷಯ ಮಂಡಿಸುವ ಶ್ರೀರಾಮರೆಡ್ಡಿಯವರನ್ನು ಹತ್ತಿರದಿಂದ ನೋಡಿದವರಿಗೆ ಈ ಸುದ್ದಿ ಕೇಳಿ ಆಶ್ಚರ್ಯವಾದರೆ; ಬಾಗೇಪಲ್ಲಿಯ ಅವರ ಹಿಂಬಾಲಕರು "ಮಾ ಯಜಮಾನುಕಿ ಇದಂತಾ ಮಾಮೂಲು" ಎಂದು ನಕ್ಕು ಸುಮ್ಮನಾಗುತ್ತಿದ್ದಾರೆ.

ನಿಜ! ಶಾಸಕ ಶ್ರೀರಾಮರೆಡ್ಡಿಯವರ ನಾಚ್-ಗಾನಾ ಖಯಾಲಿಗಳನ್ನು ಹತ್ತಿರದಿಂದ ನೋಡಿರುವ ಬಾಗೇಪಲ್ಲಿಯ ಜನರಿಗೆ ಇದೇನು ದೊಡ್ಡ ವಿಷಯವಲ್ಲ; ಆದರೆ ಅವರ ಜನಪರ ಕಾಳಜಿ, ಅವರು ಸಾಗಿ ಬಂದಿರುವ ಹೋರಾಟದ ಹಾದಿ, ಕಮ್ಯುನಿಸ್ಟ್ ಸಿದ್ಧಾಂತಗಳಿಗೆ ಬದ್ಧತೆ, ವಾಕ್‌ಚಾತುರ್ಯಗಳನ್ನು ಬಲ್ಲವರಿಗೆ ಇದೊಂದು ಶಾಕಿಂಗ್ ಸುದ್ದಿ ಮಾತ್ರವಲ್ಲ, ವಿಷಾದದ ಸಂಗತಿಯೂ ಹೌದು.

ಆಗಿದ್ದಾದರೂ ಏನು?


ವಿಧಾನಮಂಡಲದಲ್ಲಿ 15 ಕ್ಕೂ ಹೆಚ್ಚು ಸದನ ಸಮಿತಿಗಳಿವೆ. ಈ ಸಮಿತಿಗಳಿಗೆ ವಿಧಾನಮಂಡಲದ ಉಭಯ ಸದನಗಳ ಶಾಸಕರನ್ನು ನೇಮಿಸಲಾಗುತ್ತದೆ. ಇಂತಹ ಸಮಿತಿಗಳಲ್ಲಿ ಆಡಳಿತ ಮತ್ತು ವಿರೋಧ ಪಕ್ಷದವರೆಲ್ಲರೂ ಸದಸ್ಯರಾಗಿರುತ್ತಾರೆ.

ಈ ಸಮಿತಿಯ ಸದಸ್ಯರು ಪ್ರತಿ ವರ್ಷ ಭಾರತದ ವಿವಿಧ ರಾಜ್ಯಗಳಿಗೆ ಅಧ್ಯಯನ ಪ್ರವಾಸಕ್ಕೆ ಹೋಗುತ್ತಾರೆ. ಹೀಗೆ ಅಧ್ಯಯನ ಪ್ರವಾಸಕ್ಕೆ ಹೋದ ಶಾಸಕರು ಅಲ್ಲಿ ಹೋಗಿ ಕಡಿದದ್ದಾದರು ಏನು ಎಂದು ಹುಡುಕಿದರೆ, ಅವರಲ್ಲಿ ಹೆಚ್ಚಿನವರು ಸರಕಾರದ ದುಡ್ಡಿನಲ್ಲಿ ಮೋಜು ಮಾಡಿ ಬಂದಿರುವುದು ವಿಧಾನಸಭೆಯ ದಾಖಲೆಗಳಿಂದಲೇ ಗೊತ್ತಾಗುತ್ತದೆ.

ವಿಧಾನಮಂಡಲದ ಈ ಸಾಲಿನ ಅಂದಾಜು ಸಮಿತಿಗೆ ಶಾಸಕ ಶ್ರೀರಾಮರೆಡ್ಡಿಯೂ ಓರ್ವ ಸದಸ್ಯ. ಈ ಸಮಿತಿ ಇದೇ ಆಗಸ್ಟ್ 7 ರಿಂದ ಉತ್ತರ ಭಾರತದ ದೆಹಲಿ, ಉತ್ತರ ಪ್ರದೇಶ, ಪಂಜಾಬ್ ಮುಂತಾದ ರಾಜ್ಯಗಳಲ್ಲಿ ಪ್ರವಾಸ ಕೈಗೊಂಡಿದೆ. (ಅವರೆಲ್ಲ ಇನ್ನೂ ಹಿಂದಿರುಗಬೇಕಿದೆ) ಹೀಗೆ ಅಧ್ಯಯನ ಪ್ರವಾಸ ಹೊರಟ ಅಂದಾಜು ಸಮಿತಿಯ ತಂಡದಲ್ಲಿ, ಸಮಿತಿಯ ಮೀಟಿಂಗ್‌ಗಳಲ್ಲಿ ಸ್ಟೆನೋ ಆಗಿ ಕೆಲಸ ಮಾಡುತ್ತಿದ್ದ ನಸರೀನ್ ಎಂಬ ಚಾಲಾಕಿ ಹೆಣ್ಣು ಪ್ರವಾಸ ಕೈಗೊಂಡಿರುವುದು ಶಾಸಕ ಶ್ರೀರಾಮರೆಡ್ಡಿಯ ಕೃಪೆಯಿಂದಲೇ ಎಂಬುದು ಈಗ ಬಹಿರಂಗಗೊಂಡಿದೆ.

ನಾನೇ ಹಣ ಕೊಡುತ್ತೇನೆಂದ ರೆಡ್ಡಿ...

ಅಂದಾಜು ಸಮಿತಿಯಲ್ಲಿ ಸ್ಟೆನೋ ಆಗಿರುವ ನಸರೀನ್ (ಹೆಸರು ಬದಲಿಸಲಾಗಿದೆ) ಸಾಮಾನ್ಯ ಹೆಣ್ಣಲ್ಲ. ಮೂರು ವರ್ಷಗಳ ಹಿಂದೆ ಆಗಿನ ವಿಧಾನಮಂಡಲದ ಕಾರ್ಯದರ್ಶಿ ರಾಜಣ್ಣನಿಗೆ ಅದ್ಯಾವ ಹಲ್ವ ತಿನ್ನಿಸಿದಳೋ ಗೊತ್ತಿಲ್ಲ; ಆದರೆ ಆತನ ಮರ್ಜಿಯಿಂದಲೇ ಸಚಿವಾಲಯದಲ್ಲಿ ಸ್ಟೆನೋ ಆಗಿ ನೇಮಕವಾಗಿಬಿಟ್ಟಳು. ನೌಕರಿ ಸಿಕ್ಕ ನಂತರ ರಾಜಣ್ಣನಿಗೆ ಗುಡ್‌ಬೈ ಹೇಳಿದ ನಸರೀನ್, ನಂತರದ ದಿನಗಳಲ್ಲಿ ಶ್ರೀರಾಮರೆಡ್ಡಿಯ ಪಕ್ಕ ಕಾಣಿಸಿಕೊಂಡರೂ, ಅದೇನೂ ಅಂತಹ ಸುದ್ದಿಯಾಗಲಿಲ್ಲ. ಆದರೆ, ಅಂದಾಜು ಸಮಿತಿಯ ಅಧ್ಯಯನ ಪ್ರವಾಸದ ತಂಡದಲ್ಲಿ ಈಕೆ ಇರಲೇಬೇಕೆಂದು ರೆಡ್ಡಿ ರಚ್ಚೆ ಹಿಡಿದರಲ್ಲಾ..... ಆಗಲೇ ರೆಡ್ಡಿ-ನಸರೀನ್ ಜೋಡಿ ಸಚಿವಾಲಯದ ಸಿಬ್ಬಂದಿಯ ನಾಲಿಗೆಗೆ ಎಲೆ-ಅಡಿಕೆಯಾಗಿದ್ದು.



ರೆಡ್ಡಿ ನಸರೀನಳನ್ನು ಪ್ರವಾಸಕ್ಕೆ ಕರೆದುಕೊಂಡು ಹೋಗಲೇಬೇಕೆಂದು ಪದ್ಮಾಸನ ಹಾಕಿ ಕುಳಿತಾಗ, ವಿಧಾನಮಂಡಲದ ವಿಶೇಷ ಕಾರ್ಯದರ್ಶಿ ಎಸ್.ಬಿ. ಪಾಟೀಲರ ಮಂಡೆ ಬಿಸಿ ಆಗಿದೆ. ಕಾರಣ, ಸದನ ಸಮಿತಿಯ ಅಧ್ಯಯನ ಪ್ರವಾಸದಲ್ಲಿ ಯಾವ್ಯಾವ ಅಧಿಕಾರಿಗಳಿರ ಬೇಕೆಂದು ಸ್ಪಷ್ಟವಾಗಿ ಸಭಾಧ್ಯಕ್ಷ ಸುತ್ತೋಲೆ ಹೊರಡಿಸಿ ಬಿಟ್ಟದ್ದಾರೆ.

ರೆಡ್ಡಿಯ ಮಾತು ಕೇಳಿದರೆ ಸಭಾಧ್ಯಕ್ಷರ ಆದೇಶವನ್ನು ಕಸದಬುಟ್ಟಿಗೆ ಹಾಕಿದಂತೆ. ಆದ್ದರಿಂದಲೇ ಇಕ್ಕಟ್ಟಿಗೆ ಬಿದ್ದ ಎಸ್.ಬಿ. ಪಾಟೀಲ್ ಸ್ಪಷ್ಟ ಮಾತಿನಲ್ಲೇ ರೆಡ್ಡಿಯ ಬೇಡಿಕೆಯನ್ನು ನಿರಾಕರಿಸಿದ್ದಾರೆ. ಅಷ್ಟಕ್ಕೂ ಪಟ್ಟುಬಿಡದ ರೆಡ್ಡಿ "ಆಕೆಯ ಖರ್ಚನ್ನು ನಾನೇ ನೋಡಿಕೊಳ್ಳುತ್ತೇನೆ. ತಂಡದಲ್ಲಿ ಆಕೆಯೂ ಬರಲಿ" ಎಂದು ಆಕೆಯೊಡನೆ ವಿಮಾನ ಏರೋಪ್ಲೇನು ಹತ್ತಿದ್ದಾರೆ.

ಈ ಪ್ರವಾಸದಲ್ಲಿ ಸಾಕಷ್ಟು ಅಪರ-ತಪರಾಗಳು ನಡೆದಿವೆ ಎಂದು ಸಭಾಧ್ಯಕ್ಷ ಕೃಷ್ಣರಿಗೆ ಗೊತ್ತಾಗಿ ಯಾರ್ಯಾರು ಹೋಗಿದ್ದಾರೆ ಎಂಬುದರ ಬಗ್ಗೆ ಸ್ಪಷ್ಟ ವಿವರ ನೀಡಲು ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ. ಇದು ಗೊತ್ತಾಗುತ್ತಿದಂತೆ ವಿಧಾನಮಂಡಲದ ವಿಶೇಷ ಕಾರ್ಯದರ್ಶಿ ಎಸ್.ಬಿ. ಪಾಟೀಲ್ ದೀರ್ಘ ರಜೆ ಹಾಕಿ ಮನೆ ಸೇರಿಕೊಂಡಿದ್ದಾರೆ.

ಪತ್ರಿಕೆಗೆ ಶಾಕ್!

ಇಂತಹದೊಂದು ಸುದ್ದಿಯ ಸ್ವಲ್ಪ ವಿವರಗಳು ಪ್ರಜಾವಾಣಿಯಲ್ಲಿ ಪ್ರಕಟಗೊಂಡಿದ್ದು ಜನರಿಗೆಲ್ಲಾ ಶ್ರೀರಾಮರೆಡ್ಡಿಯ ಖಾಸಗಿ ಬದುಕಿನ ರಂಗೀಲಾ ಚಟುವಟಿಕೆಗಳು ಶಾಕ್ ನೀಡಿವೆ. ಕಾರಣ ಶ್ರೀರಾಮರೆಡ್ಡಿಯವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಿಂದ ರಾಜ್ಯದಲ್ಲಿ ಆರಿಸಿಬಂದಿರುವ ಏಕೈಕ ಶಾಸಕರು. ಎರಡನೇ ಬಾರಿಗೆ ವಿಧಾನಸಭೆಗೆ ಆಯ್ಕೆಯಾಗಿರುವ ರೆಡ್ಡಿ ಬೇರೆ ಪಕ್ಷದ ಶಾಸಕರಂತೆ ಕಾಲಹರಣ ಮಾಡುವ ವ್ಯಕ್ತಿಯಲ್ಲ, ಅದಕ್ಕೆ ನಿದರ್ಶನ, ವಿಧಾನಸಭೆಯ ಕಲಾಪಗಳಲ್ಲಿ ರೆಡ್ಡಿ ಭಾಗವಹಿಸುವ ರೀತಿ.

ಅಧಿವೇಶನದ ಕಲಾಪಗಳಲ್ಲಿ ರೆಡ್ಡಿ ಮಾತನಾಡಲು ನಿಂತರೆಂದರೆ, ಇಡೀ ಸದನವೇ ಇವರ ವಾಗ್ಝರಿಗೆ ದಂಗಾಗುತ್ತದೆ. ಆ ಮಟ್ಟದ ಸಿದ್ಧತೆಯೊಂದಿಗೆ ಕಲಾಪದಲ್ಲಿ ಭಾಗವಹಿಸುವ ರೆಡ್ಡಿ, ಎಷ್ಟೋ ಬಾರಿ ಸರ್ಕಾರವನ್ನು ಪೇಚಿಗೆ ಸಿಲುಕಿಸಿದ್ದೂ ಉಂಟು. ಸಾರ್ವಜನಿಕವಾಗಿ ತನ್ನದೇ ತೂಕ ಹೊಂದಿರುವ ಶ್ರೀರಾಮರೆಡ್ಡಿಯವರಿಗೆ ಖಾಸಗಿ ಬದುಕಿರಬಾರದು ಎಂಬುದು ನಮ್ಮ ನಿಲುವಲ್ಲ, ಅವಿವಾಹಿತ ಆಗಿರುವ ರೆಡ್ಡಿಯವರು ತಮ್ಮ ಆಪ್ತರೊಂದಿಗೆ ಎಲ್ಲಿಗೆ ಬೇಕಾದರೂ ಹೋಗ ಬಹುದು. ಅದನ್ನು ಪ್ರಶ್ನಿಸುವ ಹಕ್ಕು ಯಾರಿಗೂ ಇಲ್ಲ. ಆದರೆ ಸರಕಾರದ ಸಮಿತಿಯ ಸದಸ್ಯರಾಗಿ ಪ್ರವಾಸಕ್ಕೆ ಹೋಗುವಾಗಲಾದರೂ ಅವರು ತಮ್ಮ ಖಯಾಲಿ ಗಳನ್ನು ಮರೆಯದಿರುವುದು ಅವರ ಘನತೆಗೆ ಅವರೇ ತಂದೊಡ್ಡಿರುವ ಕಪ್ಪು ಚುಕ್ಕೆ ಎಂಬುದಷ್ಟೇ ನಮ್ಮ ವಾದ.

ರೆಡ್ಡಿಗೆ ಇದು ಹೊಸದಲ್ಲ....

ಶಾಸಕ ಶ್ರೀರಾಮರೆಡ್ಡಿಯವರ ಹೆಸರಿನೊಂದಿಗೆ ಮಹಿಳೆಯರ ಹೆಸರುಗಳು ತಳಕುಹಾಕಿರುವುದು ಇದೇ ಮೊದಲಲ್ಲ, ಇದಕ್ಕೆ ಉದಾಹರಣೆ, ಬಾಗೇಪಲ್ಲಿಯ ಕನ್ನಿಕಾಪರಮೇಶ್ವರಿ ಏರಿಯಾದ ನಿವಾಸಿ ನರಸಮ್ಮ (ಇವರ ಹೆಸರನ್ನೂ ಬದಲಾಯಿಸಿದ್ದೇವೆ).

ಆಗಿನ್ನು ಕಮ್ಯುನಿಸ್ಟ್ ಪಾರ್ಟಿಯ ಕಾರ್ಯಕರ್ತರಾಗಿದ್ದ ಶ್ರೀರಾಮರೆಡ್ಡಿ ಪಕ್ಷದ ಚಟುವಟಿಕೆಗೆ ಮಾಸಿಕ 15 ರೂಪಾಯಿಯ ಬಾಡಿಗೆಗೆ ಬಂದಿದ್ದು ಇದೇ ನರಸಮ್ಮನ ಮನೆಗೆ. ಗಂಡ ಪಾಪಣ್ಣನನ್ನು ಕಳೆದುಕೊಂಡಿದ್ದ ನರಸಮ್ಮನಿಗೆ ರೆಡ್ಡಿಯವರ ಮೇಲೆ ಅದೆಂತದೋ ಆತ್ಮೀಯತೆ. ಈ ಇಬ್ಬರ ನಡುವಿನ ಆತ್ಮೀಯತೆ ಬಾಗೇಪಲ್ಲಿಯ ತುಂಬಾ ಸುದ್ದಿಯಾಗಿದ್ದು ಹಳೇ ಕತೆ. ಹೀಗೆ ರೆಡ್ಡಿಯೊಂದಿಗೆ ಆತ್ಮೀಯವಾಗಿದ್ದ ನರಸಮ್ಮನಿಗೆ ಅರುಣಾ ಎಂಬ ಮಗಳಿದ್ದಾಳೆ.

ಈ ಅರುಣಾಳನ್ನು ಆಂಧ್ರದ ಕದ್ರಿಯ ನರಸಿಂಹನಿಗೆ ಇವರೇ ನಿಂತು ಮದುವೆ ಮಾಡಿಸಿದ್ದರು. ಅದೇಕೋ, ಏನೋ ಕೆಎಸ್‌ಆರ್‌ಟಿಸಿ ಡ್ರೈವರ್ ನರಸಿಂಹನೊಂದಿಗೆ ಅರುಣಾಳ ಬದುಕು ಬರಕತ್ತಾಗಲೇ ಇಲ್ಲ, ಮದುವೆಯಾದ ಎರಡೇ ವರ್ಷಕ್ಕೆ ಕಂಕುಳಲ್ಲೊಂದು ಹೆಣ್ಣು ಮಗು ಹೊತ್ತು ಅರುಣಾ ತವರು ಮನೆ ಸೇರಿಬಿಟ್ಟಳು. ನಂತರದ ಈ ಕುಟುಂಬದ ಉಸ್ತುವಾರಿಯನ್ನು ಶ್ರೀರಾಮರೆಡ್ಡಿಯವರೇ ವಹಿಸಿಕೊಂಡಿದ್ದರು.

'ಸೂರಿ' ತಲೆ ಕೆಚ್ಚಿಕೊಂಡಿದ್ದರು

ನರಸಮ್ಮನ ಪ್ರಕರಣವನ್ನು ಅಬಲೆಯೊಬ್ಬಳ ಬಗೆಗಿನ ಕಾಳಜಿ ಎಂದು ಸುಮ್ಮನಾಗಬಹುದಿತ್ತು, ಆದರೆ ಸಿ.ಪಿ.ಎಂ ಪಕ್ಷದೊಳಗೂ ರೆಡ್ಡಿಯವರ ಖಯಾಲಿಗಳ ಬಗ್ಗೆ ಆರೋಪಗಳಿವೆ. ಈ ಹಿಂದೆ ಇವರು ಅಂಗನವಾಡಿ ಕಾರ್ಯಕರ್ತೆಯರ ಒಕ್ಕೂಟದ ಪದಾಧಿಕಾರಿಯೊಬ್ಬರೊಂದಿಗೆ ಹೊಂದಿದ್ದ ಸಂಬಂಧದ ಬಗ್ಗೆ ಪಕ್ಷದಲ್ಲಿಯೇ ಅತೃಪ್ತಿ ಹೊಗೆಯಾಡಿತ್ತು.

ಕೊನೆಗೆ ಈ ಪ್ರಕರಣ ಕೈಮೀರಿ, ಆಗ ಪಕ್ಷದ ಕಾರ್ಯದರ್ಶಿಯಾಗಿದ್ದ ಸೂರ್ಯನಾರಾಯಣರಾವ್ ತಲೆ ಚಚ್ಚಿಕೊಂಡಿದ್ದರು; ಖುದ್ದು ಅವರೇ ನಿಂತು ಇಬ್ಬರ ನಡುವೆ ರಾಜಿ ಮಾಡಿಸಿ, ಆ ಮಹಿಳೆಗೆ ಒಂದಷ್ಟು ಪರಿಹಾರವನ್ನೂ ಕೊಡಿಸಿದ್ದರೆಂದು ಪಕ್ಷದ ಸಂಗಾತಿಗಳೇ ನಟಿಕೆ ಮುರಿಯುತ್ತಿದ್ದಾರೆ.

'ರೆಡ್ಡಿ'ಯವರಿಗಿದು ತರವಲ್ಲ...

ಯಾರೋ ಚೆಡ್ಡಿಗಳೋ, ಜೆಡಿಎಸ್‌ನ ಉಡಾಳ ಶಾಸಕರೋ, ಕಾಂಗ್ರೆಸ್‌ನ ಪುಂಡರೋ ಈ ತರಹದೊಂದು ಫಜೀತಿ ಮಾಡಿಕೊಂಡಿದ್ದರೆ ಯಾರೂ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. 'ಪ್ರಜಾವಾಣಿ'ಯಂತಹ ಪತ್ರಿಕೆಯೂ ಶಾಸಕರ ಹೆಸರನ್ನು ಬರೆಯದೆ ತನ್ನ ಮುಖಪುಟದಲ್ಲಿ ಇಂತಹ ವರದಿ ಪ್ರಕಟಿಸುತ್ತಿರಲಿಲ್ಲ.

ಆದರೆ ಆರೋಪ ಬಂದಿರುವುದು ರೆಡ್ಡಿಯವರ ಮೇಲೆ. ತಮ್ಮ ಸೈದ್ಧಾಂತಿಕ ಬದ್ಧತೆ, ಸಾರ್ವಜನಿಕ ಬದುಕಿನಲ್ಲಿ ಪಾರದರ್ಶಕತೆಯನ್ನು ಕಾಪಾಡಿಕೊಂಡು ಬಂದಿರುವ ಶ್ರೀರಾಮರೆಡ್ಡಿಯವರಿಗೆ ಈ ರೀತಿಯ ಪ್ರಕರಣಗಳು ಶೋಭೆ ತರುವುದಿಲ್ಲ.


ರಾಜ್ಯವನ್ನೇ ದಿವಾಳಿ ಎಬ್ಬಿಸುತ್ತಿರುವ ಕೋ-ಜಾ ಸರ್ಕಾರಕ್ಕೆ ಕಿವಿ ಹಿಂಡಿ ಬುದ್ಧಿ ಹೇಳಬೇಕಾದ ರೆಡ್ಡಿ ಇಂತಹ ಸಣ್ಣ ವಿಷಯಗಳಲ್ಲಿ ನೈತಿಕವಾಗಿ ಎಡವಟ್ಟು ಮಾಡಿಕೊಳ್ಳಬಾರದೆಂಬುದಷ್ಟೇ 'ಲಂಕೇಶ್' ಬಯಕೆ.

ಇನ್ನಾದರೂ ರೆಡ್ಡಿ ಸರಿಯಾಗುವರೇ?

-ವರದಿಗಾರ

ಜನಾರ್ಧನ ರೆಡ್ಡಿ ಹಿಂದೆ ಗೂಢಚಾರರು

ರಾಜ್ಯ ಇಂಟೆಲಿಜೆನ್ಸ್ ಅಧಿಕಾರಿಗಳು ಬಳ್ಳಾರಿಯಲ್ಲಿ ಬೀಡು ಬಿಟ್ಟಿದ್ದಾರೆ. ಜನಾರ್ಧನ ರೆಡ್ಡಿಯ ಮನೆ ಸುತ್ತಲೇ ತಿರುಗುತ್ತಿದ್ದಾರೆ ಈ ಅಧಿಕಾರಿಗಳು. ರೆಡ್ಡಿ ಮನೆಗೆ ಬರುವ ಶಾಸಕರ್‍ಯಾರು, ಕಾರ್ಯಕರ್ತರ್‍ಯಾರು ಈ ಎಲ್ಲ ವಿಷಯಗಳನ್ನು ಸಂಗ್ರಹಿಸಿ ಬೆಂಗಳೂರಿಗೆ ರವಾನಿಸ ಲಾಗುತ್ತಿದೆ.



ಆದರೆ ಈ ಗುಪ್ತಚರ ಇಲಾಖೆಯ ಅಧಿಕಾರಿಗಳ ಮೇನ್ ಟಾರ್ಗೆಟ್ಟೇ ಬೇರೆ ಇದೆ. ಜನಾರ್ಧನ ರೆಡ್ಡಿ ಬಳಿ ಇದೆ ಎನ್ನಲಾದ 'ಗಣಿ ಲಂಚದ ಸಿ.ಡಿ.'ಯನ್ನು ಯಾವುದಾದರೂ ನೆಪದಲ್ಲಿ ಹಾರಿಸಿ ಅದರಲ್ಲೇನಿದೆ ಎಂಬುದನ್ನು ಕೋ-ಜಾಗಳಿಗೆ ತಿಳಿಸುವುದೇ ಈ 'ಟಾರ್ಗೆಟ್ ರೆಡ್ಡಿ' ಪ್ರಾಜೆಕ್ಟ್‌ನ ಮುಖ್ಯ ಉದ್ದೇಶ.

ಅಲ್ಲಿ ಬೆಂಗಳೂರಲ್ಲಿ ಡಿ.ಕೆ. ಶಿವ ಕುಮಾರ್ ಆಫೀಸಿನಲ್ಲಿ ಗಣಿ ಸಿ.ಡಿ. ಇದೆ ಎಂದು ನಂಬಿದ ಕುಮಾರಣ್ಣನ ಪಡೆ ಬಾಂಬ್ ಹುಡುಕುವ ನೆಪದಲ್ಲಿ ಡಿಕೆಶಿಯ ಆಫೀಸನ್ನೆಲ್ಲಾ ತಡಕಾಡಿ ನಿರಾಶೆಯಾಗಿತ್ತು.

ಇತ್ತ ಬಳ್ಳಾರಿಯಲ್ಲಿ ಮಂತ್ರಿ ಶ್ರೀರಾಮುಲುವನ್ನು ದೂರವಿಡುತ್ತಿದೆ ರೆಡ್ಡಿ ಕುಟುಂಬ. ತಮ್ಮ ಭಂಟನಂತಿದ್ದ ಶ್ರೀರಾಮುಲುವನ್ನು ಮಂತ್ರಿ ಮಾಡಿದ್ದು ಈ ರೆಡ್ಡಿ ಕುಟುಂಬವೇ. ಶ್ರೀರಾಮುಲು ಬಳ್ಳಾರಿ ಜಿಲ್ಲೆ ಮಟ್ಟಿಗೆ ಹೆಸರಿಗಷ್ಟೇ ಉಸ್ತುವಾರಿ ಮಂತ್ರಿ. ಇಡೀ ಆಡಳಿತ ಸೂತ್ರ ರೆಡ್ಡಿ ಬ್ರದರ್ಸ್ ಕೈಯಲ್ಲೇ ಇತ್ತು. ಜನಾರ್ಧನ ರೆಡ್ಡಿ ಬಿಜೆಪಿಯಿಂದ ಸಸ್ಪೆಂಡ್ ಆದಾಗ ಶ್ರೀರಾಮುಲು ಸಹ ರಾಜೀನಾಮೆ ನೀಡಿ, ತಮ್ಮ ಹಿಂದೆ ಬರುತ್ತಾನೆಂದು ಎಣಿಸಿದ್ದರು ರೆಡ್ಡಿಗಳು. ಆದರೆ ಮೊದಲ ಬಾರಿ ದಕ್ಕಿರುವ ಮಂತ್ರಿಗಿರಿಯನ್ನು ಅಷ್ಟು ಸುಲಭವಾಗಿ ಬಿಟ್ಟಾನೆಯೆ ಶ್ರೀರಾಮುಲು? ಅದೇ ವೇಳೆ ಡಿಸಿಎಂ ಯಡಿಯೂರಪ್ಪ, ಮಂತ್ರಿ ಈಶ್ವರಪ್ಪರು ಶ್ರೀರಾಮುಲುವನ್ನು ಹೈಜಾಕ್ ಮಾಡಿ ಅಭಯಹಸ್ತ ನೀಡಿದ್ದು ಶ್ರೀರಾಮುಲುಗೆ ಮತ್ತಷ್ಟು ಧೈರ್ಯ ತಂದು ಬಿಟ್ಟಿದೆ.

ಈಗ ಜನಾರ್ಧನ ರೆಡ್ಡಿ ಬ್ರದರ್ಸ್ "ನಾವು ಶ್ರೀರಾಮುಲುವನ್ನು ಮಂತ್ರಿ ಮಾಡಿದ್ದೇ ತಪ್ಪು, ನೀನೇ ಮಂತ್ರಿಯಾಗಬೇಕಿತ್ತು" ಎಂದು ಜನಾರ್ಧನ ರೆಡ್ಡಿಗೆ ಬಯ್ಯುತ್ತಿದ್ದಾರೆ.

ಇದೇ ವೇಳೆ ಎಂ.ಪಿ. ಪ್ರಕಾಶರಿಗೆ ಬಳ್ಳಾರಿ ಜಿಲ್ಲಾ ಉಸ್ತುವಾರಿ ನೀಡಿ, ಶ್ರೀರಾಮುಲುಗೆ ಗದಗ ಜಿಲ್ಲೆಯ ಉಸ್ತುವಾರಿ ನೀಡಲಾಗಿದೆ. ಹಿಂದೆ ರಾಜಕಾರಣ ಆರಂಭಿಸಿದಾಗ ಬಳ್ಳಾರಿಯ ಸಣ್ಣಪುಟ್ಟ ಲಿಂಗಾಯತ ರಾಜಕಾರಣಿಗಳಿಗೆ ಫಂಡ್ ಒದಗಿಸುತ್ತಾ ಲಿಂಗಾಯತರ ಬೆಂಬಲ ಪಡೆದಿದ್ದ ರೆಡ್ಡಿಗಳು ಇತ್ತೀಚೆಗೆ ಲಿಂಗಾಯತರನ್ನೇ ಮರೆತರು. ಹಾಗೆಯೇ ನಾಯಕ ಜನಾಂಗದ ಬೆಂಬಲವಿಲ್ಲದೇ ರೆಡ್ಡಿಗಳು ಗೆಲ್ಲುವಂತಿರಲಿಲ್ಲ, ದಿವಾಕರ್ ಬಾಬುವನ್ನು ಸೋಲಿಸಲೆಂದೇ ನಾಯಕ ಜನಾಂಗದ ಶ್ರೀರಾಮುಲುವನ್ನು ಮುಂದೆಬಿಟ್ಟು, ನಾಯಕ ಜನಾಂಗದವರ ಬೆಂಬಲ ಪಡೆದು, ಶ್ರೀರಾಮುಲುವನ್ನು ಶಾಸಕನನ್ನಾಗಿಸಿದರು. ಈಗ ಶ್ರೀರಾಮುಲು ರೆಡ್ಡಿಗಳ ಹಿಂದೆ ಹೋಗದಿರುವುದರಿಂದ ನಾಯಕ ಜನಾಂಗದ ಬೆಂಬಲ ರೆಡ್ಡಿಗಳಿಗೆ ಸಿಗುವುದಿಲ್ಲ.



ಶ್ರೀರಾಮುಲುವಿಗೆ ಕೌಂಟರ್ ಮಾಡಲು, ನಾಯಕ ಜನಾಂಗದ ಬೆಂಬಲ ಉಳಿಸಿಕೊಳ್ಳಲು ಜಿಲ್ಲಾ ಬಿಜೆಪಿ ಎಸ್.ಸಿ/ಎಸ್.ಟಿ. ಮೋರ್ಚಾದ ಅಧ್ಯಕ್ಷ ಗಣಿ ಗಳ್ಳ ನಾಗೇಂದ್ರ ಎಂಬಾತನನ್ನು ನಾಯಕ ಜನಾಂಗದ ಲೀಡರ್ ಎಂದು ಬಿಂಬಿಸಲು ರೆಡ್ಡಿಗಳು ಯತ್ನಿಸುತ್ತಿದ್ದಾರೆ. ಇಷ್ಟು ದಿನ ಜಿಲ್ಲೆಗೆ ಸಂಬಂಧಿಸಿದ ವರ್ಗಾವಣೆ, ಇನ್ನಿತರ ವ್ಯವಹಾರಗಳನ್ನು ನಿರ್ವಹಿಸಿದ್ದು ಸಂಜಯ್ ಬೆಟಗೇರಿ. ಈತ ರೆಡ್ಡಿಗಳ ಆಪ್ತ ಕಾರ್ಯದರ್ಶಿ. ಸಂಜಯ್ ಬೆಟಗೇರಿಗೆ ಇರುವಷ್ಟು ಮರ್ಯಾದೆ ಮಂತ್ರಿಯಾದ ತನಗಿಲ್ಲವಲ್ಲ ಎಂಬ ಕೊರಗು ಶ್ರೀರಾಮುಲುಗೆ ಕಾಡುತ್ತಲೇ ಇತ್ತು. ಈಗ ಯಡ್ಡಿ ಗ್ಯಾಂಗ್ ಬೆಂಬಲ ಸಿಕ್ಕಿರುವುದರಿಂದ ಶ್ರೀರಾಮುಲು ತನ್ನ ಮಂತ್ರಿಗಿರಿ ಅಧಿಕಾರವನ್ನು ಚಲಾಯಿಸಬಹುದು.

ಕಾಂಗ್ರೆಸ್‌ಗೆ ಸೇರಲು ತುದಿಗಾಲ ಮೇಲೆ ನಿಂತಿರುವ ರೆಡ್ಡಿ ಬ್ರದರ್ಸ್‌ಗೆ ಲಿಂಗಾಯತರು, ನಾಯಕರು ಬೆಂಬಲಿಸುವದು ಅಸಾಧ್ಯ ಎನ್ನುವ ಸ್ಥಿತಿ ನಿರ್ಮಾಣ ವಾಗಿದೆ.


ಅನಂತ್‌ಕುಮಾರರ AK-47 ಬಣದಲ್ಲಿರುವ ರೆಡ್ಡಿಗಳು, ಯಡ್ಡಿ ಬಣಕ್ಕೆ ನೆಗೆದಿರುವ ಮಂತ್ರಿ ಶ್ರೀರಾಮುಲುಗಳ ನಡುವೆ ಸಣ್ಣ ಸಂಘರ್ಷವಂತೂ ಆರಂಭವಾಗಿದೆ. ಅಂದ ಹಾಗೆ ಗುಪ್ತಚಾರ ಇಲಾಖೆಯ ಅಧಿಕಾರಿಗಳು ರೆಡ್ಡಿಯನ್ನು ಟ್ರ್ಯಾಪ್ ಮಾಡಲು ಹೊಂಚು ಹಾಕಿ ತಿರುಗುತ್ತಲೇ ಇದ್ದಾರೆ.

ಪ್ರತಿ ವರ್ಷ ಹಂದಿ ಜ್ವರ, ಮೆದುಳು ಜ್ವರಗಳಿಗೆ ಹೊಡೆತಕ್ಕೆ ತತ್ತರಿಸುತ್ತಿದ್ದ ಬಳ್ಳಾರಿ ಜಿಲ್ಲೆ ಈ ಸಲ 'ಮೈನ್ಸ್ ಪ್ಲೋಟ'ಕ್ಕೆ ತತ್ತರಿಸುತ್ತಿದೆ.

-ಅಹೋಬಲ

ಮಟ್ಕಾ ಮುಚ್ಚಿಟ್ಟು ಇಸ್ಪೀಟಿಗೆ ಪೆಟ್ಟು!





ಹಾಡು ಹಗಲೇ ಮರ್ಡರ್ ಆದ ಲವ-ಕುಶ

ಪಕ್ಕಾ ಟಾಂಬಾಯ್ ಗೆಟಪ್ಪಿನಲ್ಲಿ ಜೀನ್ಸ್, ಟೀ ಶರ್ಟು, ಕೂಲಿಂಗ್ ಗ್ಲಾಸ್ ತೊಟ್ಟು ಕಂಡ ಕಂಡ ಇಸ್ಪೀಟ್ ಅಡ್ಡೆಗಳಿಗೆ ನುಗ್ಗುವ ಶಿವಮೊಗ್ಗದ ಎಸ್ಪಿ ಅರುಣ್ ಚಕ್ರವರ್ತಿಯನ್ನು ಕಂಡಿದ್ದೇ ಜನ ಹಾಲಿವುಡ್ ಸಿನಿಮಾದ ಜೇಮ್ಸ್ ಬಾಂಡ್ ಕಂಡಷ್ಟೇ ಕಕ್ಕಾಬಿಕ್ಕಿಯಾಗುತ್ತಾರೆ!

ಇದೀಗ ಹಾಡುಹಗಲಲ್ಲೇ ಅದೂ ನಡುರಸ್ತೆಯಲ್ಲೇ ಸಂಭವಿಸಿದ ಲವ-ಕುಶ ಎಂಬ ರೌಡಿ ಬ್ರದರ್‌ಗಳ ಜೋಡಿ ಕೊಲೆಯನ್ನೂ ಲೆಕ್ಕ ಹಾಕಿ ಹೇಳುವುದಾದರೆ ಶಿವಮೊಗ್ಗ ನಗರವೊಂದರಲ್ಲೇ ಕೇವಲ ಇಪ್ಪತ್ನಾಲ್ಕು ದಿನಗಳಲ್ಲಿ ನಾಲ್ಕು ಅನಾಹುತಕಾರಿ ಹತ್ಯೆಗಳಾಗಿವೆ. ಮೊದಲು ಮಾಜಿ ನಗರಸಭಾ ಸದಸ್ಯ ರಾಜ್‌ಕುಮಾರ್ ಕಗ್ಗೊಲೆಯಾದ. ಆನಂತರ ಲಾಡ್ಜ್ ಒಂದರಲ್ಲಿ ಹೆಣ್ಣು ಮಗಳೊಬ್ಬಳ ಹತ್ಯೆಯಾಯಿತು. ಇವೆರಡರ ರಕ್ತ ಆರುವ ಮೊದಲೇ ಲವ ಮತ್ತು ಕುಶ ಎಂಬ ದೈತ್ಯ ತಲೆಗಳೆರಡು ನೆಲಕ್ಕುರುಳಿವೆ.

ಶಿವಮೊಗ್ಗ

ಪಕ್ಕದ ಭದ್ರಾವತಿಯಲ್ಲೂ ಇದೇ ಕತೆ. ಮೊದಲು ಟಾಟಾ ನಾಯ್ಕನ ಹತ್ಯೆಯಾಯಿತು. ಬೆನ್ನಲ್ಲೇ ಶಿವಮೊಗ್ಗದ ಸೌಂಡ್ ಸಿಸ್ಟಂನ ಮಾಲೀಕ ಮಂಜುನಾಥನನ್ನು ಲಕ್ಕಿನ ಕೊಪ್ಪ ಕಾಡಿಗೊಯ್ದು ಸುಟ್ಟು ಹಾಕಲಾಯ್ತು.

ಹೀಗೆ ಒಂದರ ಮೇಲೊಂದು ಬರ್ಭರ ಹತ್ಯೆಗಳಾದಾಗೆಲ್ಲ ಎಸ್ಪಿ ಸಾಹೇಬರಿಗೆ ಏಕಾಏಕಿ ಪೌರುಷ ಉಕ್ಕಿ ಇದ್ದ ಇಸ್ಪೀಟ್ ಕ್ಲಬ್ಬುಗಳ ಮೇಲೆ ರೇಡು ಬೀಳುವುದು ಸರ್ವೇ ಸಾಮಾನ್ಯ. ಅದು ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದಂತಿರುತ್ತದೆ. ಅದರಲ್ಲೂ ಲವ-ಕುಶರಂಥ ಹಳೇ ರೌಡಿಗಳು ಒಟ್ಟೊಟ್ಟಿಗೇ ಅದೂ ತಮ್ಮ ಎಸ್ಪಿ ಕಚೇರಿಯ ಎದುರಿಗೇ ಕೊಲೆಯಾದರೆ ಸುಮ್ಮನಿರುತ್ತಾರಾ?

ಬಹುಶಃ ಶಿವಮೊಗ್ಗದ ಮಟ್ಕಾ ಅಡ್ಡೆಗಳ ಮೇಲೇನಾದರೂ ಎಸ್ಪಿ ಸಾಹೇಬರು ಮುಗಿಬಿದ್ದಿದ್ದರೆ ಜನ ಮೆಚ್ಚುತ್ತಿದ್ದರೇನೊ. ಇವತ್ತು ಶಿವಮೊಗ್ಗದ ಹುಡಿಪುಡಿ ರೌಡಿಗಳಿಗೆಲ್ಲ ವಿಟಮಿನ್ 'ಎಂ' ಅಂತ ಸರಬರಾಜಾಗುತ್ತಿರುವುದೇ ಇಲ್ಲಿನ ಮಟ್ಕಾ ಅಡ್ಡೆಗಳಿಂದ. ಸಣ್ಣಪುಟ್ಟ ಲ್ಯಾಂಡ್ ಡೀಲು, ಅಂಗಡಿ ಖಾಲಿ ಮಾಡಿಸುವುದು ಇತ್ಯಾದಿಗಳೆಲ್ಲ ಇಲ್ಲಿನ ರೌಡಿಗಳ ಪಾಲಿಗೆ ಬಂಪರ್ ಲಾಟರಿಗಳಂತಿದ್ದರೆ ದಿನಂಪ್ರತಿ ಉತ್ಪತ್ತಿಯಿರುವುದು ಮಟ್ಕಾ ಅಡ್ಡೆಗಳಿಂದಲೆ.

ಇವತ್ತು ಶಿವಮೊಗ್ಗದ ಅಷ್ಟೂ ಮಂದಿ ಪೊಲೀಸರನ್ನೂ, ರೌಡಿಗಳನ್ನೂ ಒಟ್ಟೊಟ್ಟಿಗೇ ಸಾಕುತ್ತಿರುವವರು ಇಲ್ಲಿನ ಓ.ಸಿ. ದೊರೆಗಳೆ. ಈ ಪೈಕಿ ಅಗ್ರಗಣ್ಯರಂತಿದ್ದ ಲವ-ಕುಶರಿಗೆ ತಿಂಗಳ ಪ್ರತಿ ತಪ್ಪದೇ ಮಾಮೂಲು ಸಂದಾಯವಾಗುತ್ತಿದ್ದದ್ದು ಮಲ್ಲೇಶಿಯಿಂದ. ಈತ ಮಾಜಿ ನಗರಸಭಾ ಉಪಾಧ್ಯಕ್ಷ ಮತ್ತು ಕಾಂಗ್ರೆಸ್ ಲೀಡರ್. ಶಿವಮೊಗ್ಗ-ಭದ್ರಾವತಿಯಂಥ ಅವಳಿನಗರಗಳಲ್ಲಿ ಸಿಂಗಲ್ ನಂಬರ್ ಮತ್ತು ಮಟ್ಕಾ ಎರಡೂ ನಡೆಸುತ್ತಾನೆ. ಶಿವಮೊಗ್ಗದ ನಗರಸಭಾಧ್ಯಕ್ಷ ಎಂ.ಕೆ. ಸುರೇಶ್‌ಕುಮಾರ್ ಈತನ ಎಲ್ಲಾ ಧಂದೆಗಳಿಗೆ ಗಾಡ್‌ಫಾದರ್. ಈತನ ಒಡೆತನದ ಹೆವೆನ್ ಇನ್ ರೆಸಾರ್ಟ್‌ನಲ್ಲೇ ಲವ-ಕುಶ ಅಡ್ಡೆ ಹಾಕುತ್ತಿದ್ದರು.



ಎಸ್ಪಿ ಅರುಣ್ ಚಕ್ರವರ್ತಿ

ದಿನವೊಂದಕ್ಕೆ ಸರಿಸುಮಾರು ಐವತ್ತು ಲಕ್ಷದಷ್ಟು ಲೇವಾದೇವಿಯ ಶಿವಮೊಗ್ಗದ ಓ.ಸಿ. ಧಂದೆಯಲ್ಲಿ ಮಲ್ಲೇಶಿಯೊಬ್ಬನೇ ಇಪ್ಪತ್ತು ಲಕ್ಷದಷ್ಟು ವಹಿವಾಟು ನಡೆಸುತ್ತಾನೆ. ಮಂಡ್ಲಿ, ಆರ್.ಎಂ.ಎಲ್. ನಗರ, ಅಣ್ಣಾನಗರ, ಟಿಪ್ಪು ನಗರ, ಲಷ್ಕರ್ ಮೊಹಲ್ಲಾ, ಟ್ಯಾಂಕ್ ಮೊಹಲ್ಲಾ, ದುರ್ಗಿಗುಡಿಯಂಥ ಶಿವಮೊಗ್ಗದ ಏರಿಯಾಗಳಲ್ಲಿ ಸಿಂಗಲ್ ನಂಬರ್ ಲಾಟರಿಗಳ ಮೇಲೇ ಓ.ಸಿ. ನಂಬರುಗಳನ್ನೂ ಬರೆದುಕೊಡುತ್ತಾರೆ. ಈ ಪೈಕಿ ದುರ್ಗಿಗುಡಿ, ಟ್ಯಾಂಕ್ ಮೊಹಲ್ಲಾ ಮತ್ತು ಲಷ್ಕರ್ ಏರಿಯಾಗಳನ್ನು ಸುಧಾಕರ ಮತ್ತು ಮಲ್ಲೇಶಿಯ ಬಂಟ ದಳವಾಯಿ ಹಂಚಿಕೊಂಡರೆ, ಮತ್ತೊಬ್ಬ ಓ.ಸಿ. ಕುಳ ಫಯಾಜ್ ಕಾಂಗ್ರೆಸ್ಸಿನಿಂದ ನಗರಸಭಾ ಸದಸ್ಯನಾಗಿ ಗೆದ್ದಿದ್ದಾನೆ. ಟಿಪ್ಪು ನಗರದಲ್ಲಿ ಈತನ ಶಿಷ್ಯ ಓ.ಸಿ. ನಯಾಜ್ ಧಂದೆಗಿಳಿದಿದ್ದಾನೆ.

ಶಿವಮೊಗ್ಗದ ಗಲ್ಲಿಗಲ್ಲಿಯನ್ನೂ ಹೊಕ್ಕ ಇಂಥ ಪ್ರತಿ ಓ.ಸಿ. ಅಡ್ಡೆಗೂ ಒಬ್ಬೊಬ್ಬ ರೌಡಿ ಬೇಕು. ಈ ಪೈಕಿ ಲವ-ಕುಶ ಮಲ್ಲೇಶಿಯ ಬೆನ್ನಿಗಿದ್ದರು. ಸಾಲದ್ದಕ್ಕೆ ಜೆಡಿಎಸ್‌ನ ಪುಡಿ ಲೀಡರ್ ಐಡಿಯಲ್ ಗೋಪಿ ಎಂಬಾತ ಲವ-ಕುಶರ ಹೆಸರಲ್ಲೇ ಲ್ಯಾಂಡ್ ಡೀಲಿಗಿಳಿದ. ಇದೆಲ್ಲಕ್ಕೂ ಪೂರಕವಾಗಿ ಬೆಂಗಳೂರಿನ ಪಂಟರ್ ಕಾಂತ ಉರ್ಫ್ ಶ್ರೀಕಾಂತ ಶಿವಮೊಗ್ಗಕ್ಕೆ ಬಂದವನೇ ಗರಿಗರಿ ಖಾದಿ ತೊಟ್ಟು ಜೆಡಿಎಸ್ ಪುಡಾರಿಯಂತೆ ಲವಕುಶರನ್ನು ಬೆಳೆಸತೊಡಗಿದ.


ಒಂದಾನೊಂದು ಕಾಲಕ್ಕೆ ತನ್ನಿಂದಲೇ ಕೊಲೆ ಮಾಡಿಸಿ ತಾವು ಮಾತ್ರ ಹೆಸರು-ದುಡ್ಡು ಮಾಡಿಕೊಂಡ ಲವ-ಕುಶರ ವಿರುದ್ಧ ಇದೇ ಹೊತ್ತಿಗೆ ಅವರ ಅನಾದಿಕಾಲದ ಶಿಷ್ಯ ತಮಿಳು ಕುಮಾರ ತಿರುಗಿಬಿದ್ದ. ಲವ-ಕುಶರ ಆಜನ್ಮ ವೈರಿ ಬಾಂಡ್ಲಿ ಶೀನ ಮತ್ತು ಸ್ಟಾಟ್ ನಾಗರಿಗೆ ಅದೇ ಬೇಕಿತ್ತು. ಕುಮಾರನ ತಲೆಗೆ ಸ್ಕೆಚ್ಚು ತುಂಬಿದ್ದಾರೆ. ಖತರ್‌ನಾಕ್ ಕುಮಾರನ ಜೊತೆ ಕೈಜೋಡಿಸಿದ್ದು ಹಂದಿ ಅಣ್ಣಿ. ಸಾಲದ್ದಕ್ಕೆ ಕೆಲ ದಿನಗಳ ಹಿಂದಷ್ಟೇ ಲವ-ಕುಶರಿಂದ ಒದೆ ತಿಂದಿದ್ದ ಮಂಜನೂ ಕೈ ಜೋಡಿಸಿದ್ದಾನೆ. ಎಲ್ಲರೂ ಪಡ್ಡೆ ಹುಡುಗರೆ. ತೆಗೆದರೆ ದೊಡ್ಡ ತಲೆಯನ್ನೇ ತೆಗೀಬೇಕು. ಆಗ ಮಟ್ಕಾ ಮಾಮೂಲಿ ನಮಗೂ ಬರುತ್ತದೆ. ಇದು ಹಂತಕರಿಗಿದ್ದ ಉದ್ದೇಶ.

ಎಸ್ಪಿ ಅರುಣ್ ಚಕ್ರವರ್ತಿಗೆ ಮಟ್ಕಾ ದೊರೆಗಳನ್ನು ಮುಟ್ಟುವ ತಾಕತ್ತು ಮತ್ತು ಆಸಕ್ತಿ ಎರಡೂ ಇದ್ದಂತಿಲ್ಲ. ಇಸ್ಪೀಟ್ ಅಡ್ಡೆಗಳನ್ನು ಬಟ್ಟರೆ ಮಾನ ಕಾಯಲು ಬೇರೆ ಗತಿಯಿಲ್ಲ! ■

ಎಡಬಿಡಂಗಿ ಈಶ್ವರಪ್ಪ

ಹಿಂದೆಲ್ಲ ಸಣ್ಣದೊಂದು ಗಲಾಟೆಯಾದರೂ ಸಾಕು 'ಕಾನೂನು ಸುವ್ಯವಸ್ಥೆ ಕೆಟ್ಟಿದೆ, ಇದು ಸರ್ಕಾರದ ದುರಾಡಳಿತಕ್ಕೆ ಸಾಕ್ಷಿ' ಎಂದೆಲ್ಲ ಬೊಬ್ಬಡುತ್ತಿದ್ದ ಬಿಜೆಪಿ ನಾಯಕ ಈಶ್ವರಪ್ಪ ಈಗ ಉಲ್ಟಾ ಹೊಡೆದು 'ಅಂಥಾದ್ದೇನೂ ಆಗೇ ಇಲ್ಲ, ಪೊಲೀಸ್ ವ್ಯವಸ್ಥೆ ನೆಟ್ಟಗಿದೆ' ಎಂದು ತಿಪ್ಪೆ ಸಾರಿಸುತ್ತಿದ್ದಾರೆ.

ಬರೇ ಇಪ್ಪತ್ನಾಲ್ಕು ದಿನಗಳೊಳಗೆ ಶಿವಮೊಗ್ಗ ನಗರದಲ್ಲೇ ನಾಲ್ಕು ಕೊಲೆಗಳಾಗಿವೆ. ಹಿಂದ್ಯಾವತ್ತೂ ಈ ಪಾಟಿ ರಕ್ತ ಹರಿದದ್ದಿಲ್ಲ. ಈಗ ತಮ್ಮದೇ ಸರ್ಕಾರವಿದ್ದಾಗ್ಯೂ ಶಿವಮೊಗ್ಗದ ಗ್ಯಾಂಗ್‌ವಾರ್ ನಿಯಂತ್ರಿಸಲಾಗುತ್ತಿಲ್ಲ ಈಶ್ವರಪ್ಪನಿಗೆ. ಏಕೆಂದರೆ ಲವ-ಕುಶರಿಗೆ ಫೀಡ್ ಮಾಡಿಕೊಂಡೇ ಬಂದ ಮಟ್ಕಾ ದೊರೆ ಮಲ್ಲೇಶಿ ಮತ್ತು ಆತನ ಗಾಡ್‌ಫಾದರ್ ಸುರೇಶಿ ಮೇಲುನೋಟಕ್ಕಷ್ಟೇ ಕಾಂಗ್ರೆಸ್ಸಾದರೂ ಅಂತರಾಳದಲ್ಲಿ ಈಶ್ವರಪ್ಪನವರ ಹಿತೈಷಿಗಳೆ. ಅದರಲ್ಲೂ ಮಲ್ಲೇಶಿ ಈಶ್ವರಪ್ಪನವರ ಕುಲಬಾಂಧವ. ಹೀಗಾಗಿ ಶಿವಮೊಗ್ಗದ ಓ.ಸಿ. ಧಂದೆಯನ್ನೂ ಅದರ ದೊರೆಗಳನ್ನೂ ಒಟ್ಟೊಟ್ಟಿಗೇ ಕಾಯುವ ಹೊಣೆ ಈಶ್ವರಪ್ಪನವರ ಹೆಗಲಮೇಲಿದೆ.



ಹಿಂದೆ ಸಣ್ಣ ನಲ್ಲಿ ಜಗಳಕ್ಕೂ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಿದ್ದ ಈಶ್ವರಪ್ಪ ಈಗ ಪತ್ರಿಕಾಗೋಷ್ಠಿ ಕರೆದು ಪೊಲೀಸರಿಗೆ ಶಬ್ಬಾಸ್‌ಗಿರಿ ಕೊಡುತ್ತಿದ್ದಾರೆ.

ಇದು ಹತಾಶೆಯಲ್ಲದೇ ಮತ್ತೇನು?

'ಹೊಡಿ ಮಗ, ಹೊಡಿ ಮಗ' ಎಂದು ಹಾಡಿದ ಕೊಲೆಗಡುಕರು..

ಕೇವಲ ಇಪ್ಪತ್ತು ನಿಮಿಷಗಳ ಹಿಂದಷ್ಟೇ ಆ ರಸ್ತೆ ಹಾದಿ ಹೋಗಿದ್ದ ನಾನು ಪುನಃ ವಾಪಸ್ಸು ಬರುವಷ್ಟರಲ್ಲಿ ಜನಜಾತ್ರೆ ಸೇರಿತ್ತು. ಅಲ್ಲಿದ್ದ ಜನರ ಮುಖದಲ್ಲಿ ಗಾಬರಿಯೇನಿರಲಿಲ್ಲ. ಪೊಲೀಸರ ಮುಖದಲ್ಲಿ ಒಂದು ರೀತಿಯ ಸಂಭ್ರಮವಿದ್ದಂತಿತ್ತು. ಯಾರೋ ಕುಖ್ಯಾತ ರಾಜಕಾರಣಿ ಅಥವಾ ಮಂತ್ರಿ ಮಹೋದಯ ಧಿಡೀರನೆ ಪ್ರತ್ಯಕ್ಷವಾಗಿರಬೇಕು ಎಂದುಕೊಂಡು ಕುತೂಹಲದಿಂದ ಪೇದೆ ಒಬ್ಬನನ್ನು ಕೇಳಿದೆ.

"ಲವ ಕುಶನ್ನ ಕೊಚ್ಚಹಾಕಿದ್ದಾರೆ ಸಾರ್. ಕುಶ ಸ್ಪಾಟ್, ಲವನೂ ಹೋಗಬಹುದು. ಆಸ್ಪತ್ರೆಗೆ ತಗಂಡೋದ್ರು" ಎಂದ. ಅಲ್ಲಿದ್ದ ಜನರೆಲ್ಲಾ ಟಿವಿಯಲ್ಲಿ ಬರುವ ಕ್ರೈಂ ಕತೆಗಳ ಲೈವ್ ಪ್ರದರ್ಶನ ನೋಡುತ್ತಿರುವವರಂತೆ ಕಂಡರು.

ನಾನು ಆಸ್ಪತ್ರೆಗೆ ಓಡಿದೆ. ಅಲ್ಲಿ ನೋಡಿದರೆ ಲವನಿಗೆ ಹೊಲಿಗೆ ಹಾಕಲು ಅವಕಾಶವಾಗದಷ್ಟು ಜನ ಮುತ್ತಿಕೊಂಡಿದ್ದರು. ಆ ಜನ ಜಂಗುಳಿಯಲ್ಲೇ ಒಬ್ಬ ಕರಕಲು ಬಟ್ಟೆ ಹೊಲಿದಂತೆ ಬೆನ್ನು ಭಾಗಕ್ಕೆ ಬಿದ್ದಿದ್ದ ಮಚ್ಚಿನೇಟುಗಳನ್ನು ಜೋಡಿಸಿ ಹೊಲೆಯುತ್ತಿದ್ದ. ಕೆಳಗೆ ಚೆಲ್ಲಿದ್ದ ರಕ್ತದ ವಾಸನೆ ಮೂಗಿಗೆ ಬಡಿದು, ಪಾತಕ ಲೋಕದ ಅಮಾನುಷ ಕ್ರೌರ್ಯವನ್ನು ಮನಸ್ಸಿಗೆ ನಾಟಿಸಿತ್ತು. ಇಂತದ್ದೇ ಕೆಲಸ ಮಾಡಿ ಪರಾರಿಯಾಗಿದ್ದವರಿಗೆ, ಈಗ ಅಂತದ್ದೇ ಸ್ಥಿತಿ ಬಂತಲ್ಲ ಅನ್ನಿಸಿತು. ಆಗ ಪಕ್ಕದಲ್ಲಿದ್ದ ಪತ್ರಕರ್ತನನ್ನು "ಜೀವಕ್ಕೇನು ತೊಂದ್ರೆಯಿಲ್ಲವಾ?" ಅಂತ ಕೇಳಿದೆ. "ಏನೂ ತೊಂದ್ರೆಯಿಲ್ಲ ಸಾರ್, ಬದುಕ್ತನೆ" ಎಂದ. ಹಾಗಂದ ಕೂಡಲೇ ಆತಂಕ ಆಯ್ತು. ಈ ಹಾಳು ಲವ ಬದುಕಿ, ಮತ್ತೆ ಸೇಡಿಗೆ ಎದ್ದು ನಿಂತರೆ ಕತೆಯೇನು ಅನ್ನಿಸಿತು!

ಅಂತೂ ಒಟ್ಟಿಗೆ ಹುಟ್ಟಿ, ಒಂದೇ ರೀತಿ ಆಲೋಚಿಸಿ, ಒಟ್ಟಿಗೆ ಕೊಲೆಗಳನ್ನು ಮಾಡಿ, ಜೊತೆಯಲ್ಲೇ ಜೈಲಿಗೆ ಹೋಗಿ, ಜೊತೆಯಲ್ಲೇ ಹೊರಬಿದ್ದಿದ್ದ ಲವ-ಕುಶ ಎಂಬ ಈ ಅವಳಿಗಳು ಜೊತೆಯಲ್ಲೇ ಮಚ್ಚೇಟಿಗೆ ಬಲಿಯಾಗಿದ್ದರು. ಈಗಾಗಲೇ ಇವರಿಬ್ಬರ ಇತಿಹಾಸ ಕುರಿತು ಪುಟಗಟ್ಟಲೆ ವರದಿ ಆಗಿರುವುದರಿಂದ ಅದರ ಬಗ್ಗೆ ಇಲ್ಲಿ ಹೇಳಲ್ಲ. ಆದರೆ ಆವತ್ತು ಹಾಡು ಹಗಲೇ ಹಳೆ ತಲೆಮಾರಿನ ಈ ರೌಡಿಗಳನ್ನು ಕೊಚ್ಚಿ ಹಾಕಿದ ಹೊಸ ತಲೆಮಾರಿನ ಪುಡಿ ರೌಡಿಗಳು ಯಾವ ಭಯವೂ ಇಲ್ಲದೆ "ಹೊಡಿ ಮಗ, ಹೊಡಿ ಮಗ" ಎಂದು ಹಾಡುತ್ತಾ ಹೋಗುತ್ತಾರೆಂದರೆ ಅದರ ಅರ್ಥವೇನು? ಅದೂ ಎಸ್.ಪಿಯವರ ಆಫೀಸಿನ ಮುಂದೆಯೇ ಈ ಕೃತ್ಯವನ್ನು ಎಸಗಿ, ಯುದ್ಧವನ್ನು ಗೆದ್ದವರಂತೆ ಜನಪ್ರಿಯ ಸಿನಿಮಾ ಹಾಡನ್ನು ಹಾಡುತ್ತಾ ಹೋಗುತ್ತಾರೆಂದರೆ ಅದರ ಅರ್ಥವೇನು?

ಈಗ ಇಲ್ಲಿನ ರೌಡಿಗಳು "ಇನ್ನೂ ತಲೆಗಳು ಉರುಳಲಿವೆ. ಅವುಗಳಲ್ಲಿ ಪತ್ರಕರ್ತ ಎನ್. ಮಂಜುನಾಥ್‌ರವರ ಹೆಸರೂ ಇದೆ" ಎಂದು ಪತ್ರಕರ್ತರಿಗೂ, ಪೊಲೀಸರಿಗೂ ಪತ್ರ ಬರೆಯುತ್ತಾರೆಂದರೆ, ಅದರ ಅರ್ಥವೇನು?

ಶಿವಮೊಗ್ಗೆಯಲ್ಲಿ ರಕ್ತಪಾತ ನಿಲ್ಲುವುದಾದರೂ ಎಂದು?

–ಬಿ. ಚಂದ್ರೇಗೌಡ.

ರೈತರನ್ನು ಬೀದಿಗೆ……

(11 ನೇ ಪುಟದಿಂದ)

ಎಸ್ಪಿ ಅರುಣ್ ನಾಗೇಗೌಡ ಎಂಬ ಗೌಡರ ಮನೆಯ ಭಟ್ಟಂಗಿ. ಪೊಲೀಸ್ ಠಾಣೆಯನ್ನೇ ರಿಯಲ್ ಎಸ್ಟೇಟ್ ಅಡ್ಡೆಯನ್ನಾಗಿ ಮಾಡಿಕೊಂಡಿರುವ ಈತ ರೈತರನ್ನು ಠಾಣೆಗೆ ಕರೆಸಿಕೊಂಡು, ಒಸ್ತೂಲಾ ತೋರಿಸಿ ಬೆದರಿಸಿಯೇ ಕ್ರಯ ಪತ್ರಕ್ಕೆ ಸಹಿ ಹಾಕಿಸಿಕೊಂಡಿದ್ದಾನೆ.

ಈ ಹಿಂದೆ ಹೊತ್ತಿಲ್ಲದ ಹೊತ್ತಿನಲ್ಲಿ ಹಳ್ಳಿಯ [illegible] ವಿಚಾರಣೆಗೆ ಠಾಣೆಗೆ ಬಾ ಎಂದು ಕರೆದು. ಹಳ್ಳಿಯವರಿಂದ ಗೂಸಾ ಹಾಕಿಸಿಕೊಂಡಿದ್ದ [illegible] ಅರುಣ್. ಇಂದು ತನ್ನ ಮೇಲಧಿಕಾರಿಗಳಿಗೇ ಬಾಲಕೃಷ್ಣೇಗೌಡ ನನ್ನ ಬೀಗರು, ಕುಮಾರಣ್ಣ ನನ್ನ [illegible] ಎನ್ನುತ್ತಾನೆಂದರೆ ಈತನಿಂದ ಶ್ರೀರಂಗಪಟ್ಟಣದ [illegible]

ಗೌಡರ ಕುಟುಂಬ ಪ್ರವಾಸ….

ಇವತ್ತು ಮುಖ್ಯಮಂತ್ರಿ ಕುಮಾರಸ್ವಾಮಿ ತಮ್ಮ ಕುಟುಂಬ ಯಾವುದೇ ಭೂವ್ಯವಹಾರದಲ್ಲಿ ತೊಡಗಿಲ್ಲ, ತಾವೇನೇ ಮಾಡಿದರೂ ನೇರವಾಗಿಯೇ ಮಾಡುತ್ತೇವೆ ಎಂದು ಮಾಧ್ಯಮದವರೆದುರು ಅಲವತ್ತುಕೊಳ್ಳುತ್ತಾರಲ್ಲಾ, ಕೋಟಿಗೆ ಎಷ್ಟು ಸೊನ್ನೆ ಎಂದು ಗೊತ್ತಿಲ್ಲಾ ಎಂದು ಹೇಳುತ್ತಾರಲ್ಲಾ, ಅದೇ ಕುಮಾರಸ್ವಾಮಿಗೆ ತನ್ನ ಅಣ್ಣ ಬಾಲಕೃಷ್ಣೇಗೌಡರ ಪತ್ನಿ ಕವಿತಾ, ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಸ್ಟ್ಯಾಂಪ್ ಡ್ಯೂಟಿ ವಂಚಿಸಿ ಭೂಮಿ ಖರೀದಿಸಿರುವುದು ಗೊತ್ತಿಲ್ಲವೇ? ಅವರ ಸಹೋದರಿಯರಾದ ಡಾ. ಅನುಸೂಯ, ಶೈಲಜಾ, ಮಂತ್ರಿ ರೇವಣ್ಣನ ಪತ್ನಿ ಭವಾನಿ ಮೇಲಿಂದ ಮೇಲೆ ಶ್ರೀರಂಗಪಟ್ಟಣ ಮತ್ತು ಮೈಸೂರು ಪಕ್ಕದ ಹಳ್ಳಿಗಳಿಗೆ ಹಾಡು ಹಗಲಿನಲ್ಲಿಯೇ ಭೇಟಿ ನೀಡುತ್ತಿರುವುದು ಯಾವ ಸಂಬಂಧಿಕರನ್ನು ನೋಡಲಿಕ್ಕೆ…. ಮತ್ಯಾರ ಯೋಗಕ್ಷೇಮ ವಿಚಾರಿಸುವುದಕ್ಕೆ…..

ದೇವೇಗೌಡರ ಕುಟುಂಬದ ಅಷ್ಟು ಘಟಾನುಘಟಿಯರೂ ಮೇಲಿಂದ ಮೇಲೆ ಶ್ರೀರಂಗಪಟ್ಟಣಕ್ಕೆ ಬರುವುದನ್ನು ಅಲ್ಲಿಯ ಜನರೇ ನೋಡಿದ್ದಾರೆ… ಮೊನ್ನೆ, ಆಗಸ್ಟ್ 11 ರ ಶುಕ್ರವಾರ ಶ್ರೀರಂಗಪಟ್ಟಣದ ಪ್ರವಾಸಿ ಮಂದಿರದಲ್ಲಿ ಗೌಡರ ಪರಿವಾರ, ಜಮೀನು ನೋಂದಣಿಗೆ ಸಂಬಂಧಿಸಿದಂತೆ ತಮ್ಮ ಹಿಂಬಾಲಕರೊಂದಿಗೆ ಮಾತುಕತೆ ನಡೆಸಿದ್ದನ್ನು ಅಲ್ಲಿಯ ರೈತರೇ ಕಣ್ಣಾರೆ ಕಂಡಿದ್ದಾರೆ.

ನಾಪತ್ತೆಯಾದ ಮಗ್ಗೆನ ಮಗ

ಬಿಎಂಐಸಿಯ ಅಶೋಕ್ ಖೇಣಿಗೆ ಒಂದು ಅಂಗುಲ ರೈತರ ಭೂಮಿ [illegible] ಬೊಬ್ಬೆ ಹಾಕುತ್ತಿದ್ದ ಮಗ್ಗೆನ ಮಗ, ಈಗ ತಮ್ಮ ಕುಟುಂಬದವರೇ ಮಂಡ್ಯದ ರೈತರ ನೆಲನುಂಗಿ ಅವರನ್ನು ಬೀದಿಗೆ ತಳ್ಳುತ್ತಿದ್ದರೆ ನಾಪತ್ತೆಯಾಗಿದ್ದಾರೆ.

ಮಂಡ್ಯದಲ್ಲಿ ನಡೆದ ಸಭೆಯೊಂದರಲ್ಲಿ ಅಶೋಕ್ ಖೇಣಿ ನಮ್ಮ ರೈತರ ನೆಲ ನುಂಗುತ್ತಿದ್ದಾನೆಂದು ಗಳಗಳನೆ ಅತ್ತಿದ್ದ ದೇವೇಗೌಡರ ಕಣ್ಣೆದುರಿನಲ್ಲಿಯೇ ಅವರ ಮಕ್ಕಳು ಅಲ್ಲಿನ ರೈತರ ಭೂಮಿಯನ್ನು ಬರೆಸಿಕೊಳ್ಳುತ್ತಿದ್ದಾರೆ. ಇವರ ಕುಟುಂಬದ ನೆಲದಾಹಕ್ಕೆ ಕುಮಾರಣ್ಣನ ಸರ್ಕಾರದ ಅಷ್ಟೂ ಪೊಲೀಸರು ಬೆಂಗಾವಲಾಗಿದ್ದಾರೆ

ಇನ್ನು ಈ ಕುಟುಂಬದ ಭೂಮಿಯ ಆಸೆಯಿಂದ ತಮ್ಮ [illegible] ರೈತರನ್ನು ಕಾಯುವವರು ಯಾರು?

ಈ ಕುಟುಂಬದ ಭೂದಾಹಕ್ಕೆ [illegible]

[illegible]

–[illegible]ಗೌಡ

ಮೈಸೂರಿನ ಬ್ರಾಥಲ್ ಅಡ್ಡೆಗೆ ಪೊಲೀಸರೇ ರಕ್ಷಕರು

ಮೈಸೂರಿನ ಮೈಕಸುಬಿನ ಧಂದೆಯವರ ಲಕ್ಷು ಮರುಕಳಿಸಿದೆ. ಇಲ್ಲಿನ ಸೆಕ್ಸ್ ರ್ಯಾಕೆಟ್‌ನ ನಟೋರಿಯಸ್ ಕಿಂಗ್‌ಪಿನ್ ಸ್ಯಾಂಟ್ರೋ ರವಿ ಜೈಲಿನಿಂದ ಬಿಡುಗಡೆಯಾಗುತ್ತಿದ್ದಂತೆಯೇ ತನ್ನ ಹಳೇ ಚಾಳಿ ಆರಂಭಿಸಿದ್ದಾನೆ. ಮೈಸೂರಿನಲ್ಲಲ್ಲದೆ ರಾಜ್ಯದ ಇತರೆಡೆ ಬ್ರಾಥಲ್ ಕಸುಬಿಗೆ ತಲೆನೋವಾಗಿದ್ದ 'ಒಡನಾಡಿ' ಸಂಸ್ಥೆಯನ್ನೇ ಮುಗಿಸಲು ಸ್ಯಾಂಟ್ರೋ ರವಿ ಸ್ಕೆಚ್ ಹಾಕಿದ್ದು ಈತನ ಕುತಂತ್ರದಿಂದಲೇ ಒಡನಾಡಿಯ ಪರಶುರಾಂ ಮೇಲೆ ಇಲ್ಲಿನ ಪೊಲೀಸರು ಸುಳ್ಳು ಕೇಸ್ ದಾಖಲಿಸಿದ ಸತ್ಯ ಬಹಿರಂಗವಾಗಿದೆ.

ಸ್ಯಾಂಟ್ರೋ ರವಿ ಜೈಲಿನಿಂದ ಬಿಡುಗಡೆಯಾದ ಮರುಕ್ಷಣವೇ ಧಂದೆ ನಿಲ್ಲಿಸಿದ್ದವರೆಲ್ಲಾ ಈಗ ಗರಿಗರಿ ಬಟ್ಟೆ ಹಾಕಿಕೊಂಡು ಬೀದಿಗಿಳಿದಿದ್ದಾರೆ. ಕಳೆದ ವರ್ಷ ಒಡನಾಡಿ ಸಂಸ್ಥೆ ನಡೆಸಿದ ನಿರಂತರ ದಾಳಿಯಿಂದ ಜೈಲು ಸೇರಿ, ಹೊರಬಂದ ನಂತರ ಮೈಸೂರನ್ನೇ ಬಿಟ್ಟಿದ್ದ ಮೈಸೂರಿನ ಖತರ್‌ನಾಕ್ ಬ್ರಾಥಲ್ ಧಣಿಗಳಾದ, ಪೊಲೀಸ್ ಸುಬ್ಬಣ್ಣ, ಮಿಲಿಟರಿ ಭೀಮಯ್ಯ, ಟಿ.ಕೆ.ಲೇಔಟ್‌ನ ಪದ್ಮಕ್ಕ, ರಾಜೇಂದ್ರನಗರದ ಭಾರತಿ, ವಿಜಯನಗರದ ಮಲೆಯಾಳಿ ಲಿಲ್ಲಿ, ಮೊಬೈಲ್ ಚೂಡಾಮಣಿ ಮತ್ತೆ ಕಸುಬು ಆರಂಭಿಸಿದ್ದಾರೆ.

ಕಳೆದ ಒಂದು ವರ್ಷದಿಂದ ಸಂಪೂರ್ಣವಾಗಿ ಧಂದೆಗೆ ಗುಡ್‌ಬೈ ಹೇಳಿದ್ದ ಅಷ್ಟೂ ತಲೆ ಹಿಡುಕರು, ಈ ಬಾರಿ ಪೂರ್ವಸಿದ್ಧತೆಯೊಂದಿಗೆ ಫೀಲ್ಡಿಗಿಳಿದಿದ್ದಾರೆ. ಅವರಿಗೆಲ್ಲ ಗಾಡ್‌ಫಾದರ್‌ಗಳಾದ ದಫೇದಾರ್ ಮುತ್ತಣ್ಣ, ಸುಬ್ರಮಣಿಯವರ ಖಾಕಿ ಬೆಂಬಲ ಇದ್ದೇ ಇದೆ.

ಮೈಸೂರಿನ ಪೊಲೀಸರಿಗೂ ಅಲ್ಲಿನ ಮೈಕಸುಬಿನವರಿಗೂ ಹಿಂದಿನಿಂದಲೂ ಸಂಬಂಧಗಳಿವೆ. ಅಂತಹದೊಂದು ರಿಲೇಶನ್‌ಶಿಪ್ಪನ್ನು ಮೊದಲು ಹೊಂದಿದವನು ಈಗ ಸರಸ್ವತಿಪುರಂ ಸ್ಟೇಷನ್‌ನಲ್ಲಿರುವ ದಫೇದಾರ್ ಮುತ್ತಣ್ಣ, ಆನಂತರ ತನ್ನ ಮನೆಯಲ್ಲಿಯೇ ಧಂದೆ ನಡೆಸುವಾಗ ಸಿಕ್ಕಿಬಿದ್ದ ಸುಬ್ಬಣ್ಣ ವಾಲೆಂಟರಿ ನಿವೃತ್ತಿ ಪಡೆದು ಪೂರ್ಣವಾಗಿ ಧಂದೆಯಲ್ಲಿ ತೊಡಗಿಸಿಕೊಂಡರೆ, ಬ್ರಾಥಲ್ ಧಂದೆಯವರೊಂದಿಗಿನ ಮಂತ್ಲಿ ವಿಷಯದಲ್ಲಿಯೇ ಆಸಿಡ್ ಹಾಕಿಸಿಕೊಂಡ ಎ.ಎಸ್.ಐ. ಆಸಿಡ್ ಶ್ರೀನಿವಾಸನೂ ಈಗ ಸ್ವಯಂ ನಿವೃತ್ತಿ ಪಡೆದು ಇವರ ಬೆನ್ನಿಗೆ ನಿಂತಿದ್ದಾನೆ.



ಜಯಮ್ಮ (ಪೊಲೀಸ್ ಸುಬ್ಬಣ್ಣನ ಹೆಂಡತಿ)

ಹೀಗೆ ಪೊಲೀಸರ ಬೆಂಬಲದಿಂದಲೇ ಮೈಸೂರಿನಲ್ಲಿ ರಾಜಾರೋಷವಾಗಿ ಧಂದೆ ನಡೆಸುತ್ತಿದ್ದ ಇವರಿಗೆಲ್ಲ ಮೊದಲು ಪೆಟ್ಟು ಬಿದ್ದಿದ್ದೇ ಒಡನಾಡಿಯ ಪರಶುರಾಂ-ಸ್ಟ್ಯಾನ್ಲಿ ಜೋಡಿಯಿಂದ. ಬೀದಿಮಹಿಳೆಯರ ಪುನರ್ವಸತಿಗಾಗಿಯೇ ರೂಪುಗೊಂಡ ಒಡನಾಡಿ ಮೊದಲು ಕೈ ಹಾಕಿದ್ದೇ ಮೈಕಸುಬು ನಡೆಸುವ ಧಣಿಗಳ ಬಾಲ ಕತ್ತರಿಸಲು.

ಮೊದಲು ಸಿಕ್ಕವನು ಸ್ವಾಮಿ

ಮೈಸೂರಿನ ಸೆಕ್ಸ್ ರ್ಯಾಕೆಟ್‌ನಲ್ಲಿ ಮೊದಲು ಸಿಕ್ಕಿಬಿದ್ದವನು ಅಶೋಕಪುರಂನ ಸ್ವಾಮಿ ಎಂಬ ಆಸಾಮಿ. ಸಾರ್ವಜನಿಕವಾಗಿ ದಲಿತ ಮುಖಂಡನಂತೆ ಪೋಸು ಕೊಡುತ್ತಿದ್ದ ಈತ, ತನ್ನ ಹೆಂಡತಿ ಕೆ.ಆರ್. ನಗರದ ಲಕ್ಷ್ಮಿಯೊಡನೆ ಸೇರಿಕೊಂಡು ಅರವಿಂದನಗರದ ಮನೆಯೊಂದರಲ್ಲಿ ಧಂದೆ ಆರಂಭಿಸಿದ್ದ.

ಹೆಣ್ಣು ಮಕ್ಕಳನ್ನು ನಂಬಿಸಿ ವಿವಾಹವಾಗುತ್ತಿದ್ದ ಈತ ನಂತರ ಅವರನ್ನು ಕರೆದು ತಂದು ಅರವಿಂದ ನಗರದ ಅಡ್ಡೆಯಲ್ಲಿ ಧಂದೆಗೆ ಬಿಡುತ್ತಿದ್ದ. ಕಳೆದ ವರ್ಷ ಜುಲೈನಲ್ಲಿ ತನ್ನ ಮನೆಯಲ್ಲಿಯೇ 13 ಜನ ಹೆಣ್ಣು ಮಕ್ಕಳೊಂದಿಗೆ ಸಿಕ್ಕಿಬಿದ್ದು ಜೈಲು ಸೇರಿದ್ದ ಸ್ವಾಮಿ ಮತ್ತೆ ಈಗ ಮೈಸೂರಿನ ಬೀದಿಗಳಲ್ಲಿ ಕಾಣಿಸಿಕೊಳ್ಳುತ್ತಿರುವುದು ಮುಗ್ಧ ಹೆಣ್ಣುಮಕ್ಕಳ ಪಾಲಿಗಂತೂ ಜವರಾಯನೇ ಬಂದಂತಾಗಿದೆ.

ಪೊಲೀಸ್ ಸುಬ್ಬಣ್ಣನ ಅಡ್ಡೆಗಳು

ಜಲಪುರಿಯ ಪೊಲೀಸ್ ಕ್ವಾರ್ಟರ್ಸಿನಲ್ಲಿಯೇ ಧಂದೆ ನಡೆಸುವಾಗ ರೆಡ್‌ಹ್ಯಾಂಡಾಗಿ ಪೊಲೀಸರ ಕೈಗೆ ಸಿಕ್ಕಿಬಿದ್ದಿದ್ದ ದಫೇದಾರ್ ಸುಬ್ಬಣ್ಣ ಪತ್ನಿ ಜಯಮ್ಮ, ಮೈಸೂರಿನ ಪೊಲೀಸರ ಮಾನ ಕಳೆದದ್ದು ಹಳೆಯ ಸಂಗತಿ.

ಮೂರನ್ನು ಬಿಟ್ಟವರಿಗೆ... ಯಾರ ಹಂಗೇನು ಎಂಬಂತೆ ಮೂರು ತಿಂಗಳಲ್ಲಿಯೇ ಜೈಲಿನಿಂದ ಹೊರ ಬಂದ ಈ ಮಾಜಿ ಪೊಲೀಸು ಮತ್ತು ಆತನ ಪತ್ನಿ ಜಯಮ್ಮ ಮತ್ತೆ ಸದ್ದಿಲ್ಲದೆ ತಮ್ಮ ಧಂದೆಯನ್ನು ಆರಂಭಿಸಿದ್ದಾರೆ.

ಲಷ್ಕರ್ ಠಾಣೆಯಲ್ಲಿ ಸೇವೆ ಮಾಡುತ್ತಿದ್ದಾಗ ಗೋಲ್ಡ್ ಬಿಸ್ಕತ್ತಿನ ಸ್ಮಗ್ಲರ್‌ಗಳು ಪರಾರಿಯಾದರೆಂದು ಕತೆ ಕಟ್ಟಿ ಅವರನ್ನು ತನ್ನ ಮನೆಯಲ್ಲಿರಿಸಿಕೊಂಡು ಸಿಕ್ಕಿಬಿದ್ದು ಛೀಮಾರಿ ಹಾಕಿಸಿಕೊಂಡಿದ್ದ ಈತ, ತನ್ನ ಮಗಳಾದ ರಾಧಾಳನ್ನೇ ಧಂದೆಗಿಳಿಸಿದ ಪುಣ್ಯಾತ್ಮ.

ಅಪ್ಪನಿಂದಲೇ ಧಂದೆಗೆ ಇಳಿದ ರಾಧಾಳ ಕುಖ್ಯಾತಿ ಮೈಸೂರಿಗೆ ಸೀಮಿತವಾಗದೆ, ಪಕ್ಕದ ಕೇರಳ ಮುಖಾಂತರ ಕೊಲ್ಲಿ ರಾಷ್ಟ್ರಗಳಿಗೂ ಹಬ್ಬಿದೆ. ರಾಧಾಳ ಗಂಡ ಅಬೂಬಕರ್ ಕೇರಳದ ಮೋಸ್ಟ್ ವಾಂಟೆಡ್ ತಲೆಹಿಡುಕ, ಕೊಚ್ಚಿನ್‌ನಿಂದ ಕುವೈತ್ ವರೆಗೂ ನೆಟ್‌ವರ್ಕ್ಸ್ ಇಟ್ಟು ಕೊಂಡಿರುವ ಈತನ ಮೇಲೆ ಕೇರಳದ ವಿವಿಧ ಪೊಲೀಸ್ ಠಾಣೆಗಳಲ್ಲಿ 50ಕ್ಕೂ ಹೆಚ್ಚು ಕೇಸುಗಳಿದ್ದು, ಪೊಲೀಸರ ಬಂಧನದಿಂದ ತಲೆತಪ್ಪಿಸಿಕೊಂಡು ತಿರುಗುತ್ತಿದ್ದಾನೆ.



ಸ್ಯಾಂಟ್ರೋ ರವಿ ಮತ್ತು ಆತನ ಹೆಂಡತಿ

ಒಡನಾಡಿ ವಿರುದ್ಧ ಪಿತೂರಿ

ಮಂಗಳೂರು, ಕೊಡಗು, ಮೈಸೂರು ಸುತ್ತಮುತ್ತಲಿನ ಮುಗ್ಧ ಯುವತಿಯರನ್ನು ನಂಬಿಸಿ ಧಂದೆಗೆ ದೂಡುವ ಸುಬ್ಬಣ್ಣ ಕೆಲವು ಯುವತಿಯರನ್ನು ಅಳಿಯ ಹರಿಹರನ್ ಮೂಲಕ ಕೊಲ್ಲಿ ರಾಷ್ಟ್ರಗಳಿಗೂ ಸಾಗಿಸಿದ್ದಾನೆ. ಜೊತೆಗೆ ಪತ್ನಿ ಜಯಮ್ಮ ಚಲನ ಚಿತ್ರಗಳಿಗೆ ಎಕ್ಸ್‌ಟ್ರಾ ನಟಿಯರ ಸರಬರಾಜು ಧಂದೆಯನ್ನು ನಡೆಸುತ್ತಿದ್ದು ಎಕ್ಸ್‌ಟ್ರಾ ನಟಿಯರನ್ನು ಕಸುಬಿನಲ್ಲಿ ಬಳಸಿಕೊಳ್ಳುತ್ತಿದ್ದಾಳೆ.

ಸದ್ಯ ವಿಜಯನಗರ, ಹೆಬ್ಬಾಳ, ಮಂಚೇಗೌಡನ ಕೊಪ್ಪಲಿನಲ್ಲಿ ಮನೆ ಬಾಡಿಗೆ ಪಡೆದು ಧಂದೆ ನಡೆಸುತ್ತಿರುವ ಈತನ ಹಿಂದೆ ಮೈಸೂರಿನ ಅಷ್ಟೂ ಪೊಲೀಸರು ನಿಂತಿರುವುದು ಸುಬ್ಬಣ್ಣನ ಅಡ್ಡಕಸುಬಿನಿಂದ ಬರುವ ದುಡ್ಡಿನ ಅಮೇಧ್ಯ ತಿನ್ನಲು.


ಅವಳು ಮೊಬೈಲ್ ಚೂಡಾಮಣಿ

ಶಾರದಾದೇವಿನಗರದ ಚೂಡಾಮಣಿಯದು ಇಲ್ಲಿನ ಸೆಕ್ಸ್ ರ್ಯಾಕೆಟ್‌ನ ಪುರಾತನ ಹೆಸರು. 93ರಲ್ಲಿಯೇ ದುಬಾರಿ ಮೊಬೈಲ್ ಮೂಲಕವೇ ಧಂದೆ ನಡೆಸುತ್ತಿದ್ದ ಈಕೆ ಮೊಬೈಲ್ ಚೂಡಾಮಣಿಯೆಂದೇ ಫೀಲ್ಡಿನಲ್ಲಿ 'ಖ್ಯಾತಿ'.

ಮೈಸೂರಿನ ಮಾನಸಗಂಗೋತ್ರಿಯಲ್ಲಿ ಸಮಾಜ ಶಾಸ್ತ್ರದಲ್ಲಿ ಪಿ.ಜಿ. ಮಾಡಿರುವ ಈಕೆ, ಹಿಡಿದಿದ್ದು ಅಡ್ಡ ಕಸುಬಿ ಧಂದೆಯನ್ನು. ಪ್ರಾರಂಭದಲ್ಲಿ ಒಂಟಿಕೊಪ್ಪಲಿನಲ್ಲಿ ಮನೆ ಮಾಡಿಕೊಂಡು ವ್ಯವಹಾರ ನಡೆಸುತ್ತಿದ್ದ ಈಕೆಯನ್ನು ಅಲ್ಲಿನ ನಿವಾಸಿಗಳು ರಾತ್ರೋರಾತ್ರಿ ಮನೆ ಖಾಲಿ ಮಾಡಿಸಿದ್ದರು.

ನಂತರ ಶಾರದಾದೇವಿ ನಗರಕ್ಕೆ ವಾಸ್ತವ್ಯ ಬದಲಿಸಿದ ಚೂಡಾಮಣಿ ವಿಕ್ರಾಂತ್ ಕಾರ್ಮಿಕ ಸಂಘದ ಮುಖಂಡ ಮರಿಸ್ವಾಮಿ ಎಂಬುವವನನ್ನು ಬೆನ್ನಿಗೆ ಕಟ್ಟಿಕೊಂಡು ಭರ್ಜರಿಯಾಗಿಯೇ ವ್ಯವಹಾರ ನಡೆಸುತ್ತಿದ್ದಾಳೆ.

ಒಡನಾಡಿಯ ದಾಳಿಯಿಂದ ಕೆಲ ದಿನಗಳ ಮಟ್ಟಿಗೆ ಕಸುಬು ನಿಲ್ಲಿಸಿದ್ದ ಚೂಡಾಮಣಿ, ಈಗ ಸ್ಯಾಂಟ್ರೋ ರವಿ ಬಿಡುಗಡೆಯಾಗುತ್ತಿದ್ದಂತೆಯೇ ತನ್ನ ಐದು ಜನ ಹೆಣ್ಣುಮಕ್ಕಳನ್ನು ಧಂದೆಗಿಳಿಸಿ ಮೈಸೂರಿನ ಮರ್ಯಾದಸ್ಥ ನಾಗರಿಕರನ್ನು ದಾರಿ ತಪ್ಪಿಸುತ್ತಿದ್ದಾಳೆ.



ಮೊಬೈಲ್ ಚೂಡಾಮಣಿ

ಹೈ-ಟೆಕ್ ಲಿಲ್ಲಿ ಪ್ರತ್ಯಕ್ಷ!

ಮೈಸೂರಿನ ಬ್ರಾಥಲ್ ಲೋಕಕ್ಕೆ ಹೈ-ಟೆಕ್ ಗೆಟಪ್ಪು ತಂದುಕೊಟ್ಟ ಲಿಲ್ಲಿ, ಮತ್ತೆ ವಿಜಯನಗರದಲ್ಲಿ ತನ್ನ ಅಡ್ಡೆ ತೆರೆದಿದ್ದಾಳೆ. ಮೂಲತಃ ಕೇರಳದ ತಿರುವನಂತಪುರ ಜಿಲ್ಲೆಯ ಲಿಲ್ಲಿ ಅಲ್ಲಿನ ಪೊಲೀಸರ ಕಿರುಕುಳ ತಾಳಲಾರದೆ ವಲಸೆ ಬಂದಿದ್ದು ಮೈಸೂರಿಗೆ.

ಇಲ್ಲಿನ ಪ್ರತಿಷ್ಠಿತ ಬಡಾವಣೆ ವಿಜಯನಗರದಲ್ಲಿ ಬೃಹತ್ ಬಂಗಲೆಯನ್ನು ಬಾಡಿಗೆ ಪಡೆದು ಧಂದೆ ನಡೆಸುವ ಲಿಲ್ಲಿಯ ಮನೆಗೆ ಹೋಗಬೇಕಾದರೆ ಜೇಬಿನ ತುಂಬಾ ನೋಟಿನ ಕಂತೆಯಂತೂ ಇರಲೇಬೇಕು.

ದೂರದ ಬಾಂಬೆ, ಕಲ್ಕತ್ತಾ, ದೆಹಲಿ ಹಾಗೂ ಕೇರಳದಿಂದ ತಿಂಗಳ ವೇತನದ ಮೇಲೆ ಯುವತಿಯರನ್ನು ಕರೆತರುವ ಲಿಲ್ಲಿ ತನಗಿರುವ ಉನ್ನತ ಮಟ್ಟದ ಪೊಲೀಸ್ ಕಾಂಟ್ಯಾಕ್ಟಿನಿಂದಲೇ ಕಸುಬು ನಡೆಸುತ್ತಿದ್ದಾಳೆ.



ಲಿಲ್ಲಿ

ಈಕೆಯ ಮನೆಗೆ ಗಿರಾಕಿಯಾಗಿ ಬರುವವರು ಪ್ರತಿಷ್ಠಿತ ವ್ಯಕ್ತಿಗಳೇ. ಮೈಸೂರಿನ ಉದ್ಯಮಿಗಳು, ಗಣ್ಯರು, ರಾಜಕಾರಣಿಗಳು ಅಷ್ಟೇ ಅಲ್ಲದೇ ಕೆಲವು ಹಿರಿಯ ಪೊಲೀಸ್ ಅಧಿಕಾರಿಗಳು ಲಿಲ್ಲಿ ಅಂತಃಪುರದ ಖಾಯಂ ಗಿರಾಕಿಗಳಾಗಿದ್ದು, ಈ ಅಧಿಕಾರಿಗಳ ಬೆಂಬಲವೇ ಲಿಲ್ಲಿ ಧಂದೆಗೆ ಬೆನ್ನೆಲುಬಾಗಿದೆ. ಮನೆಗೆ ಬರುವ ಗಿರಾಕಿಗಳಿಗೆ ವಿದೇಶಿ ಮದ್ಯ, ಹವಾ ನಿಯಂತ್ರಿತ ಕೋಣೆಯಂತಹ ಹೈಟೆಕ್ ಸೌಲಭ್ಯ ಒದಗಿಸುವ ಈಕೆಯ ಆಸ್ತಿ ಈಗ ಕೋಟಿಗಳಿಗೂ ಮೀರುತ್ತಿರುವುದು ಸುಳ್ಳಲ್ಲ...

ಇಷ್ಟಲ್ಲದೆ ಮಿಲಿಟರಿ ಭೀಮಯ್ಯ, ರಾಜೇಂದ್ರ ನಗರದ ಭಾರತಿ, ವಿದ್ಯಾರಣ್ಯಪುರಂನ ಭಾಗ್ಯ ಕ್ಯಾತಮಾರನಹಳ್ಳಿಯ ದೊರೈ, ಈತನ ಹೆಂಡತಿ ಚಂದ್ರಮ್ಮ, ಕುವೆಂಪುನಗರದ ಸಾಗರ್ ಇವರೆಲ್ಲಾ ಈಗ ಮೈ ಚಳಿ ಬಿಟ್ಟು ಧಂದೆ ಆರಂಭ ಸಿದ್ದಾರೆ.

ವಿಜಯನ್ ಪ್ರತ್ಯಕ್ಷ

ಮೈಸೂರು ಸುತ್ತಲಿನ ಹಳ್ಳಿಗಳ ಹೆಣ್ಣುಗಳನ್ನು ಅಪಹರಿಸಿ ತಮಿಳುನಾಡು, ಕೇರಳದ ಫಾಲ್ಘಾಟ್, ಎರ್ನಾಕುಲಂ, ಕೊಚ್ಚಿನ್‌ನಲ್ಲಿ ಧಂದೆಗೆ ದೂಡುತ್ತಿದ್ದ ಅಂತರರಾಜ್ಯ ಸೆಕ್ಸ್ ರ್ಯಾಕೆಟ್‌ನ ಕಿಂಗ್‌ಪಿನ್ ವಿಜಯನ್ ಕೂಡ ಈಗ ಮೈಸೂರಿನ ಸುತ್ತಮುತ್ತ ಕಾಣಿಸಿಕೊಂಡಿ ದ್ದಾನೆ.

ಸ್ಯಾಂಟ್ರೋ ರವಿ ಜೈಲು ಸೇರಿದ ನಂತರ ತಲೆಮರೆಸಿಕೊಂಡಿದ್ದ ವಿಜಯನ್ ಈಗ ಪ್ರತ್ಯಕ್ಷವಾಗಿರುವುದು, ಈ ರ್ಯಾಕೆಟ್‌ನಿಂದ ಬಚಾವಾಗಿ ಹೊರಬಂದಿದ್ದ ಯುವತಿಯರಿಗೆ ಆತಂಕ ತಂದಿಟ್ಟಿದೆ. ತನ್ನ ಸಹಚರರ ಮೂಲಕ ಎಲ್ಲಿ ವಿಜಯನ್ ಮತ್ತು ಸ್ಯಾಂಟ್ರೋ ರವಿ ತಮಗೆ ಕಾಟ ಕೊಡುತ್ತಾರೋ ಎಂಬುದು ಈ ಯುವತಿಯರ ಅಳಲು.



ಪೊಲೀಸ್ ಕಮಿಷನರ್ ಪ್ರವೀಣ್ ಸೂದ್

ಲಾಡ್ಜುಗಳ ಕರ್ಮಕತೆ

ಇನ್ನು ಮೈಸೂರಿನ ಲಾಡ್ಜುಗಳದಂತೂ ಸಂಪೂರ್ಣ ಮೈಧಂದೆಯ ವ್ಯವಹಾರವೇ. ಇಲ್ಲಿನ ದೇವರಾಜ ಅರಸು ರಸ್ತೆ, ಶಿವರಾಂ ಪೇಟೆ, ಸಂತೆಪೇಟೆಯಲ್ಲಿರುವ 40ಕ್ಕೂ ಹೆಚ್ಚು ಲಾಡ್ಜುಗಳಲ್ಲಿ ಪೊಲೀಸರ ರಕ್ಷಣೆಯಿಂದಲೇ ಮಾಂಸದ ದಂಧೆ ಅಡೆತಡೆಯಿಲ್ಲದೆ ನಡೆಯುತ್ತಿದೆ. ಸುವಿಯಾ, ನೂತನ, ಉಮಾಶಂಕರ, ಕಲ್ಪನಾ, ಹರಿನಿವಾಸ್ ಲಾಡ್ಜುಗಳ ಮಾಲೀಕರಂತೂ ನೇರವಾಗಿ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಮಂತ್ಲಿ ಫಿಕ್ಸ್ ಮಾಡಿಕೊಂಡು ಧಂದೆ ನಡೆಸುತ್ತಿದ್ದಾರೆ.

ಲಕ್ಷ್ಮೀಸಾಗರ ಸ್ವಾಮಿಗೌಡ

ಎಚ್.ಐ.ವಿ ಗ್ಯಾರಂಟಿ

ಇವತ್ತೂ ಮೈಸೂರಿನಲ್ಲಿ ಕಸುಬು ಮಾಡುತ್ತಿರುವವರಲ್ಲಿ ಹೆಚ್ಚಿನ ಯುವತಿಯರು, ದೂರದ ಕೊಲ್ಕತ್ತಾ, ದೆಹಲಿ, ಮುಂಬೈನ ರೆಡ್‌ಲೈಟ್ ಏರಿಯಾಗಳಲ್ಲಿ ಬಳಸಲ್ಪಟ್ಟವರು. ಅಲ್ಲಿಂದಲೇ ಮೈ-ತುಂಬಾ ಲೈಂಗಿಕ ರೋಗಗಳ ಸರಕು ತುಂಬಿಕೊಂಡು ಬಂದಿರುವ ಈ ನತದೃಷ್ಟರು ಈಗ ಅದನ್ನು ಮೈಸೂರಿನ ನಾಗರಿಕರಿಗೂ ಹಂಚುತ್ತಿದ್ದಾರೆ. ಪರಿಸ್ಥಿತಿ ಹೀಗೇ ಮುಂದುವರೆದರೆ ಸಾಂಸ್ಕೃತಿಕ ರಾಜಧಾನಿ ಲೈಂಗಿಕ ರೋಗಗಳ ನಗರವಾಗುವುದು ಗ್ಯಾರಂಟಿ.

ಮೈಸೂರಿನ ಕಮಿಷನರ್ ಪ್ರವೀಣ್ ಸೂದ್‌ರಿಗೆ 'ಲಂಕೇಶ್' ಅಲ್ಲಿನ ಬ್ರಾಥಲ್ ಅಡ್ಡೆಗಳ ಬಗ್ಗೆ ನೀಡುತ್ತಿರುವ ಸ್ಯಾಂಪಲ್ ಇದು. ಈಗಲಾದರೂ ಕಮಿಷನರ್ ಪ್ರವೀಣ್ ಸೂದ್, ಈ ಸಮಸ್ಯೆ ನಿವಾರಣೆಗೆ ಶ್ರಮಿಸುತ್ತಿರುವ ಒಡನಾಡಿಯನ್ನು ಟಾರ್ಗೆಟ್ ಮಾಡುವ ಬದಲು ನಟೋರಿಯಸ್ ಪಿಂಪ್ ಸ್ಯಾಂಟ್ರೋ ರವಿ, ಆತನ ಹಿಂದಿರುವ ಪೊಲೀಸ್ ಅಧಿಕಾರಿಗಳನ್ನು ಒಳಗೆ ಕಳಿಸಬೇಕಿದೆ.

ನೀರಿಲ್ಲದ ನಾರಾಯಣಪುರ ನಾಲೆ

ರೊಕ್ಕ ಹರಿಯಿತು ಪಕ್ಕಾ ಕಳ್ಳರೆಡೆಗ!!

ರಾಯಚೂರು

ಕೃಷ್ಣೆಯೇ ಬೆಚ್ಚಿ ಬಿದ್ದಿದ್ದಾಳೆ!

ನಾಲೆಯಲ್ಲಿ ನೀರು ಹರಿಯುತ್ತಿಲ್ಲ... ಇದು ನಾರಾಯಣಪುರ ಬಲದಂಡೆ ಕಾಲುವೆಯ ಕತೆ. ಈ ನಾಲೆಯಲ್ಲಿ ಆ ಕಾಲದಿಂದಲೂ ರೊಕ್ಕ ಹರಿಯುತ್ತಿದೆ. ಆ ರೊಕ್ಕ ಹೈದರಾಬಾದ್ ಕರ್ನಾಟಕದ ಎಲ್ಲ ಪಾರ್ಟಿಗಳ ಬಹುತೇಕ ರಾಜಕಾರಣಿಗಳು, ಅವರ ಸಂಬಂಧಿಗಳು ಅಥವಾ ಬೇನಾಮಿಗಳ ಜೇಬು ಸೇರುತ್ತಿದೆ. ಜೇಬಿನಿಂದ ಉಕ್ಕಿ ಹರಿದು ಮನೆಯೊಳಗಿನ ತಿಜೋರಿ ಸೇರುತ್ತಿದೆ.

ನಾರಾಯಣಪುರ ಎಡದಂಡೆ ನಾಲೆಯಲ್ಲಿ ಅದೆಂದಿನಿಂದಲೋ ನೀರು ಹರಿಯುತ್ತಿದೆ. ಎಲ್ಲ ಭ್ರಷ್ಟಾತಿಭ್ರಷ್ಟರನ್ನು ದಾಟಿಕೊಂಡು ಗುಲ್ಬರ್ಗಾ ಭಾಗದ ರೈತರ ಹೊಲಗಳಿಗೆ ತಲುಪಿ ಒಂದಿಷ್ಟು ಹಸಿರು ಮೂಡಿಸಿದೆ.


ಆದರೆ ಇತ್ತ ರಾಯಚೂರು ಭಾಗಕ್ಕೆ ನೀರುಣಿಸಬೇಕಾದ ಬಲದಂಡೆ ಕಾಲುವೆಯ ನಿರ್ಮಾಣ ಕಾರ್ಯ ಮುಗಿಯುವುದೇ ಇಲ್ಲವೇನೋ? ಇಲ್ಲಿವರೆಗೆ ನಿರ್ಮಾಣಗೊಂಡ ಕಾಲುವೆಗಳು ಒಡೆಯುವುದು, ನಂತರ ರಿಪೇರಿ ಎಂಬ ತ್ಯಾಪೆ ಕೆಲಸ ನಡೆಯುವುದು ಕಾಮನ್ ಆಗಿ ಹೋಗಿದೆ. ಇದು ಗಿನ್ನಿಸ್ ದಾಖಲೆಯೂ ಹೌದು!

ನಾಲೆಯಲ್ಲಿ ಪುಡಾರಿ, ಅಧಿಕಾರಿ ದೋಸ್ತಿ


ದೇವದುರ್ಗ, ಲಿಂಗಸ್ಗೂರು ತಾಲ್ಲೂಕುಗಳ ಬಹುತೇಕ ರಾಜಕಾರಣಿಗಳ ಮಕ್ಕಳು, ಸಂಬಂಧಿಕರು, ಹಿಂಬಾಲಕರೆಲ್ಲ NRBC (ನಾರಾಯಣಪುರ ಬಲದಂಡೆ ಕಾಲುವೆ)ಯಲ್ಲಿ ಗುತ್ತಿಗೆದಾರರೇ. ಅಧಿಕೃತ ಲೈಸೆನ್ಸುಗಳು, ಬೇನಾಮಿ ಲೈಸೆನ್ಸುಗಳು ಎಲ್ಲವೂ ಉಂಟಲ್ಲಿ. ಅಧಿಕಾರಿಗಳು, ಇಂಜಿನಿಯರ್‌ಗಳೇನು ಕಡಿಮೆನಾ? ಅವರು ಗುತ್ತಿಗೆಗೆ ಮುತ್ತಿಗೆ ಹಾಕಿ ಮುಕ್ಕುತ್ತಲೇ ಇದ್ದಾರೆ.

ಸುಮಾರು 10 ಲಕ್ಷ 50 ಸಾವಿರ ಎಕರೆ ಜಮೀನಿಗೆ ನೀರುಣಿಸುವ ಉದ್ದೇಶದಿಂದ ಪ್ರಾರಂಭವಾದ ಕೃಷ್ಣಾ ಮೇಲ್ದಂಡೆ ಯೋಜನೆಗೆ ಈವರೆಗೆ ಒಟ್ಟಾರೆ ಸುಮಾರು 17,300 ಕೋಟಿ ಹರಿದಿದೆ. ಉದ್ದೇಶಿತ ಎಲ್ಲ ಜಮೀನುಗಳಿಗೂ ನೀರು ಹರಿಯುವುದಾ? ಎಂಬುದೇ ಈಗ ಯಕ್ಷ ಪ್ರಶ್ನೆಯಾಗಿದೆ.

ಲಿಂಗಸ್ಗೂರು ಶಾಸಕ, ಮಾಜಿ ಮಂತ್ರಿ ಅಮರೇಗೌಡ ಬಯ್ಯಾಪುರನ ಸಹೋದರ ಅನ್ನದಾನಗೌಡ ಬಯ್ಯಾಪುರನ ಪುತ್ರ ಶರಣಗೌಡ ಇಲ್ಲಿ ಅನಾದಿ ಕಾಲದಿಂದಲೂ ಪ್ರಥಮ ದರ್ಜೆ ಗುತ್ತಿಗೆದಾರನೇ... ಮಾಡೋದೆಲ್ಲ ಮೂರನೆ ದರ್ಜೆ ಕಳಪೆ ಕೆಲಸಗಳೇ! ಬಯ್ಯಾಪುರನ ಬೆಂಬಲಿಗ ಅಮರಗುಂಡಪ್ಪ ಮೇಟಿಯೂ ನಾಲೆಯಲ್ಲಿ ನುಂಗುತ್ತಲೇ ಇದ್ದಾನೆ. ಕೇಂದ್ರ ಮಾಜಿ ಮಂತ್ರಿ ಬಸವರಾಜ ಪಾಟೀಲ್ ಅನ್ವರಿ ಮತ್ತು ಮಾಜಿ ಎಂಎಲ್‌ಸಿ ದೇವದುರ್ಗದ ಬಸವರಾಜ್ ಪಾಟೀಲ್ ಇಟಗಿಯಂತವರು ಕಾಣದ ಕೈಗಳ ಮೂಲಕ NRBCಗೆ ತೂತು ಕೊರೆಯುವುದು ನಡೆದೇ ಇದೆ. ಕಳೆದ ಬಾರಿ ಮಾನಪ್ಪ ವಜ್ಜಲ ಎಂಬ ಗುತ್ತಿಗೆದಾರ ಜೆಡಿಎಸ್ ಟಿಕೆಟ್ ಖರೀದಿಗೆ ವಿಫಲ ಯತ್ನ ಮಾಡಿ, ಪಕ್ಷೇತರನಾಗಿ ನಿಂತು ಬಕ್ಕ ಬಾರಲು ಬಿದ್ದ. ಪಟ್ಟಂತ ಎದ್ದವನೇ ನಾಲೆಗೆ ಮತ್ತೆ ಕನ್ನ ಹಾಕೇಬಿಟ್ಟ.



ನಾರಾಯಣಪುರ ಬಲದಂಡೆ ನಾಲೆ ಒಡೆದಿರುವುದು


ಸಚಿವ ಆಲ್ಕೋಡ್ ಹನುಮಂತಪ್ಪ

ಮುಖ್ಯ ಕಾಲುವೆ ನಿರ್ಮಾಣದಲ್ಲಿ ಎಂಟು ಗಂಟುಕಳ್ಳ ಬಕಾಸುರರು, ಉಪ ಕಾಲುವೆ ನಿರ್ಮಾಣದಲ್ಲಿ 40 ಉಪದ್ವ್ಯಾಪಿ ಗುತ್ತಿಗೆದಾರರು, ಹೊಲಗಾಲುವೆಗಳ ನಿರ್ಮಾಣದಲ್ಲಿ (ನಿಮ್ಮ ಉಸಿರು ಗಟ್ಟಿ ಇರಲಿ) ಬರೋಬ್ಬರಿ 1230 ಛೋಟಾ ಚೋರರು ಕೆಲಸ ಮಾಡಿದ್ದಾರಂತೆ. ಇವರೆಲ್ಲ ಒಂದಿಲ್ಲೊಂದು ಪಾರ್ಟಿಯ ನಾಯಕರು ಅಥವಾ ಅವರ ಬಾಲಗಳು.

NRBC ಯಲ್ಲಿ ಶೇ. 35 ರಷ್ಟು ಕಾಮಗಾರಿ ಇನ್ನೂ ಬಾಕಿ ಇದೆ ಎನ್ನಲಾಗಿದ್ದು, ಶೇ. 10 ರಷ್ಟು ಮಾತ್ರ ಗುಣಮಟ್ಟದ ಕೆಲಸವಾಗಿದೆ.

ರೈತಸಂಘ ಗುಡುಗು, ಆಲ್ಕೋಡ್ ನಡುಗು

ಆರ್. ಮಾನಸಯ್ಯ ನೇತೃತ್ವದ ಕೆ.ಆರ್.ಎಸ್. (ಕರ್ನಾಟಕ ರೈತ ಸಂಘ) ಹೊಲಗಾಲುವೆಗಳ ಉಸ್ತುವಾರಿಯ ಕಾರ್ಯನಿರ್ವಾಹಕ ಅಭಿಯಂತರ ಶಂಭಯ್ಯನನ್ನು ಕರೆದೊಯ್ದು ಗುಜಾರಗಳಂತಿರುವ ಕಾಲುವೆಗಳನ್ನು ತೋರಿಸಿದೆ. ಆ ಸಂದರ್ಭದಲ್ಲಿ ಗುತ್ತಿಗೆದಾರರಿಗೆ ನೋಟೀಸ್ ನೀಡುವುದಾಗಿ ಹೇಳಿದ ಶಂಭಯ್ಯ ಈಗ ಆಲ್ಕೋಡ್ ಮತ್ತು ಇತರ ಎಲ್ಲ ಪಕ್ಷಗಳ ಪುಡಾರಿಗಳ ಒತ್ತಡಕ್ಕೆ ಮಣಿದು ಗಪ್‌ಚುಪ್ ಆಗಿದ್ದಾನೆ.

ತಾನು ಶಾಸಕನಾದ ನಂತರ ನಾಲೆಗೆ ಸಂಬಂಧಿಸಿದಂತೆ ಯಾವುದೇ ಕಳಪೆ ಕಾಮಗಾರಿಯಾಗಿಲ್ಲ ಎಂದು ಬೊಬ್ಬೆ ಹೊಡೆದ ಸಚಿವ ಆಲ್ಕೋಡ್ ಹನುಮಂತಪ್ಪ ನಂತರ ಒಂದೇ ದಿನಕ್ಕೆ ಬಾಯಿ ಬಂದ್ ಮಾಡಿಕೊಂಡ. ಕಾರಣ ಉಪಕಾಲುವೆಗಳಾದ 15,16,17,18 ರಲ್ಲಿನ ಕಾಮಗಾರಿಗಳು ಆಲ್ಕೋಡ್ ಶಾಸಕನಾದ ಮೇಲೆಯೇ ನಡೆದಿದ್ದು, ಅವೆಲ್ಲ ಕಳಪೆಯೇ ಆಗಿವೆ.

ಜುಲೈ 29 ರಂದು ಬೃಹತ್ ರೈತಸಭೆ ನಡೆಸಿದ ಕೆ.ಆರ್.ಎಸ್. ನಾಯಕರು ಕೆಬಿಜೆಎನ್‌ಎಲ್‌ನ ಚೀಫ್ ಇಂಜಿನಿಯರ್ ಬಿ.ಬಿ. ರಾಂಪುರೆ, ಕಾರ್ಯನಿರ್ವಾಹಕ ಅಭಿಯಂತರ ಅರವಿಂದ ಪ್ರಕಾಶ್ ಮೇಟಿಯ ವಿರುದ್ಧ ಟೆಂಡರ್ ಪದ್ಧತಿಯಲ್ಲಿ ಗೋಲ್‌ಮಾಲ್ ಮಾಡಿದ ಆರೋಪದ ಮೊಕದ್ದಮೆ ಹೂಡಿದ್ದಾರೆ. ಲಿಂಗಸ್ಗೂರು, ದೇವದುರ್ಗ, ರಾಯಚೂರು ತಾಲ್ಲೂಕುಗಳ ರೈತರ ಜಮೀನಿಗೆ ಕೃಷ್ಣೆ ಹರಿಯುವಳೆ?

-ವರದಿಗಾರ

ರಾಜಕೀಯದ ಚಕ್ರವ್ಯೂಹದಲ್ಲಿ ಸಿಕ್ಕಿಬಿದ್ದ ಅಭಿಮನ್ಯು!

ಕೊಪ್ಪಳ

ಬಹುಶಃ ಕೊಪ್ಪಳ ಜಿಲ್ಲೆಯ ರಾಜಕೀಯ ಇತಿಹಾಸದಲ್ಲಿ ಸಂಗಣ್ಣ ಕರಡಿಗೆ ಬಂದಿರುವ ಡೋಲಾಯಮಾನ ಸ್ಥಿತಿ ಹಿಂದಿನ ಯಾವ ರಾಜಕಾರಣಿಗೂ ಬಂದಿರಲಿಕ್ಕಿಲ್ಲ!

ಸತತ ಎರಡು ಬಾರಿ ಗೆದ್ದು, ಬಿಜೆಪಿಗೆ ಹೋಗಿ ಲಗಾಟ ಹೊಡೆದು, ಜೆಡಿಎಸ್‌ಗೆ ಬಂದು... ಈಗ ಮತ್ತೆ ಶಾಸಕನಾಗಬೇಕೆಂದರೆ ಸಂಗಣ್ಣ ಕರಡಿಗೆ ಅನ್ಸಾರಿಯೇ ದೊಡ್ಡ ಅಡ್ಡಗಂಟಾಗುವ ಲಕ್ಷಣ ಇವೆ. ಇನ್ನೊಂದು ಕಡೆ ಕಾಂಗ್ರೆಸ್ ಚಿಗಿಯುತ್ತಿದೆ. ಕುಮಾರಸ್ವಾಮಿಯ ಗಣಿಕಪ್ಪ ವಿವಾದ ಸದ್ದಿಲ್ಲದೇ ಕರಗುತ್ತಿರುವ ತನ್ನ ಜನಪ್ರಿಯತೆ, ಸಿದ್ದು ಆಗಮನದಿಂದ ಹೊಸ ಹುರುಪಿನಿಂದ ಕಂಗೊಳಿಸುತ್ತಿರುವ ಕಾಂಗ್ರೆಸ್, ಇವೆಲ್ಲವೂ ಸಂಗಣ್ಣನ ಮುಖದ ಮೇಲಿನ ಆತಂಕದ ಗೆರೆಗಳಿಗೆ ಕಾರಣ.

ಒಂಬತ್ತು ತಿಂಗಳು ಸೋಲಿನಿಂದ ಚೇತರಿಸಿಕೊಂಡು, ಕೊಪ್ಪಳದ ಬಯಲು ರಂಗಮಂದಿರದಲ್ಲಿ ಅನಂತಕುಮಾರ್‌ನನ್ನು ಅಪ್ಪಿಕೊಂಡು, ದೇವೇಗೌಡರನ್ನು ಹಿಗ್ಗಾ-ಮುಗ್ಗಾ ಬೈದಿದ್ದ ಸಂಗಣ್ಣ ನಂತರ ಅದೇ ಗೌಡರ ದಳವನ್ನು ಸಿದ್ಧಾಂತ ರಹಿತವಾಗಿ ಸೇರಿದಾಗ ಅವರದೇ ಬಾಯಲ್ಲಿ ಗೌಡರು ರೈತೋದ್ಧಾರಕ! ಜೆಡಿಎಸ್ ಸೇರಿದ ಕೆಲ ತಿಂಗಳಲ್ಲೇ ಸಿದ್ದು ಜೊತೆ ನಿರ್ಗಮಿಸಿದ ಹನುಮಂತಪ್ಪ ಅಂಗಡಿಯಿಂದ ಖಾಲಿಯಾದ ಜಿಲ್ಲಾಧ್ಯಕ್ಷ ಜಾಗಕ್ಕೆ ಎಂ.ವಿ. ಪಾಟೀಲ್, ಕೆ. ಶರಣಪ್ಪರನ್ನು ಓವರ್‌ಟೇಕ್ ಮಾಡಿ ಕುಂತುಬಿಟ್ಟರು. ಮಂತ್ರಿ ಅನ್ಸಾರಿಯೊಂದಿಗೆ ಮಾಡಿಕೊಂಡ ಕಿರಿಕ್ಕು ಯಾವ ಮಟ್ಟಕ್ಕೆ ಹೋಯಿತೆಂದರೆ ಎಲ್ಲಿಯೂ ಸಂಗಣ್ಣನ ಆಟವೇ ನಡೆಯದಂತಹ ಸ್ಥಿತಿಗೆ ಬಂದು ಬಿಟ್ಟಿತು. ಅದೇ ಹೊತ್ತಿಗೆ ರಾಜೀನಾಮೆ ಕೊಟ್ಟು ಪಕ್ಷದ [illegible] ಅನಾಹುತಕಾರಿ [illegible]ಮಾಡುವುದನ್ನು ಸಂಗಣ್ಣನಿಗೆ ಯಾರು ಹೇಳಿಕೊಟ್ಟರೋ ಗೊತ್ತಿಲ್ಲ. 'ಅನ್ಸಾರಿ ಜಿಲ್ಲೆಯ ಅಭಿವೃದ್ಧಿ ಮಾಡ್ತಿಲ್ಲ, ಅದಕ್ಕೆ ನಾನು ಜಿಲ್ಲಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡ್ತೀನಿ' ಅಂತ ಬರಬರನೆ ಬರೆದು ಕಳಿಸಿಬಿಟ್ಟರು. ಇವತ್ತಿಗೂ ರಾಜ್ಯಾಧ್ಯಕ್ಷ ಎಂ.ಪಿ. ಪ್ರಕಾಶ್ ರಾಜೀನಾಮೆ ಪತ್ರ ಬಂದೇ ಇಲ್ಲ ಎನ್ನುತ್ತಿದ್ದಾರೆ. ಈ ಬಾರಿ ಮತ್ತೆ ಪಕ್ಷೇತರನಾಗಿ ಸ್ಪರ್ಧಿಸುವ ಆಸೆ ಇದೆ [illegible] ಅವರದೇ ಬಳಗದಿಂದ ಬಂದಿರುವ ಸುದ್ದಿ. [illegible], ಅಂದು ಅಭಿವೃದ್ಧಿಗಾಗಿ ಪಕ್ಷ, ಇಂದು ಅಧಿಕಾರಕ್ಕಾಗಿ [illegible] ಅಷ್ಟೇ.'


ಸಂಗಣ್ಣ ಕರಡಿ

ತಾಲ್ಲೂಕಿನ ಒಂದೊಂದು ಹೋಬಳಿಯಲ್ಲಿ ಕಾಂಗ್ರೆಸ್‌ನ ಜಿಲ್ಲಾ ಪಂಚಾಯ್ತಿ ಸದಸ್ಯರು ಭದ್ರವಾಗಿ ನೆಲೆ ಊರುತ್ತಿದ್ದಾರೆ. ಸಂಗಣ್ಣನ ನಿರ್ಲಕ್ಷ್ಯಕ್ಕೆ ಬೇಸತ್ತು ಹೊರಬಂದವರು ಹಲವಾರು ಜನ.

ಅಣ್ಣನಿಗೆ ಟಾಟಾ ಮಾಡಿದವರು!

ಮೂರು ವರ್ಷಗಳ ಹಿಂದೆ ತುಂಬಿ ತುಳುಕುತ್ತಿದ್ದ ಸಂಗಣ್ಣ ಕ್ಯಾಂಪ್ ಇವತ್ತು ಅರ್ಧದಷ್ಟು ಖಾಲಿ ಖಾಲಿ. ಅದಕ್ಕೆ ಸಂಗಣ್ಣ ಕಾರ್ಯಕರ್ತರ ಬಗ್ಗೆ ಹೊಂದಿರುವ ನೀತಿಯೇ ಕಾರಣ. ಕೊಪ್ಪಳದಲ್ಲಿ ಶಾಸಕರಾದವರೆಲ್ಲಾ ಕಾರ್ಯಕರ್ತರಿಂದ, ಬೆಂಬಲಿಗರಿಂದ ಸರ್, ಸಾಹೇಬರು, ಧಣಿ ಅಂತ ಅನ್ನಿಸಿಕೊಂಡರೆ ಸಂಗಣ್ಣ ಮಾತ್ರ ಕಾರ್ಯಕರ್ತರಿಗೆ 'ಅಣ್ಣ'ನಾಗಿದ್ದ. ತತ್ವ-ಸಿದ್ಧಾಂತವಿಲ್ಲದ ರಾಜಕಾರಣದಿಂದ ದೂರ ಸರಿದವರೆಂದರೆ ಈಗ ಕಾಂಗ್ರೆಸ್‌ನಿಂದ ಜಿಲ್ಲಾ ಪಂಚಾಯ್ತಿ ಸದಸ್ಯರಾಗಿರುವ ಮಾದಿನೂರು ಈಶಪ್ಪ, ಅಮರೇಶ ಹೊಸಮನಿ, ಸಂಗಮೇಶ ಬಾದಲಾಡಗಿ, ಮಲ್ಲಣ್ಣ ಪಟ್ಟಣಶೆಟ್ಟಿ, ಶೇಖಪ್ಪ ಲಕ್ಷಾಣಿ, ಶ್ರೀಶೈಲಪ್ಪ ಕನಕಗಿರಿ, ಮೆತಗಲ್ ಈಶಪ್ಪ, ನಗರಸಭೆ ಮಾಜಿ ಅಧ್ಯಕ್ಷ ಮಹೇಂದ್ರ ಚೋಪ್ರಾ, ಬಿಜಕಲ್ ಶಿವಪ್ಪ ಸಂಗನಗೌಡ, ಸಿದ್ದಣ್ಣ ತಳವಗೇರಿ, ಕೆ.ಕೆ. ಮಹೇಂದ್ರ, ಅಂದಪ್ಪ ಬೆಣಕಲ್, ಎ.ಬಿ. ಪ್ರಕಾಶ್, ಚೌಡಕಿ ಹನುಮಂತಪ್ಪ,

ಇನ್ನು ಜಿಲ್ಲಾ ಪಂಚಾಯ್ತಿ ಮಾಜಿ ಸದಸ್ಯರಾದ ಮೋತಿಲಾಲ್, ಬಿ. ಸುರೇಶ್, ನಗರಸಭೆ ಮಾಜಿ ಅಧ್ಯಕ್ಷ ಗವಿಶಿದ್ದಪ್ಪ ಕಂದಾರಿ, ರವಿ ಕುರಗೋಡ್ ಸಂಗಣ್ಣನಿಗೆ ಕಚ್ಚಿಕೊಂಡಿದ್ದರೆ, ಜೆಡಿಎಸ್ ಯುವ ಜಿಲ್ಲಾಧ್ಯಕ್ಷ ಹನುಮಂತಪ್ಪ ಕಿನ್ನಾಳ, ತಾಲ್ಲೂಕು ಅಧ್ಯಕ್ಷ ಬಸವರಾಜ ಚಿಲವಾಡಗಿ ಸೆಡ್ಡು ಹೊಡೆದು ಪಕ್ಷದಲ್ಲೇ ಉಳಿದಿದ್ದಾರೆ. ಕಾರ್ಯಕರ್ತರಿಲ್ಲದೆ ರಾಜಕಾರಣ ಮಾಡುವುದು ಕಷ್ಟವೇ. ಸಂಗಣ್ಣ ಕರಡಿಗಿದು ತಡವಾಗಿಯಾದರೂ ಅರ್ಥವಾಗಿರಬಹುದು.


2004 ರಲ್ಲಿ ಎಲ್ಲರನ್ನು ಧಿಕ್ಕರಿಸಿ, ಅತಿಯಾದ ಆತ್ಮವಿಶ್ವಾಸದಿಂದ ತೆಗೆದುಕೊಂಡ ಒಂದು ತಪ್ಪು ನಿರ್ಣಯ ಇವತ್ತು ಸಂಗಣ್ಣನ ಹತಾಶೆಗೆ ಕಾರಣವಾಗಿದೆ. 10 ವರ್ಷದಲ್ಲಿ 4 ಪಕ್ಷ ಬದಲಿಸಿ ಸಿದ್ಧಾಂತ ರಹಿತ, ತತ್ವವಿಲ್ಲದ ರಾಜಕೀಯ ಮಾಡಿ ಇವತ್ತು ಕೊಪ್ಪಳ ರಾಜಕಾರಣದ ಸುಳಿಯಲ್ಲಿ ಸಿಕ್ಕು ಬಿದ್ದಿರುವ ಸಂಗಣ್ಣನ ಸ್ಥಿತಿ ಅಭಿಮನ್ಯುವಿನಂತಾಗಿದೆ.

-ಹುಸೇನ್ ಪಾಷಾ

ದಾವಣಗೆರೆ ಡಾ.ರಾಮಪ್ಪನ ಗರ್ವಭಂಗ!

ದಾವಣಗೆರೆ ಜಿಲ್ಲಾ ಪಂಚಾಯತಿ ಸದಸ್ಯ, ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿಯ ಅಧ್ಯಕ್ಷ ಡಾ. ವೈ. ರಾಮಪ್ಪ ಹದ್ದು ಮೀರುತ್ತಿದ್ದಾನೆ. ಈತ ನಡೆಸುತ್ತಿರುವ ಹೊಯ್ಸಳ ವಿದ್ಯಾ ಸಂಸ್ಥೆಯಡಿಯಲ್ಲಿನ ಕನ್ನಿಕಾ ಪರಮೇಶ್ವರಿ ಡೈಮಂಡ್ ಜುಬಿಲಿ ನರ್ಸಿಂಗ್ ಶಾಲೆಯಲ್ಲಿ ಮೊದಲ ವರ್ಷದ ನರ್ಸಿಂಗ್ ವಿದ್ಯಾರ್ಥಿಯಾಗಿದ್ದ ಅಂಗವಿಕಲ ದಲಿತ ವಿದ್ಯಾರ್ಥಿ ಎಸ್.ಎನ್. ಕುಮಾರ್ ಎಂಬಾತನನ್ನು ಲಗೇಜಿನ ಸಮೇತ ದಿನಾಂಕ 20.6.06 ರಂದು ಹೊರಹಾಕಿದ್ದಾರೆ. ಈ ರಾತ್ರಿ ಇಲ್ಲಿದ್ದು ನಾಳೆ ಹೋಗುತ್ತೇನೆಂದು ಕುಮಾರ್ ಬೇಡಿಕೊಂಡರೂ ರಾಮಪ್ಪ ಕೇಳಿಲ್ಲ,

ವಿದ್ಯಾರ್ಥಿ ಕುಮಾರನನ್ನು ಹೊರಹಾಕಲು ಕಾರಣವಿಷ್ಟೇ: 'ಲಂಕೇಶ್' ಜೂನ್ 21 ರ ಸಂಚಿಕೆಯಲ್ಲಿ 'ನರ್ಸಿಂಗ್ ಶಿಕ್ಷಣದ ಮಾಫಿಯಾ' ಎಂಬ ತಲೆಬರಹದಡಿಯಲ್ಲಿ ನರ್ಸಿಂಗ್ ಶಿಕ್ಷಣದ ಹೆಸರಿನಲ್ಲಿ ನಡೆಯುತ್ತಿರುವ ವಂಚನೆ ಮತ್ತು ಶೋಷಣೆಗಳ ಕುರಿತು ವರದಿಯಾಗಿತ್ತು, ಇಲ್ಲಿನ ಒಂಬತ್ತು ನರ್ಸಿಂಗ್ ಶಾಲೆಗಳಲ್ಲಿ ತೀರಾ ಅಧ್ವಾನಗೊಂಡಿರುವ ವೈ. ರಾಮಪ್ಪನ ಕನ್ನಿಕಾಪರಮೇಶ್ವರಿ ಡೈಮಂಡ್ ಜುಬಿಲಿ ನರ್ಸಿಂಗ್ ಶಾಲೆಯ ಅವ್ಯವಸ್ಥೆಯ ಬಗ್ಗೆ ವಸ್ತುನಿಷ್ಠವಾಗಿ ಬರೆಯಲಾಗಿತ್ತು, ಎಸ್.ಎನ್. ಕುಮಾರನನ್ನು 'ಲಂಕೇಶ್'ಗೆ ಮಾಹಿತಿ ನೀಡಿದ ಆರೋಪದ ಮೇಲೆ ಸಂಸ್ಥೆಯಿಂದ ಹೊರಹಾಕಿರುವುದು ವಾಸ್ತವವಾಗಿದ್ದರೂ ಕೂಡಾ, ಹಾಜರಾತಿ ಇರಲಿಲ್ಲ, ಹುಡುಗಿಯರನ್ನು ಚುಡಾಯಿಸುತ್ತಿದ್ದ, ನಡತೆ ಸರಿ ಇರಲಿಲ್ಲ ಮುಂತಾಗಿ ಕಾರಣ ನೀಡಿ ದಬ್ಬಿದ್ದಾರೆ. ಬಿದ್ದು ಹೋಗುವಷ್ಟು ಅಸಹಾಯಕನಾದ ಅಂಗವಿಕಲ ವಿದ್ಯಾರ್ಥಿ ಕುಮಾರನ ವಿರುದ್ಧ ಸುಳ್ಳು ಮತ್ತು ದಿನಾಂಕಗಳಿಲ್ಲದ ದೂರುಗಳನ್ನು ಅತಂತ್ರ ಸ್ಥಿತಿಯಲ್ಲಿರುವ ಅಡುಗೆಯವರು ಹಾಗೂ ವಿದ್ಯಾರ್ಥಿಗಳಿಂದ ಬರೆಸಿಕೊಂಡು ಸಮಾಜ ಕಲ್ಯಾಣ ಇಲಾಖೆಗೆ ರಾಮಪ್ಪ ಕೊಟ್ಟಿದ್ದಾನೆ.


ರಾಮಯ್ಯನ ಪ್ರತಿಕೃತಿ ದಹನ

ಸಮಾಜ ಕಲ್ಯಾಣ ಇಲಾಖೆಯಿಂದಲೇ ಆಯ್ಕೆಗೊಂಡು ವೈ. ರಾಮಪ್ಪನ ನರ್ಸಿಂಗ್ ಶಾಲೆಗೆ ಸೇರಿದ್ದ ಕುಮಾರ್ ದಿ. 21.6.06 ರಂದೇ ಸಮಾಜ ಕಲ್ಯಾಣ ಇಲಾಖೆಗೆ ಅರ್ಜಿ ನೀಡಿ ತನ್ನನ್ನು ತೆಗೆದು ಹಾಕಿರುವ ಬಗ್ಗೆ ಕಾರಣಗಳನ್ನು ತೋರಿಸಲು ಕೇಳಿದ್ದಾನೆ. ಆದರೆ ಸ.ಕ. ಇಲಾಖೆಯವರು 20-25 ದಿನದವರೆಗೂ ರಾಮಪ್ಪನ ಹತ್ತಿರ ಚಮಚಾಗಿರಿ ನಡೆಸಿ ಕೊನೆಗೆ ರಾಮಪ್ಪ ಕೊಟ್ಟ ಸುಳ್ಳು ದಾಖಲೆಗಳನ್ನೇ ಉತ್ತರವೆಂಬಂತೆ ಕುಮಾರನಿಗೆ ನೀಡಿದ್ದಾರೆ. ವಿಶೇಷವೆಂದರೆ ರಾಮಪ್ಪ ತನ್ನ ನರ್ಸಿಂಗ್ ಶಾಲೆಯಲ್ಲಿ 'ಡಬಲ್ ಅಟೆಂಡೆನ್ಸ್ ಮೈಂಟೇನ್' ಮಾಡುತ್ತಾನೆ. ಈತನಿಗೆ ಚೇಲಾಗಿರಿ ಮಾಡಿದರೆ ಶೇ. 100 ರಷ್ಟು ಹಾಜರಾತಿ ಸಿಗುತ್ತದೆ! ತಿರುಗಿ ಬಿದ್ದರೆ 'ಇರೆಗ್ಯುಲರ್' ಎಂಬ ಬಿರುದು ಸಿಗುತ್ತದೆ!

ವೈ. ರಾಮಪ್ಪ ಸ.ಕ. ಇಲಾಖೆಗೆ ಎಸ್.ಎನ್. ಕುಮಾರನ ವಿರುದ್ಧ ನೀಡಿದ ದಾಖಲೆಗಳು ಸುಳ್ಳೆಂದು ಸಾಬೀತುಪಡಿಸುವ ದಾಖಲೆಗಳನ್ನು 'ಲಂಕೇಶ್' ಸಂಗ್ರಹಿಸಿದೆ. ವೈ.ರಾಮಪ್ಪ ಎಚ್ಚರಗೊಳ್ಳುವ ಮುನ್ನವೇ 'ಲಂಕೇಶ್' ಚಿಗಟೇರಿ ಆಸ್ಪತ್ರೆಯ ಹಾಜರಾತಿ ದಾಖಲೆಯನ್ನು ತೆಗೆದುಕೊಂಡಿದೆ. ಆಶ್ಚರ್ಯವೆಂದರೆ ರಾಮಪ್ಪ ತನ್ನ ಸಂಸ್ಥೆಯಿಂದ ನೀಡಿದ ಕುಮಾರನ ಕ್ಲಿನಿಕಲ್ ಹಾಜರಾತಿ ಶೇ. 10 ಕ್ಕಿಂತಲೂ ಕಡಿಮೆ ಇದೆ. ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಶೇ. 70 ರಷ್ಟು ಹಾಜರಾತಿ ಇದೆ!

ಪ್ರಗತಿಪರ ಸಂಘಟನೆಗಳು ಕುಮಾರನಿಗೆ ನೈತಿಕ ಬೆಂಬಲವನ್ನು ನೀಡಿ 11.8.06 ರಂದು ರಾಮಪ್ಪನ ವಿರುದ್ಧ ಪ್ರತಿಭಟನೆ ಮಾಡಿ, ಆತನ ಮಾನ ಹರಾಜು ಹಾಕಿವೆ. ಜನಪ್ರತಿನಿಧಿಯಾದವನೊಬ್ಬ ಟೀಕೆ, ಟಿಪ್ಪಣಿ ಮತ್ತು ಸತ್ಯಾಂಶಗಳನ್ನು ಸಹಿಸಿಕೊಳ್ಳದೆ ಅಹಂಕಾರದಿಂದ ವರ್ತಿಸಿದರೆ, ಬೀದಿಯಲ್ಲಿ [illegible] ವೈ. ರಾಮಪ್ಪ ಅರ್ಥಮಾಡಿಕೊಂಡರೆ ಒಳ್ಳೆಯದು.

-ಚಂದ್ರಶೇಖರ ತೋರಣಘಟ್ಟ

ಧಮುಧಮು...ಧಮಧಮ..ಧಮುಧಮ..ಧಮಧಮ

ದರ್ಶನಿಯೊ ತಬಲವನ್ನು ದಬದಬನೆ ಬಡಿದ. ಕೈಗೆ ಕಟ್ಟಿದ್ದ ಘಂಟೆಗಳ ಶಬ್ದ ಅವನ ಬಲಿಷ್ಠ ಧ್ವನಿಯೊಂದಿಗೆ ಸೇರಿ ಹದಿನೆಂಟು ಅಂತಸ್ತಿನ ಬಿಲ್ಡಿಂಗಿನ ಎತ್ತರಕ್ಕೆ ಏರಲು ಹೊರಟವು.

ತನ್ನ ಅಣ್ಣ ಇತ್ತೀಚಿನ ಚಲನಚಿತ್ರದ ಹಾಡೊಂದನ್ನು ತಬಲದ ಜೊತೆ ಹಾಡಲು ತೊಡಗಿದಾಗ ಚಂಪೂದಿಗೆ ಎಲ್ಲಿಲ್ಲದ ಹುರುಪು ಬಂತು. ದೇಹವನ್ನು ಅಂಕುಡೊಂಕಾಗಿಸುತ್ತಾ ವಾರೆಕೋರೆಯಾಗಿ ತಿರುಗಿಸುತ್ತಾ ಹುಮ್ಮಸ್ಸಿನಿಂದ ಸ್ವಚ್ಛಂದದಾಗಿ ಕುಣಿಯಲಾರಂಭಿಸಿದಳು. ಜಾಸ್ತಿ ಜನ ಜಮಾಯಿಸಿರಲಿಲ್ಲವಾದ್ದರಿಂದ ಅವಳ ಕಣ್ಣು ಆಗಾಗ್ಗೆ ಕಾಂಪೌಂಡಿನ ಗೋಡೆಯ ಮೂಲೆಯಲ್ಲಿ ಒರಗಿದ್ದ ತಾಯಿಯ ಕಡೆಗೆ ಹೋಗುತ್ತಿತ್ತು. ಅಲ್ಲಿ ಇಲ್ಲಿ ಗಲ್ಲಿಗಳಲ್ಲಿ ಕುಣಿಯುವುದು ಅವರಿಗೆ ಹೊಸದಲ್ಲ, ಆದರೂ ದೊಡ್ಡ ಬಿಲ್ಡಿಂಗಿನ ಕಾಂಪೌಂಡ್ ಒಳಕ್ಕೆ ಬಂದದ್ದು ಮಾತ್ರ ಇದೇ ಮೊದಲು. ಬಳುಕುತ್ತಾ, ನಲಿಯುತ್ತಾ ಚಂಪೂದಿ ಮೇಲಕ್ಕೊಮ್ಮೆ ದೃಷ್ಟಿ ಹಾಯಿಸಿದಳು. ಅವಳಿಗೆ ಅವತ್ತು ಉತ್ಸಾಹವೋ ಉತ್ಸಾಹ. ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್ ಮನೆಗಳಿರುವ ಕಡೆ ಹೋಗಿ ಕುಣಿಯಲು ತಾಯಿ, ಅಣ್ಣನನ್ನು ಎಷ್ಟೆಲ್ಲಾ ಪೀಡಿಸಿದ್ದಳಲ್ಲ! ವಾಲ್ಕೇಸರಕ್ಕೆ ಹೋಗಲು ಅತ್ತು ಕರೆದು ರಂಪ ಮಾಡಿದ್ದಕ್ಕೆ ಅಂತೂ ಈ ದಿನ ಅಲ್ಲಿಗೆ ಬಂದಿಳಿದಿದ್ದರು. ಕಟ್ಟುತ್ತಿದ್ದ ದಿನಗಳಿಂದಲೇ ಆ ದೊಡ್ಡ ಕಟ್ಟಡ ಅವಳ ತಲೆಯಲ್ಲಿ ಪಟ್ಟಾಗಿ ಕೂತುಬಿಟ್ಟಿತ್ತು. ಆ ದಿನ ಬೆಳಿಗ್ಗೆ ಗುಡಿಸಲು ಬಿಟ್ಟಾಗಿನಿಂದ ಅಣ್ಣನನ್ನು ಪೀಡಿಸಹತ್ತಿದ್ದಳು: 'ಇವತ್ತು ನಾವು ವಾಲ್ಕೇಸರಕ್ಕೆ ಹೋಗ್‌ಬೇಕಂದ್ರೆ ಹೋಗಲೇಬೇಕಣ್ಣೋ'.

'ಆಗಾಕಿಲ್ಲ ಅಂತ ಎಷ್ಟ್ ಸಲ ಹೇಳಬೇಕಮ್ಮಿ? ಅಲ್ಲಿರೋರು ದೋ..ಡ್ಡ್ ಮನುಸ್ರು ನಿಜ, ಮನಸ್ಸು ಮಾತ್ರ ಈಟೇ ಅಗಲ. ಇರೋದು ಇಷ್ಟುದ್ದ. ನಿಂಗೆ ಅದೆಲ್ಲ ಹೆಂಗೆ ಗೊತ್ತಾಗ್‌ಬೇಕ್ ಹೇಳು?' ಎಂದಿನಂತೆ ದರ್ಶನಿಯೋ ಸಿಡಿಮಿಡಿಗುಟ್ಟಿದ್ದ.

ಹಿಂದೆ ನಡೆದುಬರುತ್ತಿದ್ದ ತಾಯಿ ಜೇವ್ಲಿಗೆ ಕೋಪ ಹತ್ತಿ ಉರಿದಿತ್ತು, 'ಓಯ್! ಯಾವಾಗ್ ನೋಡಿದ್ರೂ ಅಲ್ಗ್ ಹೋಗೋಣ, ಇಲ್ಗ್ ಹೋಗೋಣ ಅಂತ ಕೊಸಕೊಸ. ಮನೇಲಿರೋ ಮಡ್ಕೆ ಕುಡ್ಕೆಗಳೆಲ್ಲ ಖಾಲಿಯಾಗಿ ಲಟಪಟ ಅಂತಿದಾವೆ. ಏನ್ ತಿಂತೀರಾ ಕೂಳು? ನಿಮ್ಮಪ್ಪ ನೋಡಿದ್ರೆ ಉಬ್ಸ ಬಂದ್ ನರಳ್ತಾ ಇದಾನೆ. ಈ ಕೂಸಿಗೆ ನೋಡಿದ್ರೆ ಈಪಾಟ ಜ್ವರ. ಮಾಮೂಲಿ ಜಾಗಕ್ಕೆ ಹೋಗೋಣ್ ನಡೀ. ಬೇರೆದೆಲ್ಲ ಉಸಾಬ್ರಿ ಯಾಕೆ?'

ತಾಯಿಯ ತೊಡೆಯಲ್ಲಿ ಮಲಗಿದ್ದ ಕನಿಯನ ಕಡೆ ಚಂಪೂದಿ ದುರುಗುಟ್ಟಿಕೊಂಡು ನೋಡಿದಳು. ಯಾವಾಗಲೂ ಇದೇ ಪುರಾಣ. ಅಪ್ಪನ ಉಬ್ಬಸ, ಇಲ್ಲಾ ಕನಿಯನ ಜ್ವರ. ಪುಟ್ಟ ತಮ್ಮ ಅಂತ ಪ್ರೀತಿಯೇನೋ ಸರಿ. ಆದರೆ ಯಾವಾಗಲೂ ಖಾಯಿಲೆ ಬೀಳ್ತಾ ಇರುತ್ತೆ ಮುಂಡೇದು. ದುಡಿದಿದ್ದೆಲ್ಲ ಆ ಔಷಧಿ ಅನ್ನೋ ಬಣ್ಣದ ನೀರಿಗೆ. ಇದು ಹುಟ್ಟೋಕೆ ಮುಂಚೆ ತಾಯಿ ಆಗಾಗ್ಗೆ ಐಸ್‌ಕ್ರೀಮಂತೆ, ಪೆಪ್ಪರಮಿಂಟಂತೆ ಅಂತ ಏನೇನೋ ಕೊಡಿಸುತ್ತಿರಲಿಲ್ಲವೆ? ಇದು ಹುಟ್ಟಿದ್ದೇ ಹುಟ್ಟಿದ್ದು...

'ಬಾ ಮತ್ತೆ ಬೇಗ. ಝುಟ್ ಫಟ್ ಅಂತ ಮುಗಿಸ್ಬೇಕು...'

ಹತಾಶೆಯಿಂದ ತಲೆಕೊಡವಿ ಚಂಪೂದಿ ಓಡಿಹೋಗಿ ಅಣ್ಣನ ಜೊತೆ ಹೆಜ್ಜೆ ಹಾಕಲಾರಂಭಿಸಿದಳು. ಅವನಿಗೆ ನಡಿಗೆಯಾದರೆ ಅವಳಿಗೆ ಓಟ.


ರೈಲ್ವೇ ಹಳಿಯ ಆಚೀಚೆ ಇದ್ದ ಗುಡಿಸಲುಗಳನ್ನು ನೋಡುತ್ತಾ ವಾಂತಿ ಬಂದಂತೆನ್ನಿಸಿತು. ಅದೇನೂ ಮೊದಲ ಸಲವಲ್ಲ, ಸುತ್ತಮುತ್ತ ಎಲ್ಲೆಂದರಲ್ಲಿ ಕೊಚ್ಚೆಯ ಹೊಳೆ. ಕೊಳೆತ ಕಸದ ರಾಶಿಯನ್ನು ನೋಡಿದರೇ ಬಕ್ ಅಂತ ಕಾರಿಕೊಳ್ಳಬೇಕೆನಿಸಿತ್ತು, ಹರಿದ ಲಂಗದ ತುದಿಯನ್ನು ಮೂಗೊಳಗೆ ಚುಚ್ಚಿದರೂ ಗಬ್ಬು ನಾತ. ಹರಕಬರಕ ಬಟ್ಟೆಯಲ್ಲಿ ನಾತ ಹೊಡೆಯುತ್ತಿದ್ದ ಮಕ್ಕಳು, ತಲೆಯನ್ನು ಪರಪರ ಕೆರೆಯುತ್ತಾ, ಮಕ್ಕಳನ್ನು ಜೋತುಬಿದ್ದ ಎದೆಗಾನಿಸಿಕೊಂಡು ನಿಂತಿದ್ದ ಹೆಂಗಸರು! ಸಿಗರೇಟಿನ ತುಂಡುಗಳನ್ನು ಸೇದುತ್ತಲೋ, ಹಲ್ಲು ತಿಕ್ಕುತ್ತಲೋ, ಇಲ್ಲ ತಲೆಯಲ್ಲಿ ಬಾಚಣಿಗೆಯನ್ನಾಡಿಸುತ್ತಲೋ ಕೆಲವು ಗಂಡಸರೂ ನಿಂತಿದ್ದರು.

ದರ್ಶನಿಯೋ ಥಮಥಮ ಎಂದು ಬಡಿಯುತ್ತಾ ಹಾಡಲು ಹತ್ತಿದ್ದ, ಚಂಪೂದಿ ದೇಹವನ್ನು ಡೊಂಕಿಸುತ್ತ ಕುಣಿಯಲು ಹತ್ತಿದ್ದಳು. ತಾತ್ಸಾರದಿಂದ ಸುತ್ತ ಕಣ್ಣು ಹಾಯಿಸಿದಾಗ ಏನೇ ಆದರೂ ಇಲ್ಲಿಯವರು ಸ್ವಲ್ಪ ಪಾಪದವರೇ ಅಂತನ್ನಿಸಿತ್ತು, ಅವಳ ಕುಣಿತವನ್ನು ನೋಡಿ ಚಪ್ಪಾಳೆ ತಟ್ಟಿ ಆನಂದಿಸಿದ್ದರು. ಮಕ್ಕಳಿಗೆ ಆಗಾಗ್ಗೆ ತಿನ್ನಲು ಏನಾದರೂ ಸಿಗುತ್ತಿತ್ತು, ಸಿಕ್ಕ ಚಿಲ್ಲರೆ ಕಾಸುಗಳನ್ನು ಸೇರಿಸಿದರೆ ಹತ್ತೋ ಹನ್ನೆರಡೋ ಆಣೆಗೆ ಮೋಸವಿರಲಿಲ್ಲ.

ಇವತ್ತು ಮಾತ್ರ ಚಂಪೂದಿಯದ್ದು ಒಂದೇ ಹಠ. ಏನೇ ಆದರೂ ವಾಲ್ಕೇಸರಕ್ಕೆ ಹೋಗಲೇಬೇಕು. ಆ ಹೊಸ ಅಪಾರ್ಟ್‌ಮೆಂಟಿನ ಮನೆಯ ಮುಂದೆ ಕುಣಿಯಬೇಕು.

ಬೇಸತ್ತ ಜೇವ್ಲಿ 'ಸರಿ. ಹೋಗೋಣ್ ನಡೀ,' ಎಂದಿದ್ದಳು.

ದರ ದರ
ಎಳೆದುಕೊಂಡು
ನಡೆಯುತ್ತಿದ್ದ ಅಣ್ಣನ
ಕಡೆಗೊಮ್ಮೆ ಚಂಪೂದಿ
ದೃಷ್ಟಿ ಬೀರಿ ತಾಯಿಗೆ
ಹೇಳಿದಳು, 'ಆ
ಪಿಕ್ಚರಲ್ಲಿ ನೋಡಿದ್ವಲ್ಲ,
ಆ ಕುಣ್ತನೇ ಅವರ್ಗೆಲ್ಲ
ತುಂಬ ಇಷ್ಟ ಆಗಿದ್ದು...'



ಸುಮಾರು ಒಂದು ಗಂಟೆ ಉರಿ ಬಿಸಿಲಲ್ಲಿ ನಡೆದು ವಾಲ್ಕೇಸರ ಸೇರುವ ಹೊತ್ತಿಗೆ ಬಡಕಲಿ ಜೇವ್ಲಿಯ ಉಸಿರು ಆಯಾಸದಿಂದ ಬಾಯಿಗೆ ಬಂದಿತ್ತು. ಕನಿಯ ಜ್ವರದಲ್ಲಿ ಬಸವಳಿದು ಬೆಂಡಾಗಿತ್ತು. ಎಲ್ಲರಿಗೂ ಗಂಟಲಿನ ಪಸೆ ಆರಿ ಬಾಯಿ ಬಾಯಿ ಬಿಡುವ ಹಾಗಾಗಿತ್ತು. ಅಲ್ಲೆಲ್ಲೂ ನೀರು ಸಿಗುವಂತೆ ಕಾಣಲಿಲ್ಲ, ಜೇವ್ಲಿ ಗ್ಯಾರೇಜಿನ ಹತ್ತಿರದ ಒಂದು ಮರದ ಕೆಳಗೆ ಕೂತು ದಣಿವಾರಿಸಿಕೊಳ್ಳುತ್ತಿದ್ದಳು.


'ಜಟ್ನೆ ಮುಗಿಸ್ಬೇಕ್ ಕಣ್ರೋ. ಇಲ್ಲೆಲ್ಲಾ ಬರೀ ದೊಡ್ಡ್ ದೊಡ್ಡವ್ರೇ ಇದಾರೆ.'

ಹೊಸದಾಗಿ ಬಣ್ಣ ಬಳಿದುಕೊಂಡ ಬಿಲ್ಡಿಂಗ್ ಬಿಸಿಲಲ್ಲಿ ಎಷ್ಟು ಹೊಳೆಯುತ್ತಲ್ಲ! ಚಂಪೂದಿಗೆ ಸುಸ್ತು ಬಾಯಾರಿಕೆ ಎಲ್ಲ ಮರೆತು ಹೋಯಿತು. ನೆಗೆಯುವವಳಂತೆ ಎದ್ದು ದರ್ಶನಿಯೊಗೆ ಹೇಳಿದಳು: 'ನೋಡ್ತಿರು...ಇವತ್ತ್ ಎಷ್ಟ್ ಕಾಸು ಬೀಳತ್ತೆ ಅಂದ್ರೆ ನಿನ್ನ್ ಜೇಬೇ ಸಾಕಾಕ್ಕಿಲ್ಲ.'

ಹೊಳೆಯುವ ಕಾರುಗಳನ್ನು, ದೊಡ್ಡ ಬಿಲ್ಡಿಂಗನ್ನು ನೋಡಿ ದರ್ಶನಿಯೋಗೆ ಸಹ ಹುರುಪು ಬಂದಿತ್ತು, 'ನೋಡ್ ಚಂಪೂದಿ, ಇವತ್ತೇನಾದ್ರೂ ಸರ್‍ಯಾಗ್ ಕಾಸು ಬತ್ರೋ, ಖಂಡಿತಾ ನಿಂಗೊಂದ್ ಫಾಂಟಾ. ಸಮಾ ಕುಣೀಬೇಕ್, ಗೊತ್ತಾಯ್ತಾ?'

ಚಂಪೂದಿ ಹೋಗಿ ಕಾಂಪೌಂಡಿನ ಮಧ್ಯದಲ್ಲಿ ನಿಂತಳು. ದರ್ಶನಿಯೋನ ಬಲಿಷ್ಠ ಕಂಠದಿಂದ ಹೊಮ್ಮುತ್ತಿದ್ದ ಇಂಪಾದ ಹಾಡು ಬಿಲ್ಡಿಂಗಿನೆತ್ತರದ ಕಿಟಕಿಗಳನ್ನು ತಟ್ಟಲಾರಂಭಿಸಿತು. 'ಯಾದ್ ಕರೇಗಿ ದುನಿಯಾ...ತೇರಾ ಮೇರಾ ಯಾರಾನಾ...' ಕುಣಿಯುತ್ತಾ ಚಂಪೂದಿ ಆ ಚಿತ್ರದ ನಾಯಕ ಕುಣಿಯುವ ರೀತಿಯನ್ನು ನೆನಪಿಸಿಕೊಳ್ಳಹತ್ತಿದಳು. ಒಂದಾದ ಮೇಲೊಂದು ಮುಖಗಳು ಕಿಟಕಿಯಲ್ಲಿ ಹಣಲಾರಂಭಿಸಿದವು. ಅಣ್ಣ ತಂಗಿ ಮುಖ ಮುಖ ನೋಡಿಕೊಂಡು ಮುಗುಳ್ನಕ್ಕರು. ಚಂಪೂದಿ ಥಟ್ಟನೆ ತಿರುಗಿ ತಾಯಿಯ ಕಡೆಗೊಮ್ಮೆ ಕಣ್ಣು ಹಾಯಿಸಿದಳು. ಇವತ್ತು ಕನಿಯನಿಗೆ ಔಷಧಿ ಗ್ಯಾರಂಟಿ, ತನಗೊಂದು ಫಾಂಟಾ...

ಮುಖಗಳು...ಒಂದಾದ ಮೇಲೊಂದರಂತೆ...ಚಂಪೂದಿ ತಲೆಯೆತ್ತಿ ನೋಡಿದಳು. ಕಿಟಕಿಯ ಗಾಜು ಸೂರ್ಯನ ಬೆಳಕಲ್ಲಿ ವಜ್ರದಂತೆ ಫಳಫಳಿಸುತ್ತಲ್ಲ! ಅಲ್ಲಿ ಮೇಲೆ ಬಾಲ್ಕನಿಯಲ್ಲಿರುವ ಗಿಡಗಳು ಎಷ್ಟು ಚೆಂದಿಲ್ಲ! ಅರೆ! ಈಗ ತಾನೆ ಅಲ್ಲಿ ಕಂಡ ಮುಖಗಳು ಎಲ್ಲಿ ಹೋದವು?



ಆಯಾಸದಿಂದ ನೋಯುತ್ತಿದ್ದ ಕತ್ತನ್ನು ಕೆಳಗಿಳಿಸಿದಳು, ಕಾಂಪೌಂಡಿನಲ್ಲಿ ಅವಳ ಸುತ್ತ ಕೆಲವರು ಜಮಾಯಿಸಿದ್ದರು. ಆದರೆ ಒಂದು ಕಾಸೂ ಬಿದ್ದ ಶಬ್ದವಿಲ್ಲ, ಅವಳ ಕಣ್ಣುಗಳಲ್ಲಿ ನೀರು ಕಟ್ಟಲಾರಂಭಿಸಿತು. ದರ್ಶನಿಯೋ ಒಂದಾದ ಮೇಲೆ ಒಂದರಂತೆ ಹಾಡುಗಳನ್ನು ಹಾಡುತ್ತಿದ್ದ ಸರಿ. ಆದರೆ ತಬಲ ಬಡಿಯುವ ಬಿರುಸು ಕಡಿಮೆಯಾಗುತ್ತಾ ನಡೆದಿತ್ತು,

ಎಲ್ಲಿಂದಲೋ ಒಂದು ಶಿಳ್ಳೆ! ಚಂಪೂದಿ ಮುಖ ತಿರುಗಿಸಿ ಆ ದಿಕ್ಕಿನತ್ತ ನೋಡಿದಳು. ಎದುರಿಗಿದ್ದ ಕಾರೊಂದರ ಡ್ರೈವರ್, ಕಾರಿನ ಬಾಗಿಲು ತೆರೆದು, ಕೈಯಲ್ಲಿ ಹೊಳೆಯುತ್ತಿದ್ದದ್ದೇನೋ ಹಿಡಿದು ಸೀಟಿನ ಮೇಲೆ ಕೂತಿದ್ದ. ಚಂಪೂದಿಯ ಹೃದಯವೂ ನರ್ತಿಸಲಾರಂಭಿಸಿತು. ಖುಶಿಯಿಂದ ಓಡಿ ಹೋಗಿ ಕೈ ಚಾಚಿದಳು. ಥಟ್ಟನೆ ಕೈ ಹಿಂತೆಗೆದುಕೊಂಡ. ಚಂಪೂದಿಗೆ ಪಿಚ್ಚೆನ್ನಿಸಿತು. ನಗುತ್ತಾ ಡ್ರೈವರ್ ಮುಷ್ಟಿಯನ್ನು ತೆರೆದ. ಹೊಳೆಯುವ ಬೆಳ್ಳಿ ರೂಪಾಯಿ!

'ತಗೋ,' ಡ್ರೈವರ್ ಹೇಳಿದ.

ಚಂಪೂದಿ ಕೈ ಚಾಚಿದಳು. ಗಬಕ್ಕನೆ ಅವಳ ಕೈ ಹಿಡಿದು, ಅಂಗೈ ಅಗಲಿಸಿ, ನಾಣ್ಯವನ್ನಿಟ್ಟು ಅಂಗೈ ಮುಚ್ಚಿದ.

ಓಡುತ್ತಾ ಹೋಗಿ ತಾಯಿಯ ಮಡಿಲಲ್ಲಿ ನಾಣ್ಯವನ್ನೆಸೆದು ಚಂಪೂದಿ ಮತ್ತೆ ಕುಣಿಯಲು ಹತ್ತಿದಳು. ಏನು ಅದೃಷ್ಟ! ಒಂದು ರೂಪಾಯಿಯ ಬೆಳ್ಳಿ ನಾಣ್ಯವನ್ನು ನೋಡಿದ್ದು ಜನ್ಮದಲ್ಲಿ ಇದೇ ಮೊದಲು. ಬಾಗುತ್ತಾ, ಬಳುಕುತ್ತಾ ಕುಣಿಯುತ್ತಲೇ ಇದ್ದಳು. ಸುತ್ತ ಸಾಕಷ್ಟು ಜನ ಜಮಾಯಿಸಿದ್ದರು. ಚಂಪೂದಿಯ ಕಣ್ಣು ಮತ್ತೆ ಮೇಲೆ ಹೋಗಿ ಬಿಲ್ಡಿಂಗಿನ ನುಣ್ಣನೆಯ ಗೋಡೆಗಳುದ್ದಕ್ಕೂ ಹರಿದಾಡಿತು. ದೊಡ್ಡ ಮನೆಯ ಹೆಂಗಸರೊಬ್ಬರೂ ಅವಳು ನರ್ತಿಸುತ್ತಿರುವುದನ್ನು ನೋಡುತ್ತಿರಲಿಲ್ಲ, ಬೆಳಗ್ಗೆಯಿಂದೀ ಅವಳ ಎದೆಯಲ್ಲಿ ಸುಂದರ ಕನಸೊಂದು ಗುಟ್ಟಾಗಿ ಹರಿದಾಡುತ್ತಿತ್ತಲ್ಲ! ದೊಡ್ಡ ಮನೆಯ ಹೆಂಗಸರು, ಇವತ್ತು ತನಗೊಂದು ಗಂಟೇ ಸಿಗಬಹುದೇ? ಯಾರಾದರೂ ಹಳೆಯ ರೇಶ್ಮೆ ಸೀರೆಯನ್ನೆಸೆದಾರು. ಅಥವಾ ಹಳೆಯ, ಈಗ ಅವರಿಗೆ ಉಪಯೋಗಕ್ಕೆ ಬಾರದ ಬಣ್ಣಬಣ್ಣದ ಫ್ರಾಕೊಂದು...! ಚಂಪೂದಿಯ ಅಂಗಾಲುಗಳು ನೋಯಲಾರಂಭಿಸಿದ್ದವು. ಇಲ್ಲಿಯತನಕ ಸಿಕ್ಕಿದ್ದು ಬರೀ ಒಂದು ರೂಪಾಯಿ ಅಷ್ಟೆ.

ತರುಣ ವಯಸ್ಸಿನ ದಂಪತಿಗಳಿಬ್ಬರು ಬಿಲ್ಡಿಂಗಿನ ಹೊರಗೆ ಬಂದು ಹೊಳೆಯುವ ದೊಡ್ಡ ಕೆಂಪು ಕಾರಿನಲ್ಲಿ ಕೂತರು. ಚಂಪೂದಿ ಅವರುದ್ದಕ್ಕೂ ಕುಣಿದಳು. ಆ ಹುಡುಗಿ ಎಷ್ಟು ಚೆಂದಿದ್ದಳಲ್ಲ! ಚಂಪೂದಿಗೆ ಅವಳು ತುಂಬ ಇಷ್ಟವಾದಳು. ತನ್ನ ನಸೀಬು ಚೆನ್ನಾಗಿದ್ದರೆ ಅವರು ಒಂದು ಪೂರ್ತಿ ರೂಪಾಯಿಯನ್ನೇ ಕೊಟ್ಟಾರು. ಹುಡುಗ ನಕ್ಕಾಗ ಅವನ ಗುಲಾಬಿ ಬಣ್ಣದ ತುಟಿಗಳು ಹೊಳೆದವು. ಚಂಪೂದಿ ಬಾಗಿ, ಕೈ ಚಾಚಿದಳು.

'ಹೇಯ್, ಹೋಗಾಚೆ.' ಹುಡುಗ ಸಿಟ್ಟಿನಲ್ಲಿ ಕಾರ್ ಸ್ಟಾರ್ಟ್ ಮಾಡಿದ. 'ಈ ವಾಚ್‌ಮನ್ ಒಬ್ಬ ಈಡಿಯಟ್...'

ಕಾರ್ ಸುಯ್ಯನೆ ಕಾಂಪೌಂಡಿನಿಂದಾಚೆ ಹೊರಟೇ ಹೋಯಿತು. ಫಾಂಟಾ ಸಹ ಅದರೊಂದಿಗೇ ಮರೆಯಾಗುತ್ತಿದೆ ಅಂತೆನ್ನಿಸಿತು. ತಬಲದ ಬಡಿತದಂತೆಯೇ ಅವಳ ಕುಣಿತದ ಹೆಜ್ಜೆಗಳೂ ಮಂದವಾಗುತ್ತಿದ್ದವು. ಸೂರ್ಯ ಹಲ್ಲು ಕಚ್ಚಿ ಉರಿಯನ್ನು ಸುರಿಸುತ್ತಿದ್ದ. ಇನ್ನೊಂದು ಶಿಳ್ಳೆ! ಅವಳ ಹೃದಯ ಮತ್ತೊಮ್ಮೆ ನೆಗೆಯಿತು. ಡ್ರೈವರ್ ಸುತ್ತ ನಿಂತಿದ್ದ ಜನರ ಮಧ್ಯೆ ನಿಂತು ಕೈಯಲ್ಲಿ ಹೊಳೆಯುತ್ತಿದ್ದದ್ದನ್ನೇನೋ ತೋರಿಸುತ್ತಿದ್ದ. ಕುಣಿಯುತ್ತಿದ್ದ ಚಂಪೂದಿಯ ಕಣ್ಣೆಲ್ಲ ಆ ಹೊಳೆಯುತ್ತಿದ್ದ ನಾಣ್ಯದ ಮೇಲೇ. ಆದರೆ ಠಣ್ ಶಬ್ದವೇ ಕೇಳುತ್ತಿಲ್ಲವಲ್ಲ! ನಾಣ್ಯವನ್ನು ಹಿಡಿದಿದ್ದ ಕೈ ಮೇಲೆತ್ತಿ ಚಂಪೂದಿಯ ಕಡೆಗೆ ಅತ್ತಿಂದಿತ್ತ ಆಡಿಸಿತು. ಎಷ್ಟು ನೆಗೆದರೂ ಚಂಪೂದಿಗೆ ರೂಪಾಯಿ ಸಿಕ್ಕುತ್ತಿಲ್ಲ, ಅವನ ಅಂಗೈಗೆ ಅಂಟಿಕೊಂಡಿತ್ತೆ? ಸುತ್ತಲಿದ್ದ ಜನರ ಗುಂಪು ಜಾಸ್ತಿಯಾಗಿತ್ತೋ ಏನೋ, ಸರಿಯಾಗಿ ಗೊತ್ತಾಗಲಿಲ್ಲ, ಎಲ್ಲ ಕಡೆಯಿಂದ ಮೈ ನುಜ್ಜುಗುಜ್ಜಾಗಿತ್ತು ಎಂದಷ್ಟೇ ಅರಿವಾಗಿದ್ದು, ನಾಣ್ಯವನ್ನು ಪಡೆದು ಕುಣಿತವನ್ನು ಮುಂದುವರೆಸಿದಳು. ಮತ್ತೆ ಎರಡು ಮೂರು ನಾಣ್ಯಗಳು, ಬೇರೆ ಬೇರೆ ಬೆಲೆಯವು. ಉತ್ಸಾಹ ಮರಳಿ ಬರುತ್ತಿದೆ ಎನ್ನಿಸಿತು. ಅದೃಷ್ಟ ಅವಳ ಕಡೆಗಿತ್ತು, ಹುರುಪಿನಿಂದ ಕುಣಿಯಲಾರಂಭಿಸಿದಳು. ಅವಳ ಅಣ್ಣ ಅವತ್ತು ಒಂದು ಪಿಕ್ಚರ್ ನೋಡಲು ಕರೆದು ಕೊಂಡು ಹೋಗಿದ್ದನಲ್ಲ? ಏನದು ಅದರ ಹೆಸರು? ಅದರಲ್ಲಿಯೂ ಹುಡುಗಿಯೊಬ್ಬಳು ಹೀಗೇ, ತನ್ನಂತೆಯೇ, ಕುಣಿಯುತ್ತಿದ್ದಳಲ್ಲವೇ?

ಚಂಪೂದಿ ಈಗ ವೃತ್ತದ ಮಧ್ಯದ ತನ್ನ ಜಾಗ ಬಿಟ್ಟು ಸುತ್ತ ಪ್ರತಿಯೊಬ್ಬರ ಹತ್ತಿರ ನಲಿಯುತ್ತಾ ಬಳುಕುತ್ತಾ ಸಾಗಿದ್ದಳು. ಪಿಕ್ಚರಿನ ಆ ಹುಡುಗಿಯಂತೆಯೇ ಮಾಟವಾಗಿ ಕಣ್ಣು ಹೊರಳಿಸುತ್ತಾ ಮರುಳುಗೊಳಿಸುವ ಭಂಗಿಗಳಲ್ಲಿ ಕುಣಿಯುತ್ತಾ ನಡೆದಳು. ಎಲ್ಲಿಂದಲೋ ಒಂದು ರೂಪಾಯಿಯ ಎರಡು ಮೂರು ನೋಟುಗಳು ಅವಳ ಹರಕಲು ಬ್ಲೌಸಿನೊಳಗೆ ತುರುಕಲ್ಪಟ್ಟವು. ಈ ದೊಡ್ಡ ಮನೆಯ ಹೆಂಗಸರು ಹಳೆಯ ಫ್ರಾಕುಗಳನ್ನು ಮೇಲಿಂದ ಎಸೆಯದಿದ್ದರೆ ಕತ್ತೇಬಾಲ. ಅವಳ ಎಳೆಯ ಮೃದುವಾದ ಎದೆ ಈಗ ರೂಪಾಯಿಗಳಿಂದ ತುಂಬಿ ಹೋಗಿತ್ತು,

ದರ್ಶನಿಯೋ ಇದ್ದಲ್ಲಿಗೆ ಓಡಿ ಉದ್ಗರಿಸಿದಳು, 'ಅಣ್ಣಾ, ನೋಡಿಲ್ಲಿ, ಎಷ್ಟೊಂದೂ...!' ಮುದುರಿದ ನೋಟುಗಳನ್ನು ತೋರಿಸುತ್ತಾ ಅತೀವ ಉತ್ಸಾಹದಲ್ಲಿ ನಕ್ಕಳು.

'ಅವ್ವಂಗ್ ಕೊಡು...' ದುರುದುರನೆ ನೋಡುತ್ತಾ ಕರ್ಕಶ ಧ್ವನಿಯಲ್ಲಿ ಹೇಳಿದ ರೀತಿಗೆ ಹುಡುಗಿಯ ಮುಖ ಬಾಡಿತು. ಏನಾಗಿದೆ ಇವನಿಗೆ, ಗೂಬೆ ತರ ಆಡ್ತಿದಾನೆ? ತಾಯಿಯ ಮಡಿಲಲ್ಲಿ ನೋಟುಗಳನ್ನೆಸೆಯುವ ಹೊತ್ತಿಗೆ ಮತ್ತೊಂದು ಶಿಳ್ಳೆ ಕೇಳಿಸಿತು. ಬೆಪ್ಪಾಗಿ ನೋಡುತ್ತಿದ್ದ ತಾಯಿಯ ಮುಖವನ್ನೂ ಗಮನಿಸದೆ ಮತ್ತೆ ಓಡಿದಳು. ಮೇಲೆ ಆಡುತ್ತಿದ್ದ ನಾಲ್ಕಾಣೆಯ ನಾಣ್ಯವನ್ನು ನೆಗೆದು ಹಿಡಿಯುವಷ್ಟರಲ್ಲಿ ಗುಂಪಿನ ಮಧ್ಯೆ ಸಿಕ್ಕಿಬಿದ್ದಿದ್ದಳು. ಎದೆಯ ಮೇಲೆ ಬೀಳುತ್ತಿದ್ದ ಒತ್ತಡ ಉಸಿರು ಕಟ್ಟಿಸುತ್ತಿದೆ ಎಂದೆನ್ನಿಸಿತು. ತಪ್ಪಿಸಿಕೊಳ್ಳಲು ಆಗುತ್ತಲೇ ಇಲ್ಲ, ಡ್ರೈವರ್ ಹತ್ತಿರವಿದ್ದ. 'ಯಾಕೆ ಹುಡುಗಿ, ಹೆದರಿಕೊಂಡಿದ್ದೀಯೆ?' ಎನ್ನುತ್ತಾ ಗುಂಪಿನಿಂದ ಹೊರ ತಂದ. ಅಬ್ಬ! ಚಂಪೂದಿ ಅವನನ್ನು ನೋಡಿ ಮುಗುಳ್ನಕ್ಕಳು. ಎಷ್ಟು ಒಳ್ಳೆಯವನು ನಿಜವಾಗಿಯೂ ಸಭ್ಯಸ್ಥ. ಪೂರ್ತಿ ಮನಸ್ಸನ್ನು ನೆಟ್ಟು ಮತ್ತೆ ಕುಣಿಯಲಾರಂಭಿಸಿದಳು. ಥೇಟ್ ಆ ಪಿಕ್ಚರಿನ ಹುಡುಗಿಯಂತೆಯೇ, ಸುತ್ತುತ್ತಾ, ನಲಿಯುತ್ತಾ... ಅದರಲ್ಲಿಯೂ ಜನ ಅವಳನ್ನು ದುಡ್ಡಲ್ಲಿ ಮುಳುಗಿಸಿದ್ದರಲ್ಲ, ಕಣ್ಮುಂದೆ ನೋಟಿನ, ನಾಣ್ಯಗಳ ಗುಡ್ಡೆ ಗಾಳಿಯಲ್ಲಿ ನರ್ತಿಸುತ್ತಿತ್ತು, ಹಸಿವು, ಬಾಯಾರಿಕೆ, ಆಯಾಸ, ಎಲ್ಲ ಎಲ್ಲಿ ಹೋಯಿತೋ. ಜನರ ಗುಂಪಿನ ಮಧ್ಯೆ ಕುಣಿದದ್ದೂ ಕುಣಿದದ್ದೇ, ನಲಿದದ್ದೂ ನಲಿದದ್ದೇ. ಗುಂಪು ಜಾಸ್ತಿಯಾದಂತೆಲ್ಲಾ ಅವಳ ಮೈ ಜಾಸ್ತಿ ನುಜ್ಜುಗುಜ್ಜಾಗುತ್ತಿತ್ತು. ಪ್ರತಿ ಬಾರಿಯೂ ಅವಳನ್ನು ರಕ್ಷಿಸಲು ಡ್ರೈವರ್ ಇದ್ದ. ಎಳೆಯ ಎದೆ ನೋಯಲಾರಂಭಿಸಿತ್ತು. ಹೊಳೆಯುವ ನಾಣ್ಯವೊಂದನ್ನು ಅವಳ ಅಂಗೈಯಲ್ಲಿಟ್ಟು ಒತ್ತುತ್ತಿದ್ದ. ಹೊಳೆಯುವ ಕಣ್ಣೊಂದಿಗೆ ಮತ್ತೆ ಕುಣಿತ...

ಹತ್ತುಪೈಸೆ ನಾಣ್ಯಕ್ಕೆ ಚಾಚಿದ್ದ ಅವಳ ಕೈಯನ್ನು ಒರಟಾಗಿ ಯಾರೋ ಹಿಂದಕ್ಕೆ ಎಳೆದಂತಾಯಿತು. ಬೆಚ್ಚಿಬಿದ್ದು ನೋಡಿದರೆ ದರ್ಶನಿಯೋ! ಕೋಪದಲ್ಲಿ ಉರಿಯುತ್ತಿದ್ದ. ಭಯದಿಂದ ನಡುಗಿದಳು.

'ಕಾಸು ಮಾಡಿದ್ದು ಸಾಕು. ಮನೆಗ್ ಹೋಗೋಣ ನಡೀ. ಕುಣ್ತನೂ ಬೇಡ, ಏನೂ ಬೇಡ.'

'ಅಣ್ಣಾ... ಇನ್ನೊಂದ್ ಸ್ವಲ್ಪ ಹೊತ್ತಷ್ಟೇ. ನಾಳೆ ನಾವೆಲ್ಲ ಪಿಕ್ಚರಿಗೂ ಹೋಗ್ಬೋದು, ಐಸ್ ಕ್ರೀಮೂ ತಿನ್ಬೋದೂ..'

'ಒಂದ್ ಸಲಿ ಹೇಳಿದ್ರೆ ತಲಿಗ್ ಹೋಗಲ್ಲೇನು ತೆಗೆದ್ ಒಂದ್ ಬಿಟ್ಟಾ ಅಂದ್ರೇ...'

ಕೈಯನ್ನು ಬಲವಾಗಿ ಹಿಡಿದು ದರ್ಶನಿಯೋ ಗುಂಪಿಂದ ಹೊರಬಂದ. ಕನಿಯನನ್ನು ಸೊಂಟಕ್ಕೇರಿಸಿಕೊಂಡು ಜೇವ್ಲಿ ಅವರನ್ನು ಕೂಡಿಕೊಂಡಳು.

'ದುಡ್ಡ್ ಕೊಟ್ಟೋರ್ಗೆಲ್ಲಾ ನಮಸ್ಕಾರ...ನಾವಿನ್ಮೇಲೆ ಇದೇ ತರದ್ ದೊಡ್ಡ್ ದೊಡ್ಡ್ ಮನೆಗಳಿಗ್ ಹೋಗ್ತೀವಿ.. ಗುಡ್ಲುಗಳ್ ಕಡೀಗ್ ಹೋಗಲ್ಲ...'

ದರ ದರ ಎಳೆದುಕೊಂಡು ನಡೆಯುತ್ತಿದ್ದ ಅಣ್ಣನ ಕಡೆಗೊಮ್ಮೆ ಚಂಪೂದಿ ದೃಷ್ಟಿ ಬೀರಿ ತಾಯಿಗೆ ಹೇಳಿದಳು 'ಆ ಪಿಕ್ಚರಲ್ಲಿ ನೋಡಿದ್ವಲ್ಲ, ಆ ಕುಣ್ತನೇ ಅವರ್ಗೆಲ್ಲ ತುಂಬ ಇಷ್ಟ ಆಗಿದ್ದು...'

'ದರ್ಶನಿಯೋ, ರಾತ್ರಿ ಎಲ್ಲ ಒಟ್ಟಿಗ್ ಯಾವ್ದಾದ್ರೂ ಒಳ್ಳೆ ಪಿಕ್ಚರ್ರಿಗೆ ಹೋಗೋಣ...?' ಅಲ್ಲಿಯತನಕ ಒಂದು ಮಾತಿಲ್ಲದೆ ಬಿಮ್ಮನೆ ಬಿಗಿದ ಮುಖದೊಂದಿಗೆ ಹೆಜ್ಜೆ ಹಾಕುತ್ತಿದ್ದ ದರ್ಶನಿಯೋ ತಟ್ಟನೆ ಗುಡುಗಿದ, 'ಇಲ್ಲಿಗ್ ಬರ್ಬೇಕ್ ಅಂತ ಇನ್ನಾ ವತ್ತಾದ್ರೂ ಬಾಯಿ ಬಿಟ್ಟಿಯೋ ಜೋಕೆ...ಕಾಲು ಮುರಿದ್ ಬಿಟ್ಟೇನೂ..'

ಪಾಪದ ಚಂಪೂದಿಗೆ ಏನೂ ಅರ್ಥವಾಗಲಿಲ್ಲ, ಅಣ್ಣನ ಕೈ ಹಿಡಿದು ತಲೆತಗ್ಗಿಸಿ ನಡೆದಳು.

(ಮೂಲ: ಗುಜರಾತಿ ಲೇಖಕಿ ವರ್ಷಾ ಅದಾಲ್ಜ ಅವ ಕಥೆ "ಬಿಚಾರಿ ಚಂಪೂದಿ", ವಿಮೆನ್ ರೈಟಿಂಗ್ ಇನ್ ಇಂಡಿಯಾ, ಸಂ: ಸೂಸಿ ಥಾರು ಮತ್ತು ಲಲಿತಾ ಕೆ

ಕನ್ನಡಕ್ಕೆ : ಸುಕನ್ಯಾ ಕನಾರಳ್ಳಿ

ಜೀವನದ ಬಿರುಕುಗಳ ಮೂಲಕ ಸಾವಿನ ಶೋಕಗೀತೆಯು ಹೊರಹೊಮ್ಮುತ್ತದೆ

ತನನಂ ತನನಂ



ತೇಲಿ ಬಂದ ದಾರಿ

ಕವಿತಾ ಲಂಕೇಶ್

ಹದವಾದ ಸಾಹಿತ್ಯ ಮುದ ನೀಡುವ ಸಂಗೀತ

ಮುಂಜಾನೆ ಎದ್ದಾಕ್ಷಣ ನಮ್ಮ ರಾಜಕುಮಾರಿಯದೊಂದೇ ಹಠ.... ಅವಳು 'ಕಂಡೆ ನಾ ಕಂಡೆನಾ' ಎನ್ನುತ್ತಿದ್ದಂತೆ ನಾನು ಅಥವಾ ಅಮ್ಮ 'ಕಂಡೆ ನಾ ಗೋವಿಂದನಾ' ಹಾಡು ಹಾಕಬೇಕು. ಆಗ ಈ ರಾಜಕುಮಾರಿ ತನ್ನದೇ ಸ್ಟೈಲಲ್ಲಿ ಹೆಜ್ಜೆ ಹಾಕುತ್ತಾಳೆ.

ಹೌದು. ಈ ಮೊದಲು 'ಜೋಗಿ ಜೋಗಿ' ಗುಂಗಿನಲ್ಲಿದ್ದ ನನ್ನ ಮಗಳು ಇಶಾಗೀಗ 'ತನನಂ ತನನಂ'ನ 'ಕಂಡೆ ನಾ ಗೋವಿಂದನಾ' ಅಂದ್ರೆ ಫುಲ್ ಖುಷಿ.... ಹಾಗೆಯೇ ಕಾರ್‌ನಲ್ಲಿ ಹೋಗುವಾಗ ಸದಾ 'ತನನಂ ತನನಂ'ನ ಹಾಡುಗಳನ್ನು ಕೇಳುತ್ತಾ ಹೋಗುವುದೂ ಎಸ್.ಎಮ್. ಸುರೇಶ್‌ಗೆ hobby ಆಗಿಬಿಟ್ಟಿದೆಯಂತೆ.

'ತನನಂ ತನನಂ' ಸಂಗೀತ ಪ್ರಧಾನ ಪ್ರೇಮಕಾವ್ಯ. ಮೂಲಕತೆಯಲ್ಲಿ 'ಟವಿಲ್' (Tavil) ಎಂಬ ಸಂಗೀತ ಉಪಕರಣ ಪ್ರಧಾನವಾಗಿದೆ. ಈಗ ಅದನ್ನು ನುಡಿಸೋದು ಯಾರಿಗೂ ಗೊತ್ತಿದ್ದಂತಿಲ್ಲ. ಅದಕ್ಕೆ ಇಲ್ಲಿ ವಯೋಲಿನ್ ಬಂತು. ಚಿತ್ರದಲ್ಲಿ ವಯೋಲಿನ್ ಸಹ ಒಂದು ಪಾತ್ರವೇ! ಕನ್ನಡದಲ್ಲಿ ವಯೋಲಿನ್ ಪ್ರಧಾನವಾಗಿಟ್ಟುಕೊಂಡ ಚಿತ್ರ ಇದೇ ಮೊದಲೇನೊ? ಒಂದು ಇಂಟರೆಸ್ಟಿಂಗ್ ವಿಷಯ ಗೊತ್ತಾ? ನಮ್ಮ ಕನ್ನಡ ಚಿತ್ರಗಳಲ್ಲಿ ಹೀರೋ, ಹೀರೋಯಿನ್ ನಿಂತುಕೊಂಡೇ ಬರಾಬರಾ ವಯೋಲಿನ್ ಕೊಯ್ದು ಹಾಕ್ತಾರಲ್ಲ... ಭಾರತೀಯ ಪದ್ಧತಿಯಲ್ಲಿ ಯಾವ ಸಂಗೀತಕರ್ಮಿಯೂ ನಿಂತುಕೊಂಡು ವಯೋಲಿನ್ ನುಡಿಸುವುದಿಲ್ಲ, ಇಲ್ಲೆಲ್ಲಾ ಕುಳಿತುಕೊಂಡು ನುಡಿಸುವುದೇ ಪದ್ಧತಿ.

ವಯೋಲಿನ್ ಎಂದಾಕ್ಷಣ ಮೊಟ್ಟಮೊದಲಿಗೆ ನೆನಪಾಗುವುದು ವಿಶ್ವವಿಖ್ಯಾತರಾದ ಡಾ. ಎಲ್. ಸುಬ್ರಮಣ್ಯಂ! ನನ್ನ ಸಿನಿಮಾದ ಬ್ಯಾಕ್‌ಗ್ರೌಂಡ್ ಮ್ಯೂಸಿಕ್ (BGM)ಗೆ ಬೇಕಾದ ವಯೋಲಿನ್ ಬಿಟ್ಸ್‌ಗಳನ್ನು ಡಾ. ಎಲ್. ಸುಬ್ರಮಣ್ಯಂರವರಿಂದಲೇ ಮಾಡಿಸುವುದೆಂದು ನಿರ್ಧರಿಸಿದೆ. ಆದರೆ ಡಾ. ಸುಬ್ರಮಣ್ಯಂರವರನ್ನು ಭೇಟಿ ಆಗಲಿಕ್ಕೇ 2 ತಿಂಗಳು ಹಿಡಿಯಿತು. ಅಂತರರಾಷ್ಟ್ರೀಯ ಸಂಗೀತಗೋಷ್ಠಿ ವಿದೇಶಿ ಯುನಿವರ್ಸಿಟಿಗಳಲ್ಲಿ ಉಪನ್ಯಾಸ ಹೀಗೆ ಸದಾ busy ಇರುವ ಸುಬ್ರಮಣ್ಯಂರವರು ಸಿನಿಮಾ ಕೆಲಸಗಳಿಗೆ ಒಪ್ಪಿಕೊಳ್ಳುವುದೇ ಇಲ್ಲ. ಆದರೆ ನನ್ನ ಸ್ಕ್ರಿಪ್ಟ್ ಮತ್ತು ಅದರಲ್ಲಿನ ವಯೋಲಿನ್ ಪಾತ್ರ, ಸಂಗೀತದ ಜೊತೆ ಜೊತೆ ಹರಿಯುವ ಪ್ರೇಮಲಹರಿ ಇವೆಲ್ಲವೂ ಅವರಿಗೆ ಇಷ್ಟವಾಗಿಬಿಟ್ಟಿತು. I won half the battle! ಸಿನಿಮಾಗಳಿಗೆ ಸಂಗೀತ ನೀಡಲು ತಾವು ಇಷ್ಟಪಡುವುದಿಲ್ಲ ಮತ್ತು ತಮಗೆ ಈಗಿರುವ ವೇಳೆಯೇ ಸಾಕಾಗುತ್ತಿಲ್ಲ ಎಂದು ಹೇಳಿದ್ದ ಸುಬ್ರಮಣ್ಯಂರವರು 'ಈ ಚಿತ್ರಕತೆಗೆ ವಯೋಲಿನ್‌ನ ಪ್ರೇಮ ತರಂಗಗಳು ಅವಶ್ಯವಿರುವುದರಿಂದ ಮತ್ತು ಚಿತ್ರಕತೆ ನನಗೆ ಹಿಡಿಸಿರುವುದರಿಂದ ಖಂಡಿತ ನಾನು ಬಿಟ್ಸ್ ಮಾಡಿಕೊಡುವೆ' ಎಂದುಬಿಟ್ಟರು! ನನಗೆ ಖುಷಿಯೋ ಖುಷಿ. ಏಕೆಂದರೆ ಈ ಮೊದಲು ನೂರಾರು ಆಫರ್‌ಗಳನ್ನು ತಿರಸ್ಕರಿಸಿದ್ದ ಡಾ. ಎಲ್.ಎಸ್. ಈ ಹಿಂದೆ ಖ್ಯಾತ ಇಟಾಲಿಯನ್ ನಿರ್ದೇಶಕ ಬರ್ತಲೂಚಿಯ "Little Buddha" ಚಿತ್ರಕ್ಕೆ ಬಿಟ್ಸ್ ಮಾಡಿಕೊಟ್ಟಿದ್ದು ಬಿಟ್ಟರೆ ಮತ್ತಾವ ಸಿನಿಮಾ ತಂಟೆಗೂ ಹೋಗಿಲ್ಲ. ಬರ್ತಲೂಚಿ ರವರ ಸಿನಿಮಾಕ್ಕೆ ಹಿನ್ನೆಲೆ ಸಂಗೀತ ನೀಡಿದ್ದ ಡಾ. ಸುಬ್ರಮಣ್ಯಂರವರು ನನ್ನ ಸಿನಿಮಾಕ್ಕೂ ಸಂಗೀತದ ಬಿಟ್ಸ್ ನೀಡುತ್ತಾರೆಂಬುದು ಸಾಮಾನ್ಯ ಸಂಗತಿಯಲ್ಲ.



'ತನನಂ ತನನಂ'ಗೆ ಡಾ. ಎಲ್.ಎಸ್. ಮಾಡಿಕೊಟ್ಟಿರುವ ಬಿಟ್ಸ್ ಕೇಳಬೇಕು ನೀವು! Superb!! ಇಡೀ ಚಿತ್ರದ ಸಾರಾಂಶವೆಲ್ಲ ಈ ಬಿಟ್ಸ್‌ಗಳಲ್ಲಿ ತೇಲಿ ಬಂದಂತಾಗುತ್ತದೆ. ಸುಬ್ರಮಣ್ಯಂರಂತಹ ಖ್ಯಾತರ ಬಿಟ್ಸ್ ಬಳಸುವಾಗ ನಾನು ಅತೀ ಜಾಗರೂಕತೆಯಿಂದ ಚಿತ್ರಿಸಬೇಕಲ್ಲವೇ? ವಯೋಲಿನ್ ಹೇಗೆ ಹಿಡಿದುಕೊಳ್ಳುವುದು, ನುಡಿಸುವ ಬಗೆ ಹೇಗೆ ಎಂದು ಮೂರು ದಿನಗಳ ಕಾಲ ಕಾರ್ನಾಡ್, ಶ್ಯಾಮ್‌ಗೆ ತರಬೇತಿ ನೀಡಿದ್ದು ಸುಬ್ರಮಣ್ಯಂರವರ ಶಿಷ್ಯೆ ಶ್ರೀಲತಾರಾವ್ ರವರು.

ಚಿತ್ರದಲ್ಲಿ ಬರುವ ಪ್ರಮುಖ ಪಾತ್ರವಾದ ಸಂಗೀತ ವಿದ್ವಾಂಸನ ಪಾತ್ರಕ್ಕೆ ಅನಂತ್‌ನಾಗ್ ಆಗಬಹುದೇ ಎಂದು ಯೋಚಿಸಿದೆನಾದರೂ, ಸಂಪ್ರದಾಯಸ್ಥ, ಕಠೋರತನದ ಈ ಪಾತ್ರಕ್ಕೆ ಗಿರೀಶ್ ಕಾರ್ನಾಡರೇ ಸೂಕ್ತ ಅನ್ನಿಸಿತು. ನಾನು, ನೀವೆಲ್ಲ 'ಆನಂದ ಭೈರವಿ'ಯಲ್ಲಿನ ಕಾರ್ನಾಡರ ಪಾತ್ರ ಮರೆಯಲಾದೀತೆ? AK 47 ಆದ ಮೇಲೆ ಕಾರ್ನಾಡ್ ಕನ್ನಡ ಚಿತ್ರರಂಗದಿಂದ ದೂರವೇ ಉಳಿದಿದ್ದರು.

"ಮೊದಲೆಲ್ಲ ಸ್ಕ್ರಿಪ್ಟ್ ಚೆನ್ನಾಗಿದೆಯೆಂದು ಒಪ್ಪಿಕೊಳ್ಳುತ್ತಿದ್ದೆ. ಆದರೆ ಚಿತ್ರ ರೆಡಿ ಆಗುವಾಗ ಇನ್ನೇನೇನೋ ಚಿತ್ರಿಸಿಬಿಡುತ್ತಿದ್ದರು. ಅದಕ್ಕೇ ನಾನು ಇತ್ತೀಚೆಗೆ ಬಹಳ ಆಫರ್ಸ್ ರಿಜೆಕ್ಟ್ ಮಾಡಿದೆ. ನಿರ್ದೇಶಕರನ್ನು ನೋಡಿ ಆಫರ್ ಒಪ್ಪಿಕೊಳ್ಳುವುದೇ ಸೂಕ್ತ ಅಂದುಕೊಂಡೆ. ಹಿಂದಿಯ 'ಇಕ್ಬಾಲ್' ಚಿತ್ರಕ್ಕೆ ಒಪ್ಪಿಕೊಂಡಿದ್ದು ನಾಗೇಶ್ ಕುಕನೂರ್ ಟ್ಯಾಲೆಂಟ್ ಗೊತ್ತಿದ್ದರಿಂದ. ಈಗಲೂ ಅಷ್ಟೇ. ನಾನು 'ತನನಂ ತನನಂ' ಆಫರ್ ಒಪ್ಪಿಕೊಳ್ಳುತ್ತಿರುವುದು ನಿನ್ನ ಪ್ರತಿಭೆ, ಸೂಕ್ಷ್ಮತೆಗಳೆಲ್ಲ ನನಗೆ ಮೊದಲೇ ಗೊತ್ತಿರುವುದರಿಂದ" ಎಂದು ಆಫರ್ ಒಪ್ಪಿಕೊಂಡ ಗಿರೀಶ್ ಕಾರ್ನಾಡ್ ನನ್ನನ್ನು ಹೊಗಳುತ್ತಿದ್ದರೆ ನನಗೋ ಒಂದಿಷ್ಟು ಆನಂದ, ಒಂದಿಷ್ಟು ಮುಜುಗರ...

ಚಿತ್ರದ ಹಾಡುಗಳನ್ನು ರೆಡಿ ಮಾಡಲು ಎರಡು ತಿಂಗಳೇ ಹಿಡಿಯಿತು. ಕಲ್ಯಾಣ್ ಇಲ್ಲೇ ನಮ್ಮ ಗಾಂಧಿ ಬಜಾರಿನ ಆಫೀಸಲ್ಲೇ ಕುಳಿತು ಹಾಡುಗಳನ್ನು ಬರೆಯುತ್ತಿದ್ದರು. ಒಮ್ಮೊಮ್ಮೆ ಒಂದೊಂದು ಶಬ್ದ ನನಗೆ ಬೇಡ ಎನಿಸಿಬಿಡುತ್ತಿತ್ತು. ಕೆಲವೊಮ್ಮೆ ಚಿತ್ರದ ತಿರುಳಿಗೆ ಹೊಂದದ ಕೆಲವು ಲೈನ್‌ಗಳನ್ನು ಬದಲಿಸಲು ಹೇಳುತ್ತಿದ್ದೆ. ಹೀಗೇ ಬರಲಿ ಎಂದು ಸಲಹೆ ಕೊಡುತ್ತಿದ್ದೆ. ಶಾಂತ ಸ್ವಭಾವದ ಕಲ್ಯಾಣ್ ಆಫೀಸಿಂದ ಹೊರಗೆ ಹೋಗಿ ಗಾಂಧಿ ಬಜಾರಿನಲ್ಲೆಲ್ಲ ಸುತ್ತಾಡಿ, ಮೂಡ್ ತೊಗೊಂಡು ಬಂದು ಮತ್ತೆ ಸಾಹಿತ್ಯ ಸೃಷ್ಟಿಸುತ್ತಿದ್ದರು. 'ಚೆಲುವಾಂತ ರಾಜಕುಮಾರ' ಮೊದಲು ಸಾದಾ ಪ್ರೇಮಗೀತೆ ಯಂತಿತ್ತು. ನಾನು ಈ ಗೀತೆಗಾಗಿ fantasy set ಹಾಕಿಸಿದ್ದರಿಂದ ಇಡೀ ಗೀತೆಯನ್ನೇ ಬದಲಾಯಿಸಲು ಹೇಳಿದೆ. ಈಗ ಅದು ತುಂಬಾ ಚೆನ್ನಾಗಿದೆ. ಹಾಗೆಯೇ 'ಕೂಗಳತೆ' ಹಾಡು ಮೊದಲು ಬೇರೆ ರೀತಿನೇ ಇತ್ತು, ನಾನು ಪಟ್ಟು ಬಿದ್ದು ಅದು ಪ್ರೇಮಿಗಳ, ಗೆಳೆಯ-ಗೆಳತಿಯರ ಕಾವ್ಯ ಸಂವಾದವಾಗುವಂತೆ ರೂಪಿಸಿ ಕೊಂಡೆ. ಕಲ್ಯಾಣ್ ನಿಜಕ್ಕೂ ಚಿತ್ರದ ಸಾರಾಂಶಕ್ಕೆ ತಕ್ಕಂತೆ ಅರ್ಥಪೂರ್ಣ ಹಾಡುಗಳನ್ನು ರಚಿಸಿದ್ದಾರೆ.

ಹಾಡುಗಳನ್ನು ಬರೆದಿರುವ ಕಲ್ಯಾಣ್‌ರವರೇ ಸಂಗೀತ ನೀಡಿದರೆ ಸರಳವೂ ಆಗುತ್ತೆ ಅರ್ಥಪೂರ್ಣವೂ ಆಗಿರುತ್ತೆ ಎಂದು ನಾನು ಯೋಚಿಸಿದೆ. ಆದರೆ ನಿರ್ಮಾಪಕ ಸುರೇಶ್‌ಗೆ ಆರ್.ಪಿ. ಪಟ್ನಾಯಕ್‌ರಂತಹ ಹೊರಗಿನವರ ಮೇಲೇ ಹೆಚ್ಚು ನಂಬಿಕೆ ಇತ್ತು.

ಕಲ್ಯಾಣ್ ತಾವೇ ಬರೆದ ಸಾಹಿತ್ಯಕ್ಕೆ ಟ್ಯೂನ್ ಹೆಣೆಯತೊಡಗಿದರು. ಒಂದು ಸಾರಿ ಸುರೇಶ್ "ಮೇಡಮ್, ನಮ್ಮ ಹಿಂದಿನ ಮ್ಯೂಸಿಕ್ ಡೈರೆಕ್ಟ್ರು ಏಳೆಂಟು ಟ್ಯೂನ್ ಕೊಟ್ಟುಬಿಡೋರು. ಅದರಲ್ಲಿ ನಾವು ಒಂದು ಸೆಲೆಕ್ಟ್ ಮಾಡಿ ಅದಕ್ಕೆ ಪದಗಳನ್ನು ಸೇರಿಸುತ್ತಿದ್ದೆವು. ನೀವು ಹಾಗೆ ಮಾಡಿ ಮೇಡಮ್" ಎಂದುಬಿಟ್ಟರು. ನನಗೋ ನಗೆ ಉಕ್ಕಿ ಬಂತು. ಬಹುತೇಕ ನಿರ್ದೇಶಕರು ಮೊದಲಿಗೆ ಟ್ಯೂನ್ ಮಾಡಿಸಿ ನಂತರ ಆ ಟ್ಯೂನ್‌ಗೆ 'ಸಾಹಿತ್ಯ' ತುರುಕಿಸಿ ಹಾಡು ಬರೆಯಲು ಹೇಳುತ್ತಾರೆ!

ನನ್ನಾವ ಚಿತ್ರದಲ್ಲೂ ನಾನು ಹೀಗೆ ಮಾಡಿಲ್ಲ. ಹಾಡಿನ ಸಾಹಿತ್ಯಕ್ಕೆ ತಕ್ಕಂತೆ ಟ್ಯೂನ್ ಇದ್ದರೆ ಮಾತ್ರ ಅದಕ್ಕೊಂದು ಅರ್ಥವಿರುತ್ತೆ ಅಲ್ವಾ?

'ಎಲ್ಲಿಂದಲೋ ಬಂದವರು' ಸಿನಿಮಾಕ್ಕಾಗಿ ವಿಜಯ್ ಭಾಸ್ಕರ್‌ಗೆ 5 ಸಾವಿರ ರೂ. ನೀಡಿ ಸಂಗೀತ ನಿರ್ದೇಶನ ಮಾಡಿ ಅಂದಿದ್ದರಂತೆ ಅಪ್ಪ, 'ನೀವು ಹಾಡುಗಳನ್ನು ಬೇಗ ಕೊಟ್ಟರೆ ಒಳ್ಳೇದು' ಅಂದರಂತೆ ವಿಜಯ್ ಭಾಸ್ಕರ್. 'ಒಂದ್ಹತ್ತು ನಿಮಿಷ ತಡೀರಿ' ಎಂದ ಅಪ್ಪ 'ಎಲ್ಲಿದ್ದೆ ಇಲ್ಲೀ ತನಕ, ಎಲ್ಲಿಂದ ಬಂದ್ಯವ್ವ' ಮತ್ತು 'ಕೆಂಪಾದವೋ ಎಲ್ಲಾ ಕೆಂಪಾದವೋ' ಹಾಡುಗಳನ್ನು ರಚಿಸಿ ಕೊಟ್ಟೇಬಿಟ್ಟರು. ಅಪ್ಪನ ಸಾಹಿತ್ಯಕ್ಕೆ ತಕ್ಕಂತೆ ವಿಜಯ್ ಭಾಸ್ಕರ್ ಟ್ಯೂನ್ ಹಾಕಿದರು. ನೋಡಿ ಇವತ್ತಿಗೂ ಆ ಹಾಡುಗಳು ಮನೆ ಮಾತು. ಇಂದಿಗೂ AIR ನಲ್ಲಿ ವಾರಕ್ಕೆ ಎರಡು ಮೂರು ಬಾರಿ ಬರ್ತಾ ಇರುತ್ತೆ.

ಚಿತ್ರಾ ಹಾಡಿರುವ 'ಕಂಡೆ ನಾ ಗೋವಿಂದನಾ' ಆರಂಭದಲ್ಲಿ ಶಾಸ್ತ್ರೀಯ ಸಂಗೀತದಲ್ಲಿ ಶುರುವಾಗಿ, ಸರಕ್ಕನೆ ಸ್ಪೀಡ್ ತೆಗೆದುಕೊಂಡು ಕಮರ್ಷಿಯಲ್ ಧಾಟಿಗೆ ತಿರುಗಿ ರೋಮಾಂಚನ ಮೂಡಿಸುತ್ತದೆ. ನಮ್ಮ ಇಶಾಳಂತೆ ನೀವು, ನಿಮ್ಮ ಮಕ್ಕಳು ಇದನ್ನು ಖಂಡಿತಾ enjoy ಮಾಡ್ತಿರಿ.

'ಕಂಡೆ ನಾ ಗೋವಿಂದನಾ' ಹಾಡಿಗಾಗಿ ನಾನು, ಚಿತ್ರಾ ಸ್ಟುಡಿಯೋದಲ್ಲಿ ಎಸ್.ಪಿ. ಬಾಲಸುಬ್ರಮಣ್ಯರಿಗಾಗಿ ಕಾಯುತ್ತಿದ್ದೆವು. ತಡವಾಗಿ ಬಂದ ಎಸ್.ಪಿ.ಬಿ. ಅವರಿಗೆ ಡೈರೆಕ್ಟ್ರು ಅಂತಾ introduce ಮಾಡಿಕೊಂಡೆ. ಅಂದೇಕೊ ಅವರು ಮೂಡ್‌ನಲ್ಲಿರಲಿಲ್ಲ ಅನಿಸುತ್ತೆ. ಎಸ್.ಪಿ. ಶುರು ಮಾಡಿದರು. ಇಲ್ಲ, ಇದು ಸರಿಇಲ್ಲ, ಬೇರೆ ತರಹ ಹಾಡಿ ಎಂದು ಹೇಳಬೇಕೆನಿಸಿದರೂ ಸುಮ್ಮನಿದ್ದೆ. 40 ಸಾವಿರ ಹಾಡು ಹಾಡಿದವರಿಗೆ ನಾನೇನು ಸಲಹೆ ಕೊಡುವುದು? ಆದರೆ ಅವರೇ "ನೊ ನೊ.... ಇದು ಬೇಡ...." ಎನ್ನುತ್ತಾ ಮತ್ತೆ ಥಟ್ಟನೆ ರಿಫ್ರೆಶ್ ಆಗಿ ಇನ್ನೊಂದು ರೀತಿಯಲ್ಲಿ ಪ್ರಯತ್ನಿಸುತ್ತಿದ್ದರು. ಅವರ ಮನಸ್ಸಿಗೆ ಸಮಾಧಾನ ಆಗುವವರೆಗೆ ಅವರು ಫೈನಲೈಸ್ ಮಾಡಲೇ ಇಲ್ಲ, ಇಂತಹ ಗಾಯಕರಿದ್ದರೆ ಡೈರೆಕ್ಟ್ರುಗಳಿಗೆ ಹೊರೆಯೇ ಇರುವುದಿಲ್ಲ ಎನಿಸಿತು.

ಹಾಡಿದ ಮೇಲೆ ನನ್ನ ಬಳಿ ಬಂದ ಎಸ್.ಪಿ. "Thanks a lot. ಕೆಟ್ಟ ಮೂಡ್‌ನಲ್ಲಿ ಬಂದಿದ್ದ ನಾನು ಈ ಹಾಡು ಹೇಳ್ತಾ ಹೇಳ್ತಾ ತುಂಬಾ ಲವಲವಿಕೆ



ಯುವನಾಗಿಬಿಟ್ಟೆ. ಸೂಪರ್ ಆಗಿದೆ. ಇನ್ನೊಮ್ಮೆ Thanks" ಎಂದು ಹೇಳಿದಾಗ ಹಿರಿಯ ಪ್ರತಿಭೆಯ ಸರಳತನ ನನ್ನನ್ನು ಆವರಿಸಿಬಿಟ್ಟಿತು.

'ಮರ್ಡರ್' ಖ್ಯಾತಿಯ ಕುನಾಲ್ ಗಾಂಜಾವಾಲ ಹಾಡಿರುವ ಒಂದು ವಿಷಾದ ಗೀತೆ ಮತ್ತು 'ಚೆಲುವಾಂತ ರಾಜಕುಮಾರ' ಎರಡೂ ನಿಮಗೆ ಖಂಡಿತ ಭಿನ್ನ ಎನಿಸಲಿವೆ.

'ಏನ್ ಕವಿತಾರವರು ಪಡ್ಡೆಗಳಿಗೆ ಏನಿಟ್ಟಿಲ್ವಾ?' ಅಂತಾ ನಮ್ ಮಲ್ಲಿ, ಸತೀಶ್ ತರಹದವರಿಗೆ ಪ್ರಶ್ನೆ ಇದೆಯೇನೋ? ಡೋಂಟ್ ವರಿ, ಇಲ್ಲೊಂದು ಸುಖತ್ ಐಟಂ ಸಾಂಗ್ ಇದೆ. ಮಾಲ್ಗುಡಿ ಶುಭಾ, ಹೇಮಂತ್ "ಆಹಾ ಚಪ್ಪರಿಸು ಚಪ್ಪರಿಸು" ಎಂದು ಹಾಡ್ತಾ ಇದ್ದರೆ ಪುಟಿ ಪುಟಿಯುವ ಯೌವ್ವನದ ಸೀಮಾ ಸೊಂಟ ಬಳುಕಿಸಿ ಹೆಜ್ಜೆ ಹಾಕ್ತಾ ಇದ್ದರೆ ಮಲ್ಲೀನೂ ಬೌಲ್ಡ್, ಸತೀಶೂ ಬೌಲ್ಡ್ ಆಗೇ ಆಗ್ತಾರೆ ಅಂತಾ ನನಗೆ ಕಾನ್ಫಿಡೆನ್ಸು. ಯಾಕೆ ಗೊತ್ತಾ? ಪ್ರತಿ ಚರಣದ ಕೊನೆಗೆ ಬರುವ 'ಆಹಾ, ಹೊ ಹೊ' ಎಂಬ ಚುಂಬಕ ಪದಗಳನ್ನು ಹಾಡುವಾಗ ಮಾಲ್ಗುಡಿ ಶುಭಾಗೆ ಥ್ರಿಲ್ ಆಗಿಬಿಟ್ಟಿತ್ತು. "ಕವಿತಾ, ಮದುವೆಯಾಗಿ 14 ವರ್ಷಗಳ ನಂತರ ಇದೇ ಮೊದಲ ಬಾರಿಗೆ ಇಂತಹ ಥ್ರಿಲ್ ಅನುಭವಿಸಿದೆ" ಎಂದು ನಕ್ಕರು ಶುಭಾ...

ಇನ್ನೇನು ನಿಮ್ಮ ಕೈಗೆ ಆಡಿಯೋ ಕ್ಯಾಸೆಟ್ ಬಂದೇಬಿಡುತ್ತೆ, ನಿಮ್ಮ ಕಿವಿಗಳಿಗೆ ಇಂಪು, ಮನಕ್ಕೆ ತಂಪು ನೀಡಲು 'ತನನಂ ತನನಂ' ರಾಗ ತೇಲಿ ಬರ್ತಾ ಇದೆ.


ರಮ್ಯ, ರಕ್ಷಿತಾ ಶೂಟಿಂಗ್ ವೇಳೆ ಮಾತಾಡ್ತಿದ್ದರಾ? ಜಗಳ ಆಡ್ತಿದ್ದರಾ? ಅಯ್ಯೋ ಇದು ಬಾರಿ ಮಜಾ ಇದೆ. ಮುಂದಿನ ವಾರ ಮೀಟ್ ಮಾಡೋಣ. ನನ್ನ ರಾಜಕುಮಾರಿ ಇಶಾ ಇಸ್ ಕಾಲಿಂಗ್ ಮಿ... ಸಿ....ಯು...

ನಿರೂಪಣೆ : ಪಿ.ಕೆ.ಮಲ್ಲನಗೌಡರ್

ಕೆ.ರಾಮಯ್ಯನವರ ಆದಿಮ ಕನಸುಗಳು

ಕೋಟಗಾನಹಳ್ಳಿ ರಾಮಯ್ಯನವರ ಹಲವು ವರ್ಷಗಳ ಕನಸು ಈಗ ಈಡೇರುತ್ತಿದೆ. ದಲಿತ ಸಂಘರ್ಷ ಸಮಿತಿ ಹುಟ್ಟಿ ರಕ್ತ-ಮಾಂಸ ತುಂಬಿಕೊಂಡು ಬಲಿಯುವವರೆಗೂ ತಮ್ಮ ರಕ್ತಬಸಿದು, ಎದೆಯ ನೋವನ್ನೆಲ್ಲಾ ಹಾಡಾಗಿಸಿ, ದಲಿತರ ಅಸ್ಥಿಪಂಜರಗಳ ಜೋಪಡಿಗಳೊಳಗೆ ದೀಪ ಬೆಳಗಲು ಹವಣಿಸಿ, ಸಮಾನತೆಯ ಕನಸುಗಳನ್ನೇ ಉಂಡುಂಡು ಬೆಳೆದ ರಾಮಯ್ಯನವರಿಗೆ ಸಂಘಟನೆ ರಾಜಕೀಯ ಹಾದಿ ಹಿಡಿದದ್ದು ಹತಾಶೆ ಮೂಡಿಸಿತು. ಆನಂತರ ಅವರು ರಾಜ್ಯದ ಶ್ರೇಷ್ಠ ಚಲನಚಿತ್ರ ಸಾಹಿತಿಯಾಗಿದ್ದು, ಪಂಚಮ, ಲಂಕೇಶ್ ಪತ್ರಿಕೆ, ಸುದ್ದಿ ಸಂಗಾತಿಯಲ್ಲಿ ದುಡಿದಿದ್ದು, ಮಕ್ಕಳ ರಂಗಭೂಮಿಯಲ್ಲಿ ವಿಶಿಷ್ಟ ಸಾಧನೆ ಮಾಡಿದ್ದು, ಹಲವಾರು ಪುರಸ್ಕಾರಗಳು ಲಭಿಸಿದ್ದು ಇದಾವುದೂ ಅವರಿಗೆ 'ಎಲ್ಲರೂ ಕೂಡಿ ನಡೆಯಬೇಕಾದ' ದಾರಿಯನ್ನು ತೋರಿಸಲೇ ಇಲ್ಲ. ಬದಲಾಗಿ ಮನುಷ್ಯ ಸಂಬಂಧಗಳು ಸೀಳಿಕೊಳ್ಳುವ ಆತ್ಯಂತಿಕ ಕ್ಷಣಗಳಾಗಿ ಕಾಣಿಸಿದವು. ಇದರೊಟ್ಟಿಗೆ ದಲಿತ ಸಂಘರ್ಷ ಸಮಿತಿಯೊಳಗೆ ಎಂಥೆಂತಹದೋ ಬಣಗಳು ಶುರುವಾಗಿ ಅವು ಹಲವಾರು ಹೋಳುಗಳಾಗಿದ್ದು, ದಲಿತರೊಳಗೆ ಎಡ-ಬಲ ಎಂಬ ಆತ್ಮಹತ್ಯಾಕಾರಿ ಬೆಳವಣಿಗೆಯಾದದ್ದು, ಇವೆಲ್ಲವೂ ಅವರ ನೋವನ್ನು ಉಲ್ಬಣಗೊಳಿಸಿದವು. ಆಗ ಅವರಿಗೆ ಹೊಳೆದದ್ದು 'ಆದಿಮ.'

ಮೊದಲಿಗೆ ದಲಿತ ಲೇಖಕರ ಕಮ್ಮಟವನ್ನು ಶುರು ಮಾಡಿದ ರಾಮಯ್ಯನವರು ತಮ್ಮಂಥವೇ ಆಶಯ-ಆತಂಕಗಳಿರುವ ಹಲವು ಸಮುದಾಯಗಳ ಪ್ರಜ್ಞಾವಂತರನ್ನು ಸೇರಿಸಿ ಹಲವು ಕಾರ್ಯಕ್ರಮಗಳ ಮೂಲಕ ದಲಿತ ಸಂಘಟನೆಯ ರೂಪವನ್ನೇ ಬದಲಿಸಲು ನೋಡಿದರು. ಅದೂ ಸಾಲದಂತೆನಿಸಿ ತಮ್ಮ ನಡಿಗೆಯ ಬಗ್ಗೆ ನಂಬಿಕೆಯಿರುವ ಹಲವರಿಗೆ 'ದಿನಕ್ಕೆ ಒಂದು ರೂಪಾಯಿ ಕೂಡಿಡಿ, ಆದಿಮ ಕಟ್ಟೋಣ' ಎಂದರು. ಅದರಂತೆ ನಾಡಿನ ವಿವಿಧ ಮೂಲೆಗಳ ಹಲವರು ದಿನಕ್ಕೆ ಒಂದು ರೂ.ನಂತೆ ಕೂಡಿಟ್ಟು, ಒಂದಷ್ಟು ಹಣ ಹೊಂದಿಸಿ ಕೋಲಾರದ ಅಂತರಗಂಗೆ ಬೆಟ್ಟದ ಮೇಲಿನ ಶಿವಗಂಗೆಯಲ್ಲಿ ಇಪ್ಪಗಲ ಭೂಮಿ ಖರೀದಿಸಿದರು.



ಅವರು ಕೊಂಡ ಜಾಗದಲ್ಲಿ ಜಂಕೆ ರಾಮಯ್ಯ ಎಂಬ ಸಂತರೊಬ್ಬರು ಕೆಲವು ದಶಕಗಳ ಹಿಂದೆ ಜೀವಸಮಾಧಿಯಾಗಿದ್ದರು. ಸುತ್ತಲೂ ಯಾರೋ ತಂದು ಗುಡ್ಡೆ ಹಾಕಿದ್ದಾರೇನೋ ಎನ್ನಿಸುವ ದೊಡ್ಡ ದೊಡ್ಡ ಬಂಡೆಗಳು, ಪಕ್ಕದಲ್ಲೊಂದು ಕಲ್ಯಾಣಿ, ಕೊಂಚ ದೂರದಲ್ಲಿರುವ ದರ್ಗಾ ಇವೆಲ್ಲವೂ ರಾಮಯ್ಯನವರಿಗೆ ತಕ್ಕ ತಪೋಭೂಮಿಯಂತೆ ಕಂಡವು. ಅಲ್ಲೊಂದು 'ನಿಸರ್ಗ ರಂಗಭೂಮಿ' ರೂಪು ತಳೆಯಿತು. ಅದರ ಜೊತೆಗೆ ಜಂಕೆ ರಾಮಯ್ಯನವರ ಜೀವಸಮಾಧಿಯನ್ನೊಳಗೊಂಡ ಕುಟೀರವೊಂದು ಸುಂದರವಾಗಿ ಮೈದಾಳಿತು. ಕೋಲಾರದ ನೂರಾರು ಪ್ರಜ್ಞಾವಂತ ಮೇಷ್ಟ್ರುಗಳು, ಯುವಜನರು ರಾಮಯ್ಯರನ್ನು ಕೂಡಿಕೊಂಡರು. ಆ ಜಾಗಕ್ಕೆ ರಾಮಯ್ಯ 'ಜಂಕೆ ರಾಮಯ್ಯ ಜೀವತಾಣ' ಎಂದು ಹೆಸರಿಟ್ಟರು. ಮೊನ್ನೆ 9 ನೇ ತಾರೀಖು 'ಹುಣ್ಣಿಮೆ ಹಾಡು' ಕಾರ್ಯಕ್ರಮದ ಮೂಲಕ ಈ ಜೀವತಾಣದ ಉದ್ಘಾಟನೆಯಾಯಿತು. ದೂರದ ಊರುಗಳಿಂದ ನೂರಾರು ಮಂದಿ ಬೆಟ್ಟ ಹತ್ತಿ ಬಂದು, ಉಂಡು, ಹಾಡು ಕೇಳಿ, ಹಾಡಿ, ಹರಸಿದರು. ಆವತ್ತು ರಾಮಯ್ಯನವರ ಕಣ್ಣೊಳಗಿನ ಕೆಂಡ ಬಾಬಯ್ಯನ ಕೊಂಡದ ಹಾಗೆ ಹರಳು, ಸಾಂಬ್ರಾಣಿಗಳ ಗಮಲನ್ನು ಬೀರುತ್ತಿತ್ತು. ಅವರು ಮಾತಾಡಿದರು: "ಮನುಷ್ಯರು ದೂರ ಆಗಲು ಕಾರಣಗಳನ್ನು ಹುಡುಕುತ್ತಿರುವ ಈ ದಿನಗಳಲ್ಲಿ ನಾವು ಎಲ್ಲರೂ ಕಲೆತು ನಡೆಯಬೇಕಾದ ದಾರಿಗಳ ಹುಡುಕಾಟದಲ್ಲಿದ್ದೇವೆ. ಈ ಹುಣ್ಣಿಮೆ ಹಾಡು ಎಲ್ಲರ ನೆನಪುಗಳಿಗೆ ತುಂಬಿಕೊಂಡಿರುವ ಹೂಳು ತೆಗೆಯಲಿ."

ಆವತ್ತು ಇಡೀ ರಾತ್ರಿ ನಡೆದ ಹುಣ್ಣಿಮೆ ಹಾಡು ಕಾರ್ಯಕ್ರಮದಲ್ಲಿ ಇಷ್ಟೊಂದು ಆಧುನಿಕತೆಯ ಅಬ್ಬರದ ನಡುವೆಯೂ ಸತ್ವ ಕಳೆದುಕೊಳ್ಳದ ಕೋಲಾರ ಸೀಮೆಯ ಜನಪದ ಸೊಗಡು ಅಲ್ಲಿದ್ದವರ ನಿದ್ದೆಯನ್ನು ನುಂಗಿ ಕರುಳೊಳಗೆ ಇಳಿದಿತ್ತು. ಇದರೊಟ್ಟಿಗೆ ಹೋರಾಟದ ಹಾಡುಗಳು, ಪರಿಸರ ಗೀತೆಗಳು, ರಂಗ ಗೀತೆಗಳು, ತತ್ವಪದಗಳು ಒಂದರೊಳಗೊಂದು ಕೂಡಿಕೊಂಡು ಬೆಳಕರಿಸಿದ್ದವು. ಈ ಕಾರ್ಯಕ್ರಮವನ್ನು ಪ್ರತಿ ಹುಣ್ಣಿಮೆಯ ರಾತ್ರಿ ನಡೆಸುವ ಉದ್ದೇಶವಿದ್ದು ಇದಕ್ಕೆ ಯಾರು ಬೇಕಾದರೂ ಭಾಗವಹಿಸಿ ಆದಿಮದ ಭಾಗವಾಗಬಹುದು.

ರಾಜ್ಯ ರಾಜಕಾರಣದ ರಾಡಿ, ಜಾಗತೀಕರಣದ ಮೋಡಿ, ಸಾಂಸ್ಕೃತಿಕ ವಿಸ್ಮೃತಿಗಳಿಗೆ ಒಳಗಾಗುತ್ತಿರುವ ಒಂದಿಡೀ ತಲೆಮಾರು... ಇವೆಲ್ಲವುಗಳ ನಡುವೆ ಹಲವು ಮನಸ್ಸುಗಳು ಕೋಲಾರದ ಅಂತರಗಂಗೆಯ ಆದಿಮದ ಕಡೆಗೆ ಕಣ್ಣುನೆಟ್ಟು ಕೂತಿವೆ. ರಾಮಯ್ಯ ಮುನಿಯಂತೆ ಈ ತಲೆಮಾರಿನ ಕಲ್ಲುಗಳನ್ನೊಡೆಯುವ ಜೀವಜಲಕ್ಕಾಗಿ ನೆಲ ಅಗೆಯುತ್ತಿದ್ದಾರೆ. ಅವರಿಗೆ, ಅವರ ಆದಿಮ ಕನಸುಗಳಿಗೆ 'ಲಂಕೇಶ್' ಶುಭ ಹಾರೈಸುತ್ತದೆ.

–ತುಲಿಕುಂಟೆ ಮೂರ್ತಿ

ಅಧಿಕಾರವು ತನ್ನ ಬಲಿಪಶುಗಳ ನರಳಾಟವನ್ನು ಕೃತಜ್ಞತೆಯೆಂದು ಪರಿಗಣಿಸುತ್ತದೆ

ನೀನಾ ಹಿ 'ಅನಿತಕ್ಕ' ಅನ್ಕಂಡಿದ್ದೆ!

'ಭೌನಾ ಫೋನು' ಅಂತ ಮೂರು ಕೇರಿಗೂ ಕೇಳಿಸುವಂತೆ ಅರುಚಿದ ನನ್ನ ಎರಡನೆ ಹೆಂಡತಿಯ ತಮ್ಮ ಅರ್ಥಾತ್ ಭಾಮೈದುನ.

'ಮೆಲ್ಲಗೆ ಅರಚೋ ಬಡವ' ಅಂದೆ ನಾನು. ಕನ್ನಡಿ ಮುಂದೆ ನಿಂತು ಮುಖಕ್ಕೆ ಸಾಕಿ ಬ್ರಷ್ ಮಾಡಿಕೊಂಡಿದ್ದ ಸೋಪಿನ ನೊರೆಯನ್ನು ರೇಜರ್‌ನಿಂದ ಕೆರೆದು ಕೊಳ್ಳುತ್ತಿದ್ದವನು. ಹೊಸ ಬ್ಲೇಡು. ಅವನು ಕೂಗಿದ ರಭಸಕ್ಕೆ ಬೆಳ್ಳದ್ದ ನನ್ನ ಗಲ್ಲದ ಜೊತೆಗೆ ಚರ್ಮವನ್ನು ಕತ್ತಿದ ನೋವೂ ಇತ್ತು, 'ಯಾರದ್ದೋ ಫೋನು' ಅಂದೆ.

'ಅನಿತಕ್ಕುಂದು' ಅಂದ.

ಅದನ್ನು ಕೇಳಿದ ತಕ್ಷಣ ನೋವು, ಕೋಪ ಮರೆಯಾಗಿ ಗಾಬರಿಯಾಯಿತು. ಇದೇನಪ್ಪ ಗ್ರಹಚಾರ, ಈ ಸ್ಥಾನಕ್ಕೆ ಬಂದು ಕುಳಿತು ಇನ್ನೂ ಸರಿಯಾಗಿ ಮೂರು ತಿಂಗಳೂ ಕಳೆದಿಲ್ಲ. ಈ ಸ್ಥಾನಕ್ಕೆ ಬರೋಕ್ಕೆ ಸಲ್ಲಿಸಬೇಕಾದ ಕಾಣಿಕೆ ಸಲ್ಲಿಸಿದ್ದೆ. ಪಾಸು ಮಾಡಿದ ಬಿಲ್ಲುಗಳ ಶೇಕಡಾವಾರು ನೀತಿಯನ್ನು ಕಡ್ಡಾಯವಾಗಿ ಪರಿಪಾಲಿಸುತ್ತಿದ್ದೆ. ಮತ್ತೆ ಯಾಕೆ ಬಂತು 'ಅನಿತಕ್ಕ' ಅವರಿಂದ ಫೋನು ಅನ್ನೋದು ಎಲ್ಲ ಕ್ಷಣ ಮಾತ್ರದಲ್ಲಿ ಸುಳಿದು ಹೋಯಿತು. ಸರಸರ ಬಂದು ಭಾಮೈದುನನಿಂದ ಫೋನು ಕಿತ್ತುಕೊಂಡು ಆರು ಅಡಿ ಉದ್ದದ ಶರೀರವನ್ನು ಮೂರು ಅಡಿಗೆ ಮುದರಿಕೊಂಡು 'ಯೆಸ್ ಮೇಡಂ' ಅಂದೆ.

'ಯಾವ ಮೇಡಂ ರೀ... ನಾನು' ಎಂದಿತು ಆ ಕಡೆಯ ಧ್ವನಿ.

ಬೆಟ್ಟದಂತಹ ಹೊರೇನ ತಲೆಯ ಮೇಲಿನಿಂದ ಇಳಿಸಿದ ಹಾಗೆ ಆಯ್ತು. ನಾನೆಲ್ಲೋ ಆ 'ಅನಿತಕ್ಕ' ಅಂತ ಗಾಬರಿ ಬಿದ್ದಿದ್ದರೆ, ಈ ಇವಳು ನನ್ನಾಕೆ ತೌರುಮನೆಗೆ ಹೋಗಿದ್ದವಳು ಮಾತನಾಡುತ್ತಿದ್ದಳು!

'ನೀನಾ... ನಾನು ಯಾರೋ ಅಂದ್ಕಂಡಿದ್ದೆ.'

'ಯಾರು ಅಂದ್ಕಂಡಿದ್ರಿ?' ಪ್ರತಿ ಧ್ವನಿ.

'ಮೊದಲು ನಿನ್ನ ಹೆಸರು ಬದಲಾಯಿಸಿಕೊ.'

ಗಂಡ ಅನ್ನಿಸಿಕೊಂಡ ಪ್ರಾಣಿ ಇಂತಹ ಮಾತನಾಡಿದಾಗ ಗಂಡ-ಹೆಂಡತಿ ನಡುವೆ ನಡೆಯುವ ಪಂಚಾಯ್ತಿ ರಾಮಾಯಣ ಎಲ್ಲಾನೂ ನಡೀತು ಅನ್ನಿ. ಮಸಲ ಏನಪಾ ಅಂದರೆ ಪ್ರಭಾವಿ ರಾಜಕಾರಣಿಗಳ ಮನೆಯವರ ಹೆಸರನ್ನು ಸರ್ಕಾರಿ ಅಧಿಕಾರಿಗಳ ಸಂಬಂಧಿಕರು, ಪರಿಚಯಸ್ಥರು ಇಟ್ಟುಕೊಂಡು ನನಗೆ ಆದ ಹಾಗೆ ಒಂದೆರಡು ನಿಮಿಷ ಹೃದಯ ಬಡಿತವನ್ನು ನಿಲ್ಲಿಸಬಾರದು ಅಂತ ಮುಂಜಾಗ್ರತೆ ಕ್ರಮ ಇದು. ಸಾಧುವಲ್ಲದ ಮಾತು ಇದು ಎನ್ನುವುದಾದರೆ ಜಾರ್ಖಂಡ್‌ನಲ್ಲಿ ಮಾವೋವಾದಿಗಳು ಅನುಸರಿಸುವ ರೀತಿಯನ್ನು ನಮ್ಮ ಸರ್ಕಾರವೂ ಅನುಸರಿಸಬಹುದೇನೋ!

ಮಾವೋವಾದಿಗಳ ಮಾರ್ಗ ಏನಪಾ ಅಂದರೆ ದರದ ಪಟ್ಟಿ ಪ್ರಕಾರಾನೇ ಸುಲಿಗೆ ಮಾಡಬೇಕು ಅನ್ನೋದು! ಈ ದರದ ಪಟ್ಟಿಯನ್ನು ಅವರ ಕೇಂದ್ರ ಕಚೇರಿಯೇ ಬಿಡುಗಡೆ ಮಾಡಿದೆಯಂತೆ. ಗಳಿಸುವ ಲಾಭ, ಪಡೆಯುವ ಲಂಚ ಇದರ ಆಧಾರದ ಮೇಲೆ ದರ ನಿಷ್ಕರ್ಷಿಸಲಾಗಿದೆಯಂತೆ! ನಮೂದಿಸಿರುವುದಕ್ಕಿಂತ ಹೆಚ್ಚಿನ ಹಣ ವಸೂಲಿ ಮಾಡುವುದು ಶಿಕ್ಷಾರ್ಹ ಅಪರಾಧವಂತೆ!

ನಮ್ಮ ಘನ ಸರ್ಕಾರವೂ ಇಂತಹ ಮಾದರಿಯನ್ನು ಅನುಸರಿಸಿ 'ಲಂಚ ಪಟ್ಟಿ'ಯನ್ನು ಅಧಿಕೃತವಾಗಿ ಪ್ರಕಟಿಸಿದರೆ ಲಂಚ ಸ್ವೀಕರಿಸುವವರಿಗೂ, ಲಂಚ ನೀಡುವವರಿಗೂ ಮಹದುಪಕಾರ ಮಾಡಿದಂತೆ ಆಗುತ್ತದೆ ಅಲ್ಲವಾ!

'ಹಕ್ಕುಚ್ಯುತಿ' ಯಾರಿಗೆ?

ಜಸ್ವಂತ್‌ಸಿಂಗ್ ಆತ್ಮಕಥೆ ಬರೆದರು.

ಮಾರಾಟ ಆಗಬೇಕಲ್ಲ ಅದು?


ವಿವಾದ ಸೃಷ್ಟಿಸಿದರು!

ಏನು ವಿವಾದ ಅದು?

ಪಿ.ವಿ. ನರಸಿಂಹರಾಯರ ಅಧಿಕಾರಾವಧಿಯಲ್ಲಿ ಅಣುಸಂಬಂಧಿತ ಗೋಪ್ಯ ವಿಷಯಗಳನ್ನು ಅಮೆರಿಕಕ್ಕೆ ರವಾನಿಸುತ್ತಿದ್ದ ಹೆಗ್ಗಣ ಒಂದು ಇತ್ತು!

ಭಾಜಪಕ್ಕೆ ರಸಗುಲ್ಲ ಸಿಕ್ಕಿತು-ಕಾಂಗ್ರೆಸ್ ವಿರುದ್ಧ ಹೌಹಾರಲು.

ಐದು ವರ್ಷ ಅಧಿಕಾರದಲ್ಲಿತ್ತಲ್ಲ ಆ ಪಕ್ಷ, ಆಗ ಏಕೆ ಆ ಹೆಗ್ಗಣದ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ? ಈ ಪ್ರಶ್ನೆಗೆ ಅದರ ನಿರುತ್ತರ!



ಕಾಂಗ್ರೆಸ್ ಪಕ್ಷ ಸಂಸತ್ತಿನಲ್ಲಿ ಆರ್ಭಟಿಸಿತು– 'ಆ ಹೆಗ್ಗಣ ಯಾವುದು ಹೆಸರಿಸಿ!'

ಜಸ್ವಂತ್‌ಸಿಂಗ್ ಹೆಸರಿಸದೆ ನಗೆಪಾಟಲಾದರು; ಭಾಜಪ ತನ್ನೆಲ್ಲ ರಂಧ್ರಗಳನ್ನೂ ಮುಚ್ಚಿಕೊಳ್ಳುವುದು ಅನಿವಾರ್ಯ ಆಯಿತು!

ಎರಡೂ ಸದನಗಳಲ್ಲಿ ಗಲಭೆ, ಕೋಲಾಹಲ.

ಭಾಜಪವನ್ನು ಸಂಕಟದಿಂದ ಪಾರು ಮಾಡಲು ಬಂದರು ಇನ್ನೊಬ್ಬ ಸಿಂಗ್‌ಜಿ ನಟವರ್‌ಸಿಂಗ್! ಆಹಾರಕ್ಕಾಗಿ ತೈಲ ಹಗರಣದಲ್ಲಿ ಅವರು ಸಿಲುಕಿಕೊಂಡದ್ದು ನ್ಯಾಯಮೂರ್ತಿ ಪಾಠಕ್ ವರದಿಯಿಂದ ಬಯಲು. ಆದರೆ ಬಯಲಾದದ್ದು ಸಂಸತ್ತಿನಲ್ಲಲ್ಲ, ಹೊರಗೆ, ಅದೂ ಸದನ ನಡೆಯುತ್ತಿದ್ದಾಗ! ಆಯಿತು ಸಂಸದರ ಹಕ್ಕುಚ್ಯುತಿ!

ಸದನದಲ್ಲಿ ಕೂಗಿದರು: 'ಕಾಂಗ್ರೆಸ್ ಕಿ ಪೋಲ್ ಖೋಲನೆ ದೊ, ನಟವರ್ ಕೊ ಬೋಲನೆ ದೊ.'

ಕಾಂಗ್ರೆಸ್ ಸದಸ್ಯರೆದ್ದರು: 'ಮೋಲ್ ಮೋಲ್.'

ತಮಾಷೆ ಏನಪ್ಪ ಅಂದರೆ ತೈಲ ಹಗರಣದಲ್ಲಿ ವೋಲ್ಕರ್ ಸಮಿತಿ ವರದಿ ಬಂದಾಗ ನಟವರ್‌ಸಿಂಗ್ ವಿರುದ್ಧ ಆರೋಪ ಮಾಡಿದ್ದು ಇದೇ ಭಾಜಪ! ಈಗವರ ಹೆಗಲಿನ ಮೇಲೇ ಬಂದೂಕು ಇಟ್ಟು ಸರ್ಕಾರದತ್ತ ಗುರಿ ಮಾಡುತ್ತಿದೆ!

ಇದೆಲ್ಲದರ ಪರಿಣಾಮ: ಸದನ ಮುಂದೂಡಿಕೆ! ಅಭಿವೃದ್ಧಿಮುಖಿಯಾದ ಯಾವ ಕಲಾಪಕ್ಕೂ ಅವಕಾಶವೇ ಇಲ್ಲ!

ಜನರ ಮುಂದೆ ಇರುವ ಪ್ರಶ್ನೆ ಇದು: ಪಾಠಕ್ ವರದಿ ಬಯಲಾದದ್ದು ಮುಖ್ಯವೋ? ಅಥವಾ ಕಾಂಗ್ರೆಸ್ ಪಕ್ಷವನ್ನು ದೋಷಮುಕ್ತ ಮಾಡಿದ್ದ ವರದಿ ಸತ್ಯವೋ, ಇಲ್ಲ ಬೇಕೆಂದೇ ಸತ್ಯ ಸಂಗತಿಗಳನ್ನು ಮುಚ್ಚಿಡಲಾಗಿದೆಯೋ? ಸದನದಲ್ಲಿ ಹಾಜರಾಗಿ ನಿಜ ಸಂಗತಿಗಳನ್ನು ಬಯಲು ಮಾಡುವಲ್ಲಿ ಸಂಸದರು ಪ್ರಯತ್ನಿಸಲಿಲ್ಲವೇಕೆ?

ಈಗ ಆಗಿರುವುದು 'ಹಕ್ಕುಚ್ಯುತಿ' ಯಾರಿಗೆ?

ಸಂಸದರಿಗೊ? ಮತದಾರರಿಗೊ?

ವೆಂಕಯ್ಯ ಪರೀಕ್ಷೆ

ಯಾಕೋ ಏನೋ ಕೋ-ಜಾ ಸರ್ಕಾರ ಅಧಿಕಾರದ ಗದ್ದುಗೆ ಏರಿದ ದಿನದಿಂದ ವೆಂಕಯ್ಯ ನಾಯ್ಡುಗಾರು ಬೆಂಗಳೂರಿನಲ್ಲಿ ಮೊಕ್ಕಾಂ ಮಾಡುವುದು ಅಧಿಕವಾಗುತ್ತಿದೆ. ಪಾಪ ಅವರು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾದದ್ದು ಇತ್ತೀಚಿಗೆ ಬಹಳವಾಗಿ ನೆನಪಾಗುತ್ತಿರಬಹುದು ಬಿಡಿ. ಬಂದಾಗಲೆಲ್ಲ ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡುತ್ತಾರೆ. 'ಲಂಚದ ಹಗರಣ', 'ಭಿನ್ನಾಭಿಪ್ರಾಯ' ಇದ್ದರೆ ಮಾಧ್ಯಮಗಳ ಬಳಿಗೆ ಹೋಗಬೇಡಿ, ಪಕ್ಷದ ವರಿಷ್ಠರ ಜೊತೆ ಮಾತನಾಡಿ ಅಂತ ಕಳಕಳಿಯಿಂದ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡುತ್ತಾರೆ. ಅಲ್ಲವೆ ಮತ್ತೆ ವರಿಷ್ಠರಿಗೆ ಎಲ್ಲಾ ವಿಷಯಾನೂ ತಿಳಿಸಿದರೆ ಅವರು ಯಾವ ವಿಷಯವನ್ನು ಎಲ್ಲಿ ಹೇಗೆ ಉಪಯೋಗಿಸಿಕೊಳ್ಳಬೇಕೋ ಸೂಕ್ಷ್ಮವಾಗಿ ಬಳಸಿಕೊಳ್ಳುತ್ತಾರೆ! ಸಮ್ಮಿಶ್ರ ಸರ್ಕಾರ ನಡೆಯಬೇಕು ನೋಡಿ, ಯಾವ ಹಗರಣ ಮುಚ್ಚಿಡಬೇಕು, ಯಾವುದನ್ನು ಬಯಲು ಮಾಡಬೇಕು ಅನ್ನೋದಕ್ಕೆ ಇವರ ಮರ್ಜಿ ಇರಲೇಬೇಕು, ಸರ್ಕಾರ ಉಳಿಯಬೇಕಲ್ಲ!

150 ಕೋಟಿ ರೂಪಾಯಿ ಗಣಿ ಹಗರಣಾನೆ ತಗೊಳ್ಳಿ. ಇದನ್ನ ತೇಪೆ ಹಾಕೋಕೆ ಸುಷ್ಮ ಅಮ್ಮನೋರು ವರಮಹಾಲಕ್ಷ್ಮಿ ಪೂಜೇನೇ ಮಾಡಬೇಕಾಯ್ತು, ದೆಹಲಿಗೆ ಹೋದಾಗ ವಾಜಪೇಯಿ, ಅಡ್ವಾಣಿ ಅವರ ಕಡೆ ಕಾಣಿ ಅನ್ನದಿದ್ದ ಕುಮಾರಸ್ವಾಮಿ 'ಸೌಜನ್ಯ'ದ ಭೇಟಿ ಮಾಡ ಬೇಕಾಯ್ತು! ವರಿಷ್ಠರಿಗೇ ಇದನ್ನ ಬಿಟ್ಟಿದ್ದರೆ 150 ಕೋಟಿ ರೂಪಾಯಿ ಹಗರಣ ಬಯಲಿಗೂ ಬರುತ್ತಿರಲಿಲ್ಲ, ಇವರೆಲ್ಲ ಮನಸ್ಸಿಲ್ಲದ ಮನಸ್ಸಿನಿಂದ ಹೀಗೆ ನಡೆದುಕೊಳ್ಳುವ ಸಂದರ್ಭವೂ ಇರುತ್ತಿರಲಿಲ್ಲ!

ಇದೆಲ್ಲ ಇರಲಿ, ನಮ್ಮ ಮಂತ್ರಿಗಳು ಅತ್ಯದ್ಭುತವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಮಾಧ್ಯಮಗಳಲ್ಲಿ ಬುರುಡೆ ಬಿಡುತ್ತಿದ್ದ ಈ ಬುರುಡೆ ದಾಸಯ್ಯ ವೆಂಕಯ್ಯ ನಾಯ್ಡುಗಾರು ಇತ್ತೀಚಿಗೆ ಪಕ್ಷದ ಮಂತ್ರಿಗಳಿಗೆ 'ಪರೀಕ್ಷೆ' ನಡೆಸಿದರಂತೆ. 'ಎಲ್ಲರೂ ಪಾಸ್' ಎಂದು ಸರ್ಟಿಫಿಕೇಟ್‌ನೂ ನೀಡಿದರಂತೆ! ರ್‍ಯಾಂಕು, ಫಸ್ಟ್‌ಕ್ಲಾಸು, ಸೆಕೆಂಡ್ ಕ್ಲಾಸು, ಗ್ರೇಸ್ ಮಾರ್ಕ್ಸ್‌ನಲ್ಲಿ ತೂರಿಕೊಂಡವರು, ಕಾಪಿ ಹೊಡೆದೂ ಸಿಗಾಕಿಕೊಳ್ಳದೆ ಹೊರಬಿದ್ದವರು ಯಾರು ಎಂಬುದನ್ನು ಅವರು ಬಹಿರಂಗಗೊಳಿಸಿಲ್ಲ. ಇಂತಹ ಮುಖಹೀನರೇ ಪರೀಕ್ಷೆಯಲ್ಲಿ ಪಾಸಾಗಿದ್ದಾರೆ ಅಂದರೆ ಯಾರು ಬೇಕಾದರೂ ಪರೀಕ್ಷೆಯಲ್ಲಿ ಪಾಸಾಗಬಹುದು ಎಂದು ಹಲವರಿಗೆ ಅನ್ನಿಸಬಹುದಾದರೂ, 'ವೆಂಕಯ್ಯ ಪರೀಕ್ಷೆ' ಹೇಗೆ ನಡೆದಿರಬಹುದೆಂಬ ಕುತೂಹಲ ಜಾಣ-ಜಾಣೆಯರಿಗೆ ಇರುವುದು ಸಹಜವೇ ಆಗಿದೆ. ಅದನ್ನು ತಣಿಸಲು ಒಂದು ಮಾದರಿಯನ್ನು ಇಲ್ಲಿ ನೀಡಲಾಗಿದೆ.

ಪರೀಕ್ಷಾ ಕೊಠಡಿ. ಮಂತ್ರಿಯ ಪ್ರವೇಶ. ವೆಂಕಯ್ಯ ನಾಯ್ಡು ಎದುರು ತಮ್ಮ ಫೈಲು ಇಡುವರು. ಅದನ್ನು ತೆರೆದು ನೋಡಿದ ವೆಂಕಯ್ಯ: 'ಸಾಲದು ಸಾಲದು.'

'ಖಾತೇನೆ ಅಂತಹದ್ದು ಸಾರ್' ಮಂತ್ರಿಯ ಗೋಳಾಟ.

ಐದು ಬಹಳ ಕಡಿಮೆ ಅಂತ ಅವರು, ಅಷ್ಟೇ ಆಗೋದು ಅಂತ ಇವರು. ಅಂತೂ ಈ ಜಗ್ಗಾಟದಲ್ಲಿ ಆರಕ್ಕೆ ನಿಲ್ತು ಅನ್ನಿ.

ಮುಂದೆ ಬಂದವರು ಅನುಭವಸ್ಥರು. ಫೈಲಿದ್ದರೆ ಕಂಕುಳಲ್ಲಿ ಇರುಕಿಸಿಕೊಂಡು ಬೆರಳುಗಳನ್ನು ಪ್ರದರ್ಶಿಸಬೇಕು ಈ ಸಮಸ್ಯೆ ಯಾಕೆ ಅಂತ ಅವರು ಅದನ್ನು ತಂದಿರಲಿಲ್ಲ ಬರುವಾಗಲೇ ಹತ್ತೂ ಕೈ ಬೆರಳುಗಳನ್ನು ಎತ್ತಿ ಹಿಡಿದುಕೊಂಡೇ ಬಂದರು.

'ಕಾಲಲ್ಲಿ ಬೆರಳಿಲ್ವ?' ಕೇಳಿದರು ವೆಂಕಯ್ಯ.

'ತಮಗೆ ತೋರಿಸಬಾರದೂಂತ' ರಾಗ ಎಳೆದರು ಮಂತ್ರೀಜಿ.

'ಮುಚ್ಚುಮರೆ ಯಾಕೆ? ಒಂದು ಕಾಲಾದರೂ ಬೇಕೇಬೇಕು.'

ಒಟ್ಟಿನಲ್ಲಿ ಹತ್ತು ಕೈ ಬೆರಳುಗಳು ಹಾಗೂ ಕಾಲಿನ ಎರಡು ಬೆರಳುಗಳಿಗೆ 'ಪಾಸು' ಆಯಿತು.

ಏನಂದಿರಿ ಈ ಐದು, ಹತ್ತು ಇವೆಲ್ಲ ಲಕ್ಷಾನ ಅಂದಿರಾ? ಅವರನ್ನೇನು ಮುನ್ಸಿಪಾಲಿಟಿ ಮೆಂಬರೂ ಅಂದುಕೊಂಡಿರಾ? ಕೋಟಿ ಕಣ್ರಿ, ಕೋಟಿ! ಯಾವ ಕಾಲದಲ್ಲಿದ್ದೀರಿ ನೀವು?

ಏನಂದ್ರಿ, ವೆಂಕಯ್ಯ ನಾಯ್ಡು ಬೆಂಗಳೂರಿಗೆ ಪದೇಪದೇ ಬರೋದು, ಪರೀಕ್ಷೆ ನಡೆಸಿ ಪಾಸು ಮಾಡಿಸೋದು ಯಾಕೆ ಅಂತ ಈಗ ತಿಳೀತು ಅಂದಿರಾ!?

–ಎಚ್.ಎಲ್. ಕೇಶವಮೂರ್ತಿ

ಹ್ಯಾಟ್ಸ್ ಆಫ್ ಟು ರೇಶ್ಮೆ!

ಆಗಸ್ಟ್ 16ರ ಸಂಚಿಕೆ ಶ್ರೀರಂಗಪಟ್ಟಣದಲ್ಲಿ ದೊರಕದೆ ಇದ್ದುದರಿಂದ ಮೈಸೂರಿಗೆ ಹೋಗಿ ತಂದು ಓದಿದೆ. ರವೀಂದ್ರ ರೇಶ್ಮೆಗೆ ಆಕ್ಸಿಡೆಂಟಾಗಿದ್ದರೂ, ಮಾಜಿ ಪ್ರಧಾನಿ ಕುಟುಂಬದ ಸುದ್ದಿಯನ್ನು ಬಟಾ ಬಯಲು ಮಾಡಿದ್ದಾರೆ. ಅವರ ಪತ್ರಕರ್ತ ಮನೋ ಧರ್ಮಕ್ಕೆ ಹ್ಯಾಟ್ಸ್ ಆಫ್ ಸಲ್ಲಲೇಬೇಕು.



ತಿರುಪತಿಯಲ್ಲಿ ಹಿಂದೂ ಸಂಘಟನೆಯ ಸದಸ್ಯರು ನಡೆಸಿದ ಪೂರ್ವಯೋಜಿತ ಷಡ್ಯಂತ್ರವನ್ನು ಬಯಲು ಮಾಡಿದ ಪತ್ರಿಕೆ ಜನರಲ್ಲಿ ಚಿಂತನೆಗೆ ಅವಕಾಶ ಮಾಡಿಕೊಟ್ಟಿದೆ. ದೇಶದಲ್ಲಿ ಇಂತಹ ಕಾರಣಗಳಿಂದಲೇ ಅನೇಕ ದುರಂತಗಳು ಸಂಭವಿಸಿರುವುದನ್ನು ತಳ್ಳಿ ಹಾಕುವಂತಿಲ್ಲ.

–ಅನಾರ್ಕಲಿಸಲೀಂಚಿಣ್ಯ, ಶ್ರೀರಂಗಪಟ್ಟಣ

'ಗೋಲ್‌ಮಾಲ್ ಗೌಡ' ಮುಖಪುಟದ ಹೆಡ್ಡಿಂಗು ಮತ್ತು ಲೇಖನ ದೇವೇಗೌಡರ ಭ್ರಷ್ಟ ಕುಟುಂಬಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಕಾಡು ಮಂತ್ರಿ ಚೆನ್ನಿಗಪ್ಪ, ಮುಖ್ಯಮಂತ್ರಿ ಕುಮಾರಸ್ವಾಮಿಯವರ ಪತ್ನಿ ಅನಿತೆಯ ಅಟ್ಟಹಾಸ ಮತ್ತು ದೇವೇಗೌಡರ ಹೊಲಸು ರಾಜಕಾರಣವನ್ನು ಬಯಲಿಗೆಳೆದ 'ಲಂಕೇಶ್'ಗೆ ನನ್ನ ಧನ್ಯವಾದಗಳು.

–ರಮಜಾನ ಕೆ. ಕೊರ್ತಿ, ಬಾದಾಮಿ

ಕೆಳೆದೆರಡು ಸಂಚಿಕೆಗಳು ನಿಜಕ್ಕೂ ಅದ್ಭುತವಾಗಿ ಮೂಡಿಬಂದಿವೆ. ಈ ವರದಿಗಳು ಮೇಷ್ಟ್ರು ಇದ್ದಾಗ ಹಗರಣಗಳನ್ನು ಬಯಲು ಮಾಡಿದ ಸಂಭ್ರಮದ ದಿನಗಳನ್ನು ನೆನಪಿಗೆ ತಂದವು. ಈ ವರದಿಗಳೇ ಗೌಡರ ರಾಜಕೀಯ ಜೀವನದ ಶವಪೆಟ್ಟಿಗೆಗೆ ಹೊಡೆಯುವ ಕೊನೆಯ ಮೊಳೆಯಾಗಬಲ್ಲದು.

–ಬಸವರಾಜ್ ಬೆಸ್ತರ್, ಹರಪನಹಳ್ಳಿ ದಾವಣಗೆರೆ.




'ಗೋಲ್‌ಮಾಲ್ ಗೌಡ' ವರದಿಯಲ್ಲಿ ಮಾಜಿ ಪ್ರಧಾನಿ ದೇವೇಗೌಡರ ಮಗ ಡಾ. ಎಚ್. ಡಿ. ರಮೇಶ್ "ಸಾರ್, ನಾವು ಆರು ಜನ ಮಾಜಿ ಪ್ರಧಾನಿಯವರ ಮಕ್ಕಳಾಗಿ ತಲಾ 25 ಲಕ್ಷ ಶೇರು ಹಣ ತೊಡಗಿಸುವಷ್ಟು ಯೋಗ್ಯತೆ ಇಲ್ಲಾಂದ್ರೆ, ಹ್ಯಾಗೆ ಸಾರ್?" ಎಂದು ಕೇಳಿದ್ದಾರೆ. ಈ ಮಾತಿನಿಂದ ಗೌಡರ ಇಡೀ ಕುಟುಂಬ ಯಾವ ಮಟ್ಟದ ಅಕ್ರಮ ಸಂಪಾದನೆ ಮಾಡಿರಬಹುದು ಎನ್ನುವ ವಿಚಾರ ಗೊತ್ತಾಗುತ್ತದೆ.

ಲಾಲ್ ಬಹದ್ದೂರ್ ಶಾಸ್ತ್ರಿಯವರಿಗೆ ಒಂದು ಸ್ವಂತ ಕಾರ್ ಸಹ ಇರಲಿಲ್ಲ ಎಂದು ಕೇಳಿದ್ದೆ. ಆದರೆ ಗೌಡರ ಮಗನ ಪ್ರಕಾರ ತಮ್ಮ ತಂದೆ ಪ್ರಧಾನಿಯಾದ ಮಾತ್ರಕ್ಕೆ ಅವರಿಗೆ 25 ಲಕ್ಷ ಯೋಗ್ಯತೆ ಇರಬೇಕು! (25 X 5 ಒಂದೂವರೆ ಕೋಟಿ ರೂಪಾಯಿ!). 'ದೊಡ್ಡವರ' ಮಕ್ಕಳಾದ ಕಾರಣಕ್ಕೆ ಇವರು ಲಕ್ಷ, ಕೋಟಿಗಳಲ್ಲಿ ಮಾತನಾಡುತ್ತಾರಾದರೆ, ಇವರಿಂದ ಇನ್ನೆಂತಹ ಜನಪರ ಮನೋಭಾವವನ್ನು ನಿರೀಕ್ಷಿಸಬಹುದು?

–ಬಿ.ಎಸ್. ಇಮ್ಮಾನುವೇಲ, ಮಸರಕಲ

ಹೊಗಳಿಕೆ ತೆಗಳಿಕೆ


ಶಿವರಾಜ್ ಕುಮಾರ್‌ರವರ ಅಭಿಮಾನಿಯಾದ ನನಗೆ 'ಲಂಕೇಶ್'ನಲ್ಲಿ ಅವರ ಆತ್ಮಕತೆ ಮೂಡಿ ಬರುತ್ತಿರುವುದು ಸಂತೋಷದ ವಿಚಾರ. ಅವರ ಎಲ್ಲ ಸಿನಿಮಾಗಳನ್ನು ನೋಡಿರುವ ನನಗೆ ಒಂದು ಆಸೆ ಇದೆ. ಅದೇನೆಂದರೆ, ಎಂ. ಕೆ. ಇಂದಿರಾರವರು ಬರೆದಿರುವ 'ಸುಖಾಂತ' ಮತ್ತು ಪೂರ್ಣಚಂದ್ರ ತೇಜಸ್ವಿಯವರು ಬರೆದಿರುವ 'ಜುಗಾರಿ ಕ್ರಾಸ್' ಕಾದಂಬರಿಗಳನ್ನೂ ಶಿವರಾಜ್ ಕುಮಾರ್‌ರವರೇ ತಮ್ಮ ಸ್ವಂತ ಕಂಪನಿಯಾದ ವಜ್ರೇಶ್ವರಿಯಿಂದ ನಿರ್ಮಿಸಿ ಅವುಗಳಲ್ಲಿ ನಟಿಸಬೇಕೆಂಬುದು.



ನಮ್ಮ ಮೆಚ್ಚಿನ ಶಿವುರವರನ್ನು ಪ್ರತಿವಾರ ನಮ್ಮ ಮುಂದೆ ತಂದು ನಮ್ಮೊಂದಿಗೆ ಮಾತನಾಡುವಂತೆ ಮಾಡುತ್ತಿರುವ 'ಲಂಕೇಶ್' ಮತ್ತು ಸದಾಶಿವ ಶೆಣೈಗೆ ನಮ್ಮ ಧನ್ಯವಾದಗಳು.

–ಬಾಬು, ಬೀರೂರು.

ಸಾವು ಒಂದು ಬಿರುಕಲ್ಲ. ಆದ್ದರಿಂದಲೇ ಜಗತ್ತು ಸೋರುವುದಿಲ್ಲ



ಆ ವಿದೇಶ ಪ್ರವಾಸವನ್ನು ತುಂಬಾ, ತುಂಬಾ ಎಂಜಾಯ್ ಮಾಡಿದೆ. ಇದು ನಡೆದದ್ದು ಇಪ್ಪತ್ತೈದು ವರ್ಷಗಳ ಹಿಂದೆ ಆದರೂ ನನಗಿನ್ನೂ ಆ ಪ್ರವಾಸದ ದಿನಗಳು ನೆನಪಿವೆ. ಹೊಸ ಜಾಗ, ಜನ, ಭಾಷೆ, ಸದ್ದು, ದೃಶ್ಯ,.... ಎಲ್ಲವೂ ರೋಮಾಂಚಕಾರಿಯಾಗಿತ್ತು.


ಸಾಗರದಾಚೆಯ ಸೊಬಗಿನ ನಾಡನ್ನು....

ನಾನು ಕಾಲೇಜು ಸೇರಿದ್ದು ನಿಮ್ಮೆಲ್ಲರಂತೆ ಪಿ.ಯು.ಸಿ ಹಂತದಲ್ಲಲ್ಲ, ಏಕೆಂದರೆ ಆಗ ಮದ್ರಾಸಿನಲ್ಲಿ ಪಿ.ಯು.ಸಿ ಬದಲಾಗಿ ಪ್ಲಸ್ 2 ಎಂಬುದಿತ್ತು, ಈ ಪ್ಲಸ್ 2ಗೂ ನಾವು ಯುನಿಫಾರ್ಮ್ ಧರಿಸಬೇಕಿದ್ದರಿಂದ ನನ್ನ ಪಾಲಿಗೆ ಕಾಲೇಜು ಜೀವನ ಎಂಬುದು ಪ್ರಾರಂಭವಾಗಿದ್ದು ಡಿಗ್ರಿ ಲೆವೆಲ್‌ನಿಂದ. ಆಗಲೇ ಹೇಳಿರುವಂತೆ, ಕಾಲೇಜು ಮೆಟ್ಟಲು ಹತ್ತಿದ ನಂತರ ನನ್ನ ಉಡುಪು, ಮಾತಿನ ಶೈಲಿ, ಎಲ್ಲವೂ ಆ ವಯಸ್ಸಿಗೆ ತಕ್ಕಂತೆ ಬದಲಾದವು. ಎಷ್ಟರ ಮಟ್ಟಿಗೆ ಎಂದು ನಮ್ಮ ಸಿನಿಮಾ ಭಾಷೆಯಲ್ಲಿ ಹೇಳುವುದಾದರೆ ಹೈಸ್ಕೂಲು ಕಲಾತ್ಮಕ ಚಿತ್ರದಂತೆ ಇದ್ದಿದ್ದರೆ, ಕಾಲೇಜು ಜೀವನ ಒಂದು ಕಮರ್ಷಿಯಲ್ ಚಿತ್ರದಂತಿತ್ತು!

ನಿರೂಪಣೆ: ಸದಾಶಿವ ಶೆಣೈ

15

ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!



ನಾನು plus 2 ಮುಗಿಸಿ ಡಿಗ್ರಿಗೆ ಸೇರಿಕೊಂಡಾಗ ತೆಗೆದುಕೊಂಡಿದ್ದು ಕೆಮಿಸ್ಟ್ರಿ ಸಬ್ಜೆಕ್ಟ್. ಆಗ ನನ್ನ ಯೋಜನೆ ಏನಾಗಿತ್ತು ಗೊತ್ತಾ? ಕೆಮಿಸ್ಟ್ರಿ ಓದಿದ ನಂತರ ಮದ್ರಾಸ್ ಅಥವಾ ಬೆಂಗಳೂರಿನಲ್ಲಿ ಒಂದು ಸಣ್ಣ ಕೈಗಾರಿಕೆಯನ್ನು ಆರಂಭಿಸುವುದು! ಅದೇ ಆಗ ನನ್ನ ಜೀವನದ ಮಹತ್ವಾಕಾಂಕ್ಷೆಯಾಗಿತ್ತು!

ನಾನು ಈ ಹಿಂದೆಯೇ ಹೇಳಿದಂತೆ ಮದ್ರಾಸಿನಲ್ಲಿರುವ ಅತ್ಯುತ್ತಮ ಕಾಲೇಜಿನಲ್ಲಿ ಸೀಟ್ ದೊರೆತಿದ್ದರೂ ನಾನು ಅದನ್ನು ಬಿಟ್ಟು ರೌಡಿಸಂಗೆ ಹೆಸರುವಾಸಿ ಆಗಿದ್ದ ಕಾಲೇಜನ್ನೇ ಸೇರಿದ್ದೆ. ಆ ಕಾಲೇಜು ಶಿಕ್ಷಣಕ್ಕೆ ಅಷ್ಟೇನೂ ಹೆಸರುವಾಸಿಯಾಗಿರಲಿಲ್ಲ, ಹಾಗೆಯೇ ತೀರ ಕೆಟ್ಟ ಕಾಲೇಜೂ ಆಗಿರಲಿಲ್ಲ, ಆದರೆ ಈ ಕಾಲೇಜನ್ನೇ ನಾನು ಆಯ್ಕೆ ಮಾಡಿಕೊಂಡಿದ್ದಕ್ಕೆ ಕಾರಣ ನನಗೆ ರೌಡಿಸಂ ಇಷ್ಟವಿತ್ತೆಂದಲ್ಲ, ಅದ್ಯಾಕೋ, some how i felt that i should join this college.

ಆದರೆ, ಯಾವತ್ತೂ ಯಾವುದೇ ರೌಡಿಸಂನಲ್ಲಿ ಭಾಗಿಯಾಗದಿದ್ದ ನಾನು ಕಾಲೇಜಿನ ಕೆಲವು ಗುಂಪುಗಳು ಪರಸ್ಪರ ಹೊಡೆದಾಡಿಕೊಂಡಿದ್ದನ್ನು ಅನೇಕ ಬಾರಿ ಕಣ್ಣಾರೆ ಕಂಡಿದ್ದೆ. ಇಂತಹ ಕಾಳಗಗಳ ಲೈವ್ ದರ್ಶನ ನೋಡಿದ್ದಷ್ಟೇ ನಾನು ಈ ಕಾಲೇಜಿಗೆ ಸೇರಿಕೊಂಡಿದ್ದರಿಂದ ಪಡೆದ ಲಾಭ!

ನಾನು ಡಿಗ್ರಿಗೆ ಸೇರಿದ ವರ್ಷ ಕಾಲೇಜು ಕೇವಲ ಆರು ತಿಂಗಳ ಕಾಲ ಮಾತ್ರ ತೆರೆದಿತ್ತು, ಇನ್ನಾರು ತಿಂಗಳ ಕಾಲ ಕ್ಲೋಸ್ ಆಗಿತ್ತು. ಏಕೆ ಗೊತ್ತಾ? ನಮ್ಮ ಕಾಲೇಜಿನ ವಿದ್ಯಾರ್ಥಿಯೊಬ್ಬ ಒಂದು ದಿನ ಪ್ರಿನ್ಸಿಪಾಲರಿಗೆ ಕಪಾಳ ಮೋಕ್ಷ ಮಾಡಿದ್ದ. ಇದರಿಂದ ಸಿಟ್ಟಿಗೆದ್ದ ಕಾಲೇಜಿನ ಆಡಳಿತ ಮಂಡಳಿ ಪರಿಸ್ಥಿತಿಯನ್ನು ಹತೋಟಿಗೆ ತರುವ ಸಲುವಾಗಿ ಕಾಲೇಜಿಗೆ ಬೀಗ ಜಡಿದಿತ್ತು.

ಆ ಹುಡುಗ ಪ್ರಿನ್ಸಿಪಾಲರಿಗೆ ಹೊಡೆದ ನಂತರ ವಿದ್ಯಾರ್ಥಿ ಸಂಘ ಎರಡು ಹೋಳಾಯಿತು. ಕೆಲವರು ಆತ ಹೊಡೆದದ್ದು ಸರಿ ಎಂದು ಹೇಳಿದರೆ, ಇನ್ನೂ ಕೆಲವರು ಏನೇ ಆದರೂ ವಿದ್ಯಾರ್ಥಿ ಪ್ರಿನ್ಸಿಪಾಲರಿಗೆ ಹೊಡೆಯಬಾರದಿತ್ತು ಎಂದು ವಾದಿಸಿದ್ದರು. ನಾನು ಎರಡನೆಯ ಗುಂಪಿಗೆ ಸೇರಿದ್ದರಿಂದ ಅನೇಕ ವಿದ್ಯಾರ್ಥಿಗಳ ಕೋಪಕ್ಕೀಡಾಗಿದ್ದೆ. ಆಗ ನಾನು ಕೂಡ ಬಿಸಿ ರಕ್ತದ ತರುಣನಾಗಿದ್ದರಿಂದ ಇಂತಹ ಕೋಪಕ್ಕೆಲ್ಲ ಕ್ಯಾರೇ ಅಂದಿರಲಿಲ್ಲ.

ಆರು ತಿಂಗಳ ಕಾಲ ಕಾಲೇಜ್ ಬಾಗಿಲು ಮುಚ್ಚಿದ್ದರಿಂದ ನಾನೇನು ಸುಮ್ಮನೆ ಮನೆಯಲ್ಲಿ ಕೂರಲಿಲ್ಲ, ಬದಲಾಗಿ ಸ್ನೇಹಿತರ ಜೊತೆ ಪ್ರತಿದಿನ ನಮ್ಮ ನೆಚ್ಚಿನ ಅಡ್ಡೆಗಳಲ್ಲಿ ಕಾಫಿ ಕುಡಿಯುತ್ತಾ, ಹರಟೆಹೊಡೆಯುತ್ತಾ ಕಾಲ ಕಳೆದೆ.

ಅಂದಹಾಗೆ ನಾನು ಈ ಕಾಲೇಜಿನಲ್ಲಿದ್ದಾಗಲೇ ಒಮ್ಮೆ ವಿದೇಶ ಪ್ರವಾಸವನ್ನು ಏರ್ಪಡಿಸಿದ್ದರು. ಮಲೇಶಿಯಾ, ಥಾಯ್ಲೆಂಡ್, ಸಿಂಗಾಪುರ್, ಸಿಲೋನ್ ಮತ್ತು ಮಾಲ್ಡೀವ್ಸ್.... ಈ ಐದು ದೇಶಗಳಲ್ಲಿ ಪ್ರವಾಸ ಮಾಡಲು ನಾನಂತೂ ತುದಿಗಾಲಲ್ಲಿ ನಿಂತಿದ್ದೆ. ಅಪ್ಪಾಜಿ ಮತ್ತು ಅಮ್ಮ ನನ್ನ ಆಸಕ್ತಿಗೆ ನೀರೆರಚದೆ "ಹೋಗಿ ಬಾ" ಎಂದು ಹುರಿದುಂಬಿಸಿದರು. ನನ್ನೊಂದಿಗೆ ಇಬ್ಬರು ಕಸಿನ್ಸ್‌ಗಳನ್ನೂ ಕರೆದುಕೊಂಡು ಹೋಗಲು ಅನುಮತಿ ನೀಡಿದರು. ಈ ಪ್ರವಾಸಕ್ಕೆ ಹೊರಟು ನಿಂತ ಒಟ್ಟು ಹದಿನೈದು ಜನರಲ್ಲಿ ನಮ್ಮ ಮನೆಯಿಂದ ಮೂವರಿದ್ದೆವು. ಆಗ ಈ ಪ್ರವಾಸಕ್ಕೆ ನಾವು ನೀಡಿದ್ದು ಕೇವಲ ಐದು ಸಾವಿರದ ಆರುನೂರು ರೂಪಾಯಿಗಳು.

ವಿದೇಶಕ್ಕೆ ನಾನು ಹೋದದ್ದು ಅದೇ ಮೊದಲನೆ ಸಲ. ಅಷ್ಟೇ ಅಲ್ಲ, ಅಪ್ಪಾಜಿ ಮತ್ತು ಅಮ್ಮ ಜೊತೆಗಿಲ್ಲದೆ ಬೇರೆ ಊರಿಗೆ ಹೋದದ್ದೂ ಅದೇ ಪ್ರಥಮ ಬಾರಿ. ಹೀಗಾಗಿ ಪ್ರವಾಸಕ್ಕೆ ಹೊರಟಾಗ ನನ್ನಲ್ಲಿ ಸಂತೋಷವೆಷ್ಟಿತ್ತೋ ಅಷ್ಟೇ ಆತಂಕವೂ ಇತ್ತು, ಯಾಕೆಂದರೆ ಹೊರದೇಶದಲ್ಲಿ ಯಾವುದು ಹೇಗಿರುತ್ತದೋ ಎಂಬ ಭಯ ನನ್ನನ್ನು ಆವರಿಸಿತ್ತು.

ಆದರೆ ನಾನು ಆ ವಿದೇಶ ಪ್ರವಾಸವನ್ನು ತುಂಬಾ, ತುಂಬಾ ಎಂಜಾಯ್ ಮಾಡಿದೆ. ಇದು ನಡೆದದ್ದು ಇಪ್ಪತ್ತೈದು ವರ್ಷಗಳ ಹಿಂದೆ ಆದರೂ ನನಗಿನ್ನೂ ಆ ಪ್ರವಾಸದ ದಿನಗಳು ನೆನಪಿವೆ. ಹೊಸ ಜಾಗ, ಜನ, ಭಾಷೆ, ಸದ್ದು, ದೃಶ್ಯ.... ಎಲ್ಲವೂ ರೋಮಾಂಚಕಾರಿಯಾಗಿತ್ತು, ನಮ್ಮ ಜೊತೆ ಇಬ್ಬರು ಪ್ರಾಧ್ಯಾಪಕರುಗಳು ಬಂದಿದ್ದರೂ, ಅವರು ಎಂದೂ ನಮ್ಮ ಓಡಾಟಕ್ಕೆ ಅಡ್ಡಿ ಮಾಡಲೇ ಇಲ್ಲ, ಬದಲಿಗೆ ಅವರೂ ನಮ್ಮೊಂದಿಗೆ ಬೆರೆತು ಕಾಲೇಜು ಹುಡುಗರಂತೆ ಎಂಜಾಯ್ ಮಾಡಿದರು. ಅವರು ಪ್ರಾಧ್ಯಾಪಕರು ಎಂಬ ಭಾವನೆಯೇ ಬಾರದಂತೆ ನಮ್ಮೊಂದಿಗೆ ಬೆರೆತರು.

ಎಲ್ಲರಂತೆ ನಾನೂ ಕೂಡ ಸಿಂಗಾಪೂರ್ ಮತ್ತು ಮಲೇಶಿಯಾಗಳ ಶ್ರೀಮಂತಿಕೆ ಮತ್ತು ವೈಭವಕ್ಕೆ ಮಾರುಹೋದೆ. ನಮ್ಮ ದೇಶ ಯಾವಾಗ ಇಷ್ಟೊಂದು ಕಂಗೊಳಿಸುವುದು? ನಾವು ಮಾತ್ರ ಯಾಕೆ ಬಡತನದಲ್ಲಿದ್ದೇವೆ? ಎಂಬ ಪ್ರಶ್ನೆಗಳು ನನ್ನನ್ನು ಕಾಡಿದವು. ಆದರೆ ಈ ಪ್ರಶ್ನೆಗಳು ಇವತ್ತಿಗೂ ಪ್ರಶ್ನೆಗಳಾಗಿಯೇ ಉಳಿದಿವೆ.....

ನಾವು ಈ ವಿದೇಶ ಪ್ರವಾಸ ಮುಗಿಸಿ ಹಿಂತಿರುಗಿದ ನಂತರ ಕಾಲೇಜು ಪುನರಾರಂಭಗೊಂಡಿತು. ಆದರೆ ಹೀಗೆ ಮತ್ತೆ ಆರಂಭವಾದ ಎರಡೇ ತಿಂಗಳಲ್ಲಿ ಪರೀಕ್ಷೆಗಳು ನಡೆಯಲಿದ್ದವು. ನಮ್ಮ ಬಿಕ್ಕಟ್ಟು ಯಾವುದಾಗಿತ್ತೆಂದರೆ, ಯಾವ ಪ್ರಾಧ್ಯಾಪಕರೂ ತಮ್ಮ ಸಿಲಬಸ್‌ಅನ್ನು ಸಂಪೂರ್ಣಗೊಳಿಸಿರಲಿಲ್ಲ, ಸರಿಯಾಗಿ ಪಾಠ ಮಾಡಿರಲಿಲ್ಲ, ಅಷ್ಟೇ ಅಲ್ಲ, ಮೊದಲ ಸೆಮಿಸ್ಟರ್ ಮತ್ತು ಎರಡನೇ ಸೆಮಿಸ್ಟರ್ ಪರೀಕ್ಷೆಗಳನ್ನು ಒಟ್ಟಿಗೆ ತೆಗೆದುಕೊಳ್ಳಬೇಕಿತ್ತು.

ಹಾಗಂತ ನಾವು ಸುಮ್ಮನೆ ಕುಳಿತುಕೊಳ್ಳುವಂತಿರಲಿಲ್ಲ, ಎರಡೂ ಸೆಮಿಸ್ಟರ್‌ಗಳ ಎಲ್ಲಾ ಪಠ್ಯ ಪುಸ್ತಕಗಳನ್ನು ನಾವೇ ಓದಿ ಪರೀಕ್ಷೆ ಬರೆಯಬೇಕಾದ ಅನಿವಾರ್ಯತೆ ನಮ್ಮ ಮುಂದಿತ್ತು. ಆದರೂ ಒಂದು ತಿಂಗಳಲ್ಲೇ ಇಂಗ್ಲಿಷ್, ಹಿಂದಿ, ಕೆಮಿಸ್ಟ್ರಿ ಮೇಜರ್ ಮತ್ತು ಫಿಸಿಕ್ಸ್ ಇವುಗಳನ್ನು ಓದಲು ಸಿದ್ಧನಾದೆ. ಒಂದೊಂದು ವಿಷಯಕ್ಕೆ ಎಂಟೆಂಟು ದಿನಗಳನ್ನು ಮೀಸಲಿಟ್ಟೆ. ನಿಜ ಹೇಳ್ತೀನಿ, ಆ ಒಂದು ತಿಂಗಳ ಕಾಲ ನಾನು ಪಟ್ಟ ಶ್ರಮ ಅಷ್ಟಿಷ್ಟಲ್ಲ, ಹಗಲು, ರಾತ್ರಿ ವ್ಯತ್ಯಾಸವಿಲ್ಲದಂತೆ, ಆಹಾರ, ನಿದ್ದೆಗಳ ಪರಿವೆಯೇ ಇಲ್ಲದಂತೆ ಓದಿದೆ. ನನಗಾಗ ಇದ್ದ ಏಕೈಕ ಗುರಿ ಹೇಗಾದರೂ ಮಾಡಿ ಪರೀಕ್ಷೆಗಳಲ್ಲಿ ಪಾಸಾಗುವುದು.

ಕೊನೆಗೂ ಪರೀಕ್ಷೆಯ ಫಲಿತಾಂಶ ಹೊರಬಿದ್ದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ, ಯಾಕೆಂದರೆ ನಾನು ಶೇ. 50 ಮಾರ್ಕ್ಸ್‌ಗಳನ್ನು ಪಡೆದು ಪಾಸಾಗಿದ್ದೆ. ಪ್ರಾಧ್ಯಾಪಕರು ಪಾಠ ಮಾಡಿರಲಿಲ್ಲ, ನೋಟ್ಸ್ ಕೊಟ್ಟಿರಲಿಲ್ಲ, ಆರು ತಿಂಗಳ ಕಾಲ ತರಗತಿಯೇ ನಡೆದಿರಲಿಲ್ಲ, ಆದರೂ ನಾನು ಪಾಸಾಗಿದ್ದೆ!

ಹೀಗೆ ಎರಡನೇ ವರ್ಷದ ಡಿಗ್ರಿಗೆ ನಾನು ಕಾಲಿಟ್ಟಾಗ ನನ್ನನ್ನು ಹೀರೋ ಮಾಡಲು ಒಬ್ಬ ಪ್ರಸಿದ್ಧ ನಿರ್ದೇಶಕರು ಮುಂದೆ ಬಂದರು. ಅವರು ಬಂದಾಗ ಅಪ್ಪಾಜಿ ಮತ್ತು ನಾನು ಏನು ಹೇಳಿದೆವು ಗೊತ್ತಾ? ಆ ನಿರ್ದೇಶಕರು ಯಾರು ಗೊತ್ತಾ?....

(ಮುಂದುವರೆಯುವುದು)

ಶಾಟ್ ಕಟ್

ಬೆತ್ತಲಾಗದೆ ಬಯಲು ದಕ್ಕದು!



ಇದು ಪಮೇಲಾ ಅಂಡರ್‌ಸನ್ ಎಂಬ ಹಾಲಿವುಡ್ ಬಾಂಬ್‌ಶೆಲ್‌ನ ಹೊಸ ಮಂತ್ರವಂತೆ!

ಪಮೇಲಾ ಪುಟ್ಟಿಗೆ ಬೆತ್ತಲಾಗುವುದೇನೂ ಹೊಸದಲ್ಲ... ಆದರೀಗ ಆಕೆ ಪ್ರಾಣಿಗಳ ಪರವಿರುವ PETA ಚಳವಳಿಯ ಮುಂದಾಳು!

'ಜೆನ್ನಿಫರ್ ಲೊಪೆಜ್‌ನಂತವರೂ ಪ್ರಾಣಿಗಳ ಉಣ್ಣೆಯಿಂದ ತಯಾರಿಸಿದ ಡ್ರೆಸ್ ಧರಿಸುವುದು ಬೇಸರ ತರಿಸುತ್ತದೆ' ಎನ್ನುವ ಪಮೇಲಾ ಈಗ ಉಣ್ಣೆಯ ಡ್ರೆಸ್‌ಗಳನ್ನು ಧರಿಸದಿರಿ ಎಂಬ ಜಾಹೀರಾತಿನಲ್ಲಿ ಮಿಂಚುತ್ತಿದ್ದಾಳೆ.

`We'd rather bare skin
Than wear skin'

'ಚರ್ಮವನ್ನು ಧರಿಸುವುದಕ್ಕಿಂತ ಬೆತ್ತಲೆಯಾಗಿರುವುದೇ ಲೇಸು'. ಹೇಗಿದೆ ಪಮೇಲಾ ಪಾಠ?

ಕಿಡ್‌ಮನ್ ಹಿಂದೆ 'ಪ್ಲೇಬಾಯ್'

'ಪ್ಲೇಬಾಯ್' ಮ್ಯಾಗಜಿನ್‌ನ ಬಾಸ್ ಹೆಫ್ನರ್ `The Blue Room' ಚಿತ್ರದಲ್ಲಿ ನಿಕೋಲೆ ಕಿಡ್‌ಮನ್‌ಳ ನಗ್ನ ದೇಹ ನೋಡಿದಾಗಿನಿಂದ ನಿದ್ದೆಯನ್ನೇ ಮಾಡುತ್ತಿಲ್ಲವಂತೆ.

ಆಸ್ಟ್ರೇಲಿಯಾದ ಈ ನೀಲಿಗಣ್ಣುಗಳ ಚೆಲುವೆ 1999 ರಲ್ಲಿ 'ಬ್ರಾಡ್‌ವೇ' ಮ್ಯಾಗಜಿನ್‌ನ ಕವರ್‌ಗೆ ಬೆತ್ತಲೆ ಪೋಸು ಕೊಟ್ಟಿದ್ದಳು.



ಈಗ 'ಪ್ಲೇಬಾಯ್' ಬಾಸ್ ಹೆಫ್ನರ್ 'ಪ್ಲೇ ಬಾಯ್'ಗೆ ನಿಕೋಲೆ ಕಿಡ್‌ಮನ್ ಬೆತ್ತಲೆ ಪೋಸು ಕೊಡಲೇಬೇಕೆಂದು ಗಂಟುಬಿದ್ದಿದ್ದಾನಂತೆ. ಆತನ ಬಯಕೆ ಈಡೇರಲಿ ಎನ್ನುವುದು ಪಡ್ಡೆಗಳ ಮಾತಂತೆ!

R.B.P. LANKESH, Kannada Weekly Price Rs. 10/- 23-8-2006 RNI No. KARKAN2005/14648 Regd.No.KA/BG(S)/2036/2005-



'ಕುಮಾರರಾಮ'ನ ಸೋಲು

'ಗಂಡುಗಲಿ ಕುಮಾರರಾಮ' ಈಗ ಹೊಸ ರೂಪ ಪಡೆದಿದೆ. ಮೊದಲ ವಾರ ಪ್ರೇಕ್ಷಕರ, ಜನರ ಅಭಿಪ್ರಾಯ ಕೇಳಿದ ನಂತರ ನಿರ್ದೇಶಕ ಭಾರ್ಗವ ಈಗ ಆರು ನಿಮಿಷಗಳ ದೃಶ್ಯವನ್ನು ಕತ್ತರಿಸಿ ಬಿಸಾಕಿಬಿಟ್ಟಿದ್ದಾರೆ. ಆದರೆ ಇದರಿಂದ ಅಂತಹ ಮಹತ್ತರ ಬದಲಾವಣೆಯೇನೂ ಬಾಕ್ಸ್ ಆಫೀಸಿನಲ್ಲಿ ಕಾಣಿಸಿಕೊಂಡಿಲ್ಲ.

'ಗಂಡುಗಲಿ ಕುಮಾರರಾಮ' ಬಾಕ್ಸ್ ಆಫೀಸಿನಲ್ಲಿ ಅಮೋಘವಾಗಿ ನೆಲಕಚ್ಚಿದೆ. ಈ ಬಗ್ಗೆ ಇದೀ ಚಿತ್ರರಂಗವೇ ದಿಗ್ಭ್ರಮೆ ವ್ಯಕ್ತಪಡಿಸಿದೆ. ಕನ್ನಡ ಸಂಸ್ಕೃತಿಯನ್ನು ಎತ್ತಿಹಿಡಿಯುವ ಇಂತಹ ಐತಿಹಾಸಿಕ ಚಿತ್ರ ಗೆಲ್ಲಬೇಕಿತ್ತು ಎಂದೇ ಎಲ್ಲರೂ ಮಾತನಾಡುತ್ತಿದ್ದಾರೆ. ಸಾಧಾರಣವಾಗಿ ಚಿತ್ರವೊಂದು ನೆಲಕಚ್ಚಿದರೆ ಸಂತೋಷ ಪಡುವವರೇ ಕನ್ನಡ ಚಿತ್ರರಂಗದಲ್ಲಿ ಹೆಚ್ಚು. ಆದರೆ ಇದೇ ಮೊದಲ ಬಾರಿಗೆ ಗಾಂಧಿನಗರದವರೆಲ್ಲಾ 'ಕುಮಾರರಾಮ'ನ ಬಗ್ಗೆ ಸಿಂಪಥಿ ವ್ಯಕ್ತಪಡಿಸುತ್ತಿದ್ದಾರೆ.



ನಾ-ಝೀ ಅಟ್ಯಾಕ್

ಕ್ರೇಜಿ ಸ್ಟಾರ್ ರವಿಚಂದ್ರನ್ ಅವರ ಹೊಸ ಕ್ರೇಜಿ ಆಟ ಶುರುವಾಗಿದೆ. ಈ ಬಾರಿಯ ಆಟಕ್ಕೆ ಅವರು ಆಯ್ಕೆ ಮಾಡಿಕೊಂಡಿರುವುದು ಝೀ ಟೀವಿ ಚಾನೆಲ್‌ಅನ್ನು.

ಸದ್ಯದಲ್ಲೇ ಅವರು ಆರಂಭಿಸಲಿರುವ 'ನಾ' ಎಂಬ ಹೊಸ ಚಿತ್ರಕ್ಕೆ ಸಂಬಂಧಪಟ್ಟಂತೆ ಕ್ರೇಜಿ ಸ್ಟಾರ್ ಝೀ ಟೀವಿಯಲ್ಲಿ ಕಾರ್ಯಕ್ರಮ ಪ್ರಾರಂಭಿಸಲಿದ್ದಾರೆ. ಆ ಕಾರ್ಯಕ್ರಮದ ಮುಖಾಂತರ 'ನಾ' ಚಿತ್ರಕ್ಕೆ ಬೇಕಾದ ಕಲಾವಿದರನ್ನು, ತಂತ್ರಜ್ಞರನ್ನು, ಬರಹಗಾರರನ್ನು, ಗಾಯಕರನ್ನು ಆಯ್ಕೆ ಮಾಡಲಿದ್ದಾರೆ. ಇದೊಂದು ರೀತಿಯಲ್ಲಿ ಪ್ರತಿಭಾ ಶೋಧ ಕಾರ್ಯಕ್ರಮ.

ಈ ಕಾರ್ಯಕ್ರಮದ ಪ್ರತಿ ಎಪಿಸೋಡಿಗೆ ರವಿಚಂದ್ರನ್ ಅವರಿಗೆ ಝೀ ಟೀವಿ ನಾಲ್ಕು ಲಕ್ಷ ರೂಪಾಯಿ ಸಂಭಾವನೆ ನೀಡಲಿದೆ. ಈ ಕಾರ್ಯಕ್ರಮದ ಮೂಲಕವಾದರೂ ಝೀ ಟೀವಿ ಲೈಮ್ ಲೈಟಿಗೆ ಬರಲು ಪ್ರಯತ್ನಿಸುತ್ತಿದೆ. ಅವರ ಪ್ರಯತ್ನವೇನೋ ಮೆಚ್ಚುವಂಥದ್ದೇ. ಆದರೆ ಇದು ಎಷ್ಟರಮಟ್ಟಿಗೆ ಸಕ್ಸಸ್ ಆಗುತ್ತೆ ಎಂಬುದನ್ನು ನೋಡಬೇಕಾಗಿದೆ. ಅದೇನೇ ಇರಲಿ, ಕನಿಷ್ಠ ಈ ಕಾರ್ಯಕ್ರಮದಿಂದ ಒಂದಷ್ಟು ಹೊಸ ಪ್ರತಿಭೆಗಳು ದೊರೆಯುವಂತಾಗಲಿ ಎಂಬುದೇ ನಮ್ಮ ಆಶಯ.

ಅದಿ ತಲ್ಲಿ - ಇದು ತಾಯಿ!



ಇಬ್ಬರು ತಾಯಂದಿರ ವಿಚಿತ್ರ ಕತೆ ಇಲ್ಲಿದೆ. ಒಬ್ಬಾಕೆ ತೆಲುಗು ತಾಯಿ; ಮತ್ತೊಬ್ಬಾಕೆ ಕನ್ನಡ ತಾಯಿ. ಎರಡೂ ಚಿತ್ರಗಳಲ್ಲಿ ಈ ತಾಯಂದಿರ ಮಗನಾಗಿ ಶಿವರಾಜ್‌ಕುಮಾರ್ ನಟಿಸುತ್ತಿದ್ದಾರೆ.

'ತಾಯಿಯ ಮಡಿಲು' ಚಿತ್ರದಲ್ಲಿ ತೆಲುಗಿನ ಜಯಸುಧಾ ತಾಯಿಯಾಗಿ ನಟಿಸುತ್ತಿದ್ದಾರೆ. ಈ ಪಾತ್ರ ಮಾಡಲು ಆಕೆ ಒಪ್ಪದಿದ್ದರೂ ಆಕೆಗೆ ದಮ್ಮಯ್ಯ-ದಪ್ಪಯ್ಯ ಎಂದು ಕಾಡಿ ಬೇಡಿ ನಿರ್ದೇಶಕ ಎಸ್. ನಾರಾಯಣ್ ಆಕೆಯನ್ನು ಕರೆದುಕೊಂಡು ಬಂದಿದ್ದಾರೆ. "ತಾಯಿ ಪಾತ್ರ ಮಾಡಲು ಕನ್ನಡದಲ್ಲಿ ಯಾರೂ ಸಿಗುವುದಿಲ್ಲ, ಹೀಗಾಗಿ ನಾನು ಆಕೆಯನ್ನು ಬೇಡಬೇಕಾಯಿತು." ಇದು ನಿರ್ದೇಶಕ ನಾರಾಯಣ್ ನೀಡಿದ ಸಬೂಬು.

ಶಿವರಾಜ್‌ಕುಮಾರ್ ನಟಿಸುತ್ತಿರುವ 'ಸಂತ' ಚಿತ್ರದಲ್ಲೂ ಒಂದು ತಾಯಿಯ ಪಾತ್ರವಿದೆ. ಈ ಪಾತ್ರಕ್ಕೆ ನಾಯಕಿ ಶೃತಿ ಅವರ ತಾಯಿಯನ್ನು ಆಯ್ಕೆ ಮಾಡಲಾಗಿದೆ. ಸ್ವತಃ ಶೃತಿಯೇ ಈಗ ತಾಯಿಯಾಗಿ ನಟಿಸುತ್ತಿರುವಾಗ ಆಕೆಯ ಅಮ್ಮನಿಗೆ ತಾಯಿಯ ಪಾತ್ರದಲ್ಲಿ ನಟಿಸಲು ಅವಕಾಶ ಸಿಕ್ಕಿದ್ದನ್ನು ನೋಡಿ ಅವರ ಮನೆಯವರಿಗೆಲ್ಲಾ ಆಶ್ಚರ್ಯವಾಗಿದೆ. ಅವರು ಮೂಲತಃ ರಂಗಭೂಮಿ ನಟಿಯಾದರೂ ಸಿನಿಮಾದಲ್ಲಿ ನಟಿಸುತ್ತಿರುವುದು ಇದೇ ಮೊದಲ ಬಾರಿ. ಈಕೆಯನ್ನು ಆಯ್ಕೆ ಮಾಡಿದ್ದು ಬೇರೆ ಯಾರೂ ಅಲ್ಲ, ನಾಯಕ ನಟ ಶಿವರಾಜ್‌ಕುಮಾರ್. ಅಂದಹಾಗೆ ಶೃತಿಯ ಇಬ್ಬರು ತಾಯಂದಿರು ಅವಳಿ-ಜವಳಿಗಳು. ಅವರಲ್ಲಿ ಒಬ್ಬರು ಶೂಟಿಂಗ್ ಅಮ್ಮ, ಇನ್ನೊಬ್ಬರು ಮನೆಯ ಅಮ್ಮ. ಈ ಇಬ್ಬರಲ್ಲಿ ಯಾರು ನಟಿಸುತ್ತಿದ್ದಾರೆ ಎಂಬುದು ಮಾತ್ರ ಗೊತ್ತಿಲ್ಲ.



ಸೂರ್ಯ-ಜ್ಯೋತಿ ನಗ್ಮಾಗೊಂದು ಪತಿ!

ಅಕ್ಕ-ತಂಗಿಯರ ನಡುವಿನ ಸ್ಪರ್ಧೆ ಹೀಗೂ ಇರುತ್ತದೆಯಾ?

ನಿಮಗೆ ತಮಿಳಿನ ನಗ್ಮಾ ಮತ್ತು ಜ್ಯೋತಿಕಾ ಗೊತ್ತಿರಬೇಕು. ಯಾಕೆಂದರೆ ಡಬ್ಬಲ್ ಡೆಕ್ಕರ್ ಥರ ಊದಿಕೊಂಡಿರುವ ಈ ತಮಿಳು ಸಿಸ್ಟರ್ಸ್ ಕನ್ನಡದಲ್ಲಿ ಸಾಕಷ್ಟು ಚಿತ್ರಗಳಲ್ಲಿ ನಟಿಸಿದವರು.

ನಗ್ಮಾ ಬಹಳ ಹಿಂದೆಯೇ ನಾಯಕಿಯಾದವಳು. ಅಷ್ಟೇ ಬೇಗ ಪೆವಿಲಿಯನ್‌ಗೂ ಮರಳಿದವಳು. ಹಾಗೆ ಪೆವಿಲಿಯನ್‌ಗೆ ಹೋಗುವ ಮಧ್ಯೆ ಕ್ರಿಕೆಟ್ ಆಟಗಾರ ಗಂಗೂಲಿ ಜೊತೆ ಇವಳ ಹೆಸರು ಗಾಸಿಪ್ ಕಾಲಂಗಳಲ್ಲಿ ರಾರಾಜಿಸಿತ್ತು.


ನಗ್ಮಾ ಮನೆಗೆ ಹೋಗುವಾಗ ಈಕೆಯ ತಂಗಿ ಜ್ಯೋತಿಕಾ ಚಿತ್ರರಂಗಕ್ಕೆ ಎಂಟ್ರಿಯಾದಳು. ಬಂದವಳೇ ಒಂದು ರೀತಿಯ ಹವಾವನ್ನು ಎಬ್ಬಿಸಿದಳು. ಈಗ ಜ್ಯೋತಿಕಾ ತಮಿಳಿನ ಜನಪ್ರಿಯ ನಟ ಸೂರ್ಯನ ಜೊತೆ ಮದುವೆಯಾಗಿದ್ದಾಳೆ. ಇದನ್ನು ನೋಡಿಯೋ ಏನೋ, ಆಕೆಗಿಂತ ತಾನೇನು ಕಡಿಮೆ ಎಂಬಂತೆ ನಗ್ಮಾ ಕೂಡ ಮದುವೆ ಅನೌನ್ಸ್ ಮಾಡಿದ್ದಾಳೆ. ಈಕೆಯ ಕೈ ಹಿಡಿಯುವವನು ಕೂಡ ನಾಯಕ ನಟ. ಆದರೆ ತಮಿಳಿನವನಲ್ಲ, ದೂರದ ಜೋಧ್‌ಪುರ್ ಭಾಷೆಯ ನಟ. ಆತನೊಂದಿಗೆ ಈಗಾಗಲೇ ಹತ್ತು ಚಿತ್ರದಲ್ಲಿ ನಟಿಸಿರುವ ನಗ್ಮಾ ಆತನೊಂದಿಗೆ ಅಲ್ಲಿಯ ಪತ್ರಿಕೆಗಳಿಗೆ ಆಹಾರವಾಗಿದ್ದಳು.

'ರವಿಶಾಸ್ತ್ರಿ'ಯಾದ 'ಬ್ರಾಹ್ಮಣ'

ರವಿಚಂದ್ರನ್ ನಟಿಸುತ್ತಿರುವ 'ಬ್ರಾಹ್ಮಣ' ಚಿತ್ರದ ಬಗ್ಗೆ ಮುಂದೊಂದು ದಿನ ಬ್ರಾಹ್ಮಣರು ವಿರೋಧ ವ್ಯಕ್ತಪಡಿಸ ಬಹುದು ಎಂಬ ಅಂಜಿಕೆ ನಿರ್ಮಾಪಕ ಸಂದೇಶ್ ನಾಗರಾಜ್ ಅವರದಾಗಿತ್ತು, ಆ ಕಾರಣ ದಿಂದಲೇ ಅವರು ತಮ್ಮ ಚಿತ್ರಕ್ಕೆ ಈಗ 'ಬ್ರಾಹ್ಮಣ' ಬದಲಿಗೆ 'ರವಿಶಾಸ್ತ್ರಿ' ಎಂದು ಪುನರ್‌ನಾಮಕರಣ ಮಾಡಿದ್ದಾರೆ.



ಅಶ್ವಥ್: ಮತ್ತದೇ ಕರ್ಕಶರಾಗ



'ಕನ್ನಡವೇ ಸತ್ಯ' ಎಂದು ಬಿಟ್ಟಿ ಪ್ರಚಾರ ಪಡೆದಿರುವ ಸಿ. ಅಶ್ವಥ್ ಈಗ ಸಂಗೀತ ಪ್ರಿಯರ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಇದಕ್ಕೆ ಕಾರಣ ಇಷ್ಟೇ: 'ಜೈ ಭಾರತ ಜನನಿಯ ತನುಜಾತೆ....'ಗೆ ತಾವು ಸಂಯೋಜಿಸಿರುವ ಸಂಗೀತವನ್ನೇ ಬಳಸಬೇಕೆಂದು ಅಶ್ವಥ್ ಸರಕಾರಕ್ಕೆ ಆಗ್ರಹಿಸಿದ್ದಾರೆ.

ಅಶ್ವಥ್ ಅವರ ಈ ಸ್ವಾರ್ಥವನ್ನು ವಿರೋಧಿಸಿ ಶಿವಮೊಗ್ಗ ಸುಬ್ಬಣ್ಣ ನೇತೃತ್ವದಲ್ಲಿ ಅನೇಕ ಕಲಾವಿದರು ಮತ್ತು ಗಾಯಕರು, ಈ ಹಾಡಿಗೆ ಮೈಸೂರು ಅನಂತಸ್ವಾಮಿಯವರು ಸಂಯೋಜಿಸಿದ್ದ ಸಂಗೀತವನ್ನೇ ಬಳಸಬೇಕೆಂದು ಸರಕಾರವನ್ನು ಆಗ್ರಹಿಸಿದ್ದಾರೆ. ಅಂತೂ ಸಂಗೀತ ಲೋಕದಲ್ಲೂ ವಿವಾದದ ಅಲೆ ಸೃಷ್ಟಿಯಾಗಿದೆ. ಈ ಅಲೆಯಲ್ಲಿ ಈ ಬಾರಿ ಅಶ್ವಥ್ ಕೊಚ್ಚಿಹೋದರೂ ಆಶ್ಚರ್ಯವಿಲ್ಲ.

ಮಾಳವಿಕಾ 'ಝೀ'

ಟಿ.ಎನ್. ಸೀತಾರಾಮ್‌ರವರ 'ಮಾಯಾಮೃಗ' ದಿಂದ 'ಮುಕ್ತ'ತನಕ ಹಲವಾರು ಧಾರಾವಾಹಿಗಳಲ್ಲಿ ಕಾಣಿಸಿಕೊಂಡು ಜನಪ್ರಿಯವಾಗಿರುವ ನಟಿ ಮಾಳವಿಕಾ ಈಗ ಹೊಸ ಅವತಾರದಲ್ಲಿ ಕಾಣಿಸಿಕೊಳ್ಳುತ್ತಿದ್ದಾಳೆ.



ಹೊಸದಾಗಿ ಆರಂಭವಾಗಿರುವ ಝೀ ಟೀವಿ ಚಾನೆಲ್‌ನ ಮುಖ್ಯಸ್ಥೆಯಾಗಿ ಈಕೆ ಆಯ್ಕೆಯಾಗಿದ್ದಾಳೆ. ಕರ್ನಾಟಕದಲ್ಲಿ ಮಹಿಳೆಯೊಬ್ಬಳು ಇಂತಹ ಕ್ರಿಯೇಟಿವ್ ಸ್ಥಾನಕ್ಕೆ ಆಯ್ಕೆಯಾಗಿರುವುದು ಇದೇ ಮೊದಲು. ಎನಿಸುತ್ತೆ. ಈಗ ಮಾಳವಿಕಾ ಆಗಮನದಿಂದ ಝೀ ಟಿವಿಯಲ್ಲಿ ಏನೇನು ಬದಲಾವಣೆಗಳಾಗುತ್ತವೆ ಎಂಬುದನ್ನು ಇತರ ಚಾನೆಲ್‌ನವರು ಕುತೂಹಲದಿಂದ ಎದುರು ನೋಡುತ್ತಿದ್ದಾರೆ. ಅಷ್ಟೇ ಕುತೂಹಲದಿಂದಿದ್ದಾರೆ ಆಕೆಯ ಪತಿ ಅವಿನಾಶ್!

PRINTER, PUBLISHER, PROPRIETOR AND EDITOR : GAURI LANKESH, No. 9, 1st Floor, E.A.T.Street, Basavanagudi, Bangalore -4, Phone : 2667642 Fax : 26620026, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44